UNIVERSAL
LIBRARY
OU_200706
UNIVERSAL
LIBRARY

OUP 901—26-3-70—5000

# OSMANIA UNIVERSITY LIBRARY

Call No. Accession No.

Author

Title

This book should be returned on or before the date last marked below.

ಶ್ರೀಃ

ಕನ್ನಡ.

# ಅದ್ಭುತ ರಾಮಾಯಣ.

ಇದು.

[illegible] ಗೌ|| ಕನ್ನಡ ಹಾಯ್ಸ್ಕೂಲ್ ಹೆಡ್ಮಾಸ್ಟರ್

ಮ|| ರಾ|| ವೆಂಕಟಸುಬ್ಬಯ್ಯನವರಿಂದ

ಬರೆಯಲ್ಪಟ್ಟು,

ವಿದ್ಯಾನಂದ ಸಂಪಾದಕ,

ಬಿ. ಆದಿನಾರಾಯಣಶಾಸ್ತ್ರಿಯಿಂದ

ಪ್ರಕಟಿಸಲ್ಪಟ್ಟಿತು.

ಬೆಂಗಳೂರು ಸಿಟಿ

[illegible]

[illegible]

[illegible]

# ಶುದ್ಧಾಶುದ್ಧ ಪತ್ರಿಕೆ.

| ಪುಟ | ಪಂಕ್ತಿ. | ಅಶುದ್ಧ. | ಶುದ್ಧ. |
|---|---|---|---|
| 2 | 22 | ಪಾಜ್ಞ್ಯ | ಪಾಗ್ಯ |
| 9 | 1 | ಸೀಯರು | ಸ್ತ್ರೀಯರು |
| 14 | 10 | ಯಾವಾಲೂ | ಯಾವಾಗಲೂ |
| 16 | 3 | ಶ್ರೇತ್ರಾ | ಶ್ರೋತ್ರಾ |
| 17 | 15 | ಹತರಕ್ಕೆ | ಹತ್ತಿರಕ್ಕೆ |
| ,, | 27 | ವತ್ತಿಗ | ವೃತ್ತಿಗೆ |
| 21 | 11 | ಯಥಾರ್ಥ | ಯಥಾರ್ಥ |
| ,, | 13 | ನಾರದನ | ನಾರದನು |
| 27 | 2 | ವಯನಾಗಿ | ಮಯನಾಗಿ |
| 28 | 11 | ಭ್ಯಾಸ | ಅಭ್ಯಾಸ |
| 38 | 8 | ಕೇಳಿ | ಹೇಳಿ |
| 39 | 3 | ಮುನಿಗ ನ್ನೂ | ಮುನಿಗಳನ್ನೂ |
| 45 | 13 | ಸ್ವ ತಭೇದ | ಸ್ವಗತಭೇದ |
| 47 | 17 | ಕಂದರಿಯು | ಕಂಡರಿಯು |
| 48 | 15 | ಅವನಿ | ಅವನಿಗೆ |
| 49 | 16 | ಅಂತಹ | ಅಂತಃ |
| ,, | 23 | ನಾಗಿರ್ನ್ನು | ನಾನಿರು |
| 50 | 2 | ಶೀಲನಾ ಲ್ಲ | ಶೀಲನಾಗಿಲ್ಲ |
| 51 | 15 | ಯುತ್ತಿರ ವರ | ಯುತ್ತಿರುವರು |
| ,, | 20 | ಮಾಡುವಳ | ಮಾಡುವಳು |
| ,, | 23 | ರುವನ | ರುವನು |
| ,, | 26 | ರುವರ | ರುವರು |
| 52 | 6 | ಉಧಿಜ್ಜ | ಉದ್ಭಿಜ್ಜ |
| 55 | 16 | ನವಗ | ನನಗೆ |
| ,, | 21 | ವೇಲಕ್ಕ | ಮೇಲಕ್ಕೆ |
| 56 | 16 | ಯಾಗತ್ರ. | ಯಾಗತ್ರ್ಯ. |
| 62 | 18 | ಕುದ್ಧ | ಕ್ರುದ್ಧ |
| ,, | ,, | ಸಾಹಾಯಕ | ಸಾಯಕ |
| 64 | 18 | ಕೊಟ್ಟ | ತೊಟ್ಟು |
| 66 | 25 | ಅಭಿನಮಿಸಿದರು. | ಅಭಿನಂದಿಸಿದರು. |
| 67 | 8 | ಕೇಳುವಲ್ಲಿ | ಕೇಳುವರೋ |
| 68 | 2 | ಅವನಸದಳ | ಅವನ ಸ್ಥಳ. |

# ಪೀಠಿಕೆ

ಈ ಅದ್ಭುತರಾಮಾಯಣವು ಹೆಸರಿಗೆತಕ್ಕಂತೆ ಓದುತ್ತೋದುತ ಆಶ್ಚರ್ಯವನ್ನು ಉಂಟುಮಾಡುವುದು. ಪ್ರಾರಂಭಿಸಿದರೆ ಕೊನೆಯವರೆಗೂ ಓದಿನೋಡಬೇಕೆಂಬ ಆಶೆಯನ್ನು ಹುಟ್ಟಿಸುತ್ತದೆ. ಸಂಸ್ಕೃತದಲ್ಲಿ ಅದ್ಭುತರಾಮಾಯಣವು ರಚಿಸಲ್ಪಟ್ಟಿದ್ದರೂ, ಹಳೆಗನ್ನಡದ ಪರಿಚಯವಿಲ್ಲದವರಿಗಾಗಿ ಸಂಸ್ಕೃತದ ಮೂಲವನ್ನು ಇಟ್ಟುಕೊಂಡು ಹೊಸಕನ್ನಡಕ್ಕೆ ತರ್ಜುಮೆ ಮಾಡಲ್ಪಟ್ಟಿರುವುದು. ಇದರಲ್ಲಿ ೨೭ ಅಧ್ಯಾಯಗಳಿವೆ. ಸಂಸ್ಕೃತದಲ್ಲಿರುವ ಸೀತಾಸಹಸ್ರನಾಮವೆಂಬ ಶ್ಲೋಕರೂಪವನ್ನು ಬಿಟ್ಟು ಉಳಿದ ಭಾಗವನ್ನು ಪರಿವರ್ತಿಸಿದೆ. ಈ ಪುಸ್ತಕದಲ್ಲಿ ನಾರದರಸಂಗೀತ ವಿದ್ಯಾಭ್ಯಾಸವೂ, ವೇದಾಂತರಹಸ್ಯಗಳೂ ಹೇಳಲ್ಪಟ್ಟಿರುವುವು. ವಾಚಕರಿಗೆ ತುಂಬಾ ಅನುಕೂಲವಾಗಿರುವಂತೆ ಸುಲಭಶೈಲಿಯಲ್ಲಿ ಬರೆಯಲ್ಪಟ್ಟಿರುವುದು. ಇದನ್ನು ರಚಿಸಿ ಶಾನೆ ದಿನಗಳಾದವು. ಈಗ ಇದರ ಪ್ರಕಾಶಕ್ಕೆ ಅವಕಾಶವನ್ನು ಕಲ್ಪಿಸಿಕೊಟ್ಟ ವಿದ್ಯಾನಂದ ಸಂಪಾದಕರು ಬ್ರ|| ಆದಿನಾರಾಯಣಶಾಸ್ತ್ರಿಗಳಿಗೆ ತುಂಬಾ ಕೃತಜ್ಞನಾಗಿರುವೆನು. ಭಾಷಾಭಿಮಾನಿಗಳು ಇದಕ್ಕೆ ಉದಾರಾಶ್ರಯವನ್ನು ಕೊಟ್ಟು ಪ್ರೋತ್ಸಾಹಿಸಬೇಕಲ್ಲದೆ ಪ್ರಾಜ್ಞರು ದಯವಿಟ್ಟು ದೋಷವಿದ್ದರೆ ತಿದ್ದಿಕೊಳ್ಳಲು ನನಗೆ ಆಜ್ಞಾಪಿಸಬೇಕಾಗಿ ಪ್ರಾರ್ಥನೆ,

18-8-1914
ಆನೇಕಲ್
ಆನಂದ ಸಂ|| ಶ್ರಾವಣ ಬ|| ದ್ವಾದಶಿ.

ಸಜ್ಜನರ ವಿಧೇಯನಾದ
ವೆಂಕಟಸುಬ್ಬಯ್ಯ,
ಮುಖ್ಯೋಪಾಧ್ಯಾಯ

ಶ್ರೀ

# ಅದ್ಭುತ ರಾಮಾಯಣ ಕಥಾಸಾರವು.

ಭಕ್ತಿಯುಕ್ತನಾದ ಭರದ್ವಾಜಮುನಿಯು ತಮಸಾತೀರದಲ್ಲಿ ತಪಸ್ಸುಮಾಡುತ್ತಿದ್ದ ವಾಲ್ಮೀಕಿಯನ್ನು ಕುರಿತು ಕೃತಾಂಜಲಿಪುಟನಾಗಿ "ಎಲೈ ಮುನಿವರನೆ! ನೀನು ಶತಕೋಟಿಪ್ರವಿಸ್ತರವಾದ ರಾಮಾಯಣವನ್ನು ರಚಿಸಿ ಬ್ರಹ್ಮಲೋಕದಲ್ಲಿ ಪ್ರಕಟಮಾಡಿರುವೆಯಷ್ಟೆ? ಅದನ್ನು ನಿತ್ಯವೂ ದೇವತೆಗಳೂ, ಭೂದೇವತೆಗಳೂ ಕೇಳಿ ಆನಂದವನ್ನೈದುತ್ತಲಿರುವರು. ಆ ರಾಮಾಯಣಗಳೊಳಗೆ ೨೪ ಸಾವಿರ ರಾಮಾಯಣಗಳು ಮಾತ್ರ ಭೂಲೋಕದಲ್ಲಿ ಪ್ರಚಾರವಾಗಿರುವುದರಿಂದ ಅದನ್ನು ನಾವೆಲ್ಲರೂ ಕೇಳಿರುವೆವು. ಶತಕೋಟಿ ವಿಸ್ತೃತವಾದ ರಾಮಾಯಣಗಳಲ್ಲಿ ಆವುದನ್ನು ಪಠಿಸಿದರೆ ನಮ್ಮ ಪಾಪಗಳೆಲ್ಲವೂ ಹೋಗಿ ನಾವು ಮುಕ್ತರಾಗುವೆವೋ ಅಂತಹ ರಾಮಾಯಣವನ್ನು ನನಗೆ ತಿಳಿಸಬೇಕು." ಎಂದು ವಿನೀತನಾಗಿ ಬೇಡಿಕೊಂಡನು. ಅದನ್ನು ಕೇಳಿ ವಾಲ್ಮೀಕಿಮುನಿಯು ಶತಕೋಟಿ ರಾಮಾಯಣಗಳನ್ನೂ ಕರತಲಾಮಲಕದಂತೆ ಧ್ಯಾನದಿಂದ ನೋಡಿ ಸಾರಭೂತವಾದ ಅದ್ಭುತರಾಮಾಯಣವನ್ನು ಹೇಳತೊಡಗಿದನು.

ಎಲೈ ಚಿರಂಜೀವಿಯಾದ ಭರದ್ವಾಜನೆ! ನೀನೀಗ ನನಗೆ ಒಳ್ಳೆಯ ವಿಷಯವನ್ನು ನೆನಪಿಗೆ ತಂದು ಬಹಳ ಹರ್ಷವನ್ನುಂಟುಮಾಡಿರುತ್ತೀಯೆ. ಶತಕೋಟಿ ರಾಮಾಯಣಗಳೊಳಗೆಲ್ಲಾ ಶ್ರೀರಾಮನ ಚರಿತ್ರೆಯು ಚೆನ್ನಾಗಿ ನಿರೂಪಿಸಲ್ಪಟ್ಟಿರುವುದು. ಮನುಷ್ಯಲೋಕದಲ್ಲಿ ಪ್ರಚಾರವಾಗಿರುವ ೨೪ ಸಾವಿರ ರಾಮಾಯಣಗಳಲ್ಲಿ ಮನುಷ್ಯರಿಗೆ ತಕ್ಕುದಾದ ರಾಮನ ಚರಿತ್ರೆಯು ಮಾತ್ರ ವಿವರವಾಗಿ ವರ್ಣಿಸಲ್ಪಟ್ಟಿರುವುದು. ಸೀತಾಮಾಹಾತ್ಮ್ಯವು ವಿಶೇಷವಾಗಿ ಹೇಳಲ್ಪಟ್ಟಿಲ್ಲ. ಶ್ರೀರಾಮಚರಿತವನ್ನೂ ಪ್ರಕೃತಿಗೆ ಮೂಲಭೂತಳಾದ ಸೀತಾದೇವಿಯ ಮಹಿಮೆಯನ್ನು ಹೇಳುವೆನು, ಸಾವಧಾನ ಮನಸ್ಕನಾಗಿ ಕೇಳು? ಇದು ಆಶ್ಚರ್ಯಗಳೊಳಗೆಲ್ಲಾ ಪರಮಾಶ್ಚರ್ಯವಾದುದಲ್ಲದೆ ಲೋಕದಲ್ಲಿ ಗೋಪ್ಯವಾಗಿರುವುದು. ಪ್ರಿಯ

ಶಿಷ್ಯನಾದ ನಿನಗೆ ಮಾತ್ರ ನಾನುಪದೇಶಿಸುವೆನು. ಜಾನಕಿಯು ಸೃಷ್ಟಿಗೆ ಮೂಲಭೂತಳು, ತಪಸ್ಸಿಗೆ ಸಿದ್ಧಿಯಂತೆಯೂ ಪಾತಿವ್ರತ್ಯಕ್ಕೆ ಮೂರ್ತಿಯಾಗಿಯೂ ಇರುವಳು, ಬ್ರಹ್ಮವಾದಿಗಳವಳನ್ನು ವಿದ್ಯೆಯೆಂದೂ ಅವಿದ್ಯೆಯೆಂದೂ ತಿಳಿಯುವರು. ಸೀತೆಯು ಗುಣಾತೀತಳಾಗಿಯೂ ಗುಣಾತ್ಮಕಳಾಗಿಯೂ ಇರುತ್ತಾಳೆ. ಈ ಚರಾಚರರೂಪವಾದ ಪ್ರಪಂಚವೆಲ್ಲವೂ ಅವಳ ವಿಲಾಸದಿಂದಲೇ ಉಂಟಾಗಿದೆ. ತತ್ವದರ್ಶಿಗಳಾದ ಯೋಗಿಗಳು ಸೀತಾಸಾಕ್ಷಾತ್ಕಾರದಿಂದಲೇ ತಮ್ಮ ಹೃದ್ಗ್ರಂಥಿಯನ್ನು ವಿಘಟಿಸಿ ಮುಕ್ತರಾಗುವರು. ಆ ಸೀತೆಯು, ಧರ್ಮಚ್ಯುತಿಯುಂಟಾದಕಾಲದಲ್ಲಿ ಪ್ರಕೃತಿಸಂಭವಳಾಗೊಗೆದು, ಲೋಕವನ್ನುದ್ಧರಿಸುವಳು. ರಾಮನು ಸಾಕ್ಷಾತ್ಪರಂಜ್ಯೋತಿಯಾಗಿಯೂ ಪರಮಪುರುಷನಾಗಿಯೂ ಇರುವನು. ಸೀತಾರಾಮರಿಗೆ ಆಕಾರದಲ್ಲಿ ಸ್ವಲ್ಪವೂ ಭೇದವೇ ಇಲ್ಲ. ರಾಮನೇ ಸೀತೆಯು, ಸೀತೆಯೇ ರಾಮಭದ್ರನು. ಅವರಿಬ್ಬರಿಗೂ ಅಣುಮಾತ್ರವೂ ಭೇದವಿಲ್ಲ. ಸತ್ಪುರುಷರು ಈ ತತ್ವವನ್ನು ತಿಳಿದು ಸಂಸಾರವನ್ನುದಾಟ ಮೃತ್ಯುವಕ್ತ್ರದಿಂದ ಬಿಡುಗಡೆಯನ್ನುಹೊಂದಿ ಮುಕ್ತರಾಗಿರುವರು. ರಾಮನು ಆಚಾರ್ಯನಾಗಿಯೂ, ನಿತ್ಯನಾಗಿಯೂ, ಸರ್ವಸಾಕ್ಷಿಯಾಗಿಯೂ, ಸರ್ವಾಂತರ್ಯಾಮಿಯಾಗಿಯೂ, ಸರ್ವಲೋಕಕರ್ತನಾಗಿಯೂ ಇರುವನು. ಆ ರಾಮಚಂದ್ರನು ಕಾಲಿಲ್ಲದೆ ನಡೆಯಬಲ್ಲನು. ಕೈಗಳಿಲ್ಲದೆ ಹಿಡಿಯಬಲ್ಲನು, ಕಣ್ಣುಗಳಿಲ್ಲದೆ ನೋಡಬಲ್ಲನು, ಕಿವಿಯಿಲ್ಲದೆ ಕೇಳಬಲ್ಲನು, ಅವನು ಪ್ರಪಂಚವನ್ನೆಲ್ಲಾ ತಿಳಿದಿರುವನು, ಅವನನ್ನು ತಿಳಿದವರು ಯಾರೂ ಇಲ್ಲ, ಆತನನ್ನು ಪುರಾಣಪುರುಷನೆಂದು ಹೇಳುವರು. ಇಂತಪ್ಪ ಸೀತಾರಾಮರು ಜನ್ಮವನ್ನೆತ್ತಲು ಹೇತುವನ್ನು ಹೇಳುವೆನು ಕೇಳು ? ರೂಪವಿಹೀನರಾದ ಅವರು ರೂಪವನ್ನೆತ್ತಿ ಮನುಷ್ಯರಿಗೆ ಅನುಗ್ರಹವನ್ನು ಮಾಡುವುದಕ್ಕಾಗಿ ಈರೀತಿ ವಿಲಾಸವುಳ್ಳವರಾಗಿದ್ದಾರೆ. ಈ ರಾಮಾಯಣವನ್ನು ವಿಪ್ರರೋದಿದರೆ ವಾಗ್ಮಿಗಳಾಗುವರು, ಕ್ಷತ್ರಿಯರೋದಿದರೆ ಚಕ್ರವರ್ತಿಗಳಾಗುವರು, ವೈಶ್ಯರೋದಿದರೆ ಸುಕೃತಶಾಲಿಗಳಾಗುವರು, ಶೂದ್ರರೋದಿದರೆ ಪೂಜ್ಯರಾಗುವರು.

ಮೊದಲನೆಯ ಅಧ್ಯಾಯವು ಮುಗಿದುದು.

## ಎರಡನೆಯ ಅಧ್ಯಾಯವು.

ಎಲೈ ಭರದ್ವಾಜನೆ ! ಶ್ರೀರಾಮಚಂದ್ರನು ಇಕ್ಷ್ವಾಕುಕುಲದಲ್ಲಿ ಹುಟ್ಟುವುದಕ್ಕೂ, ಮಹಾದೇವಿಯಾದ ಸೀತೆಯು ಭೂಮಿಯಲ್ಲಿ ಜನಿಸುವುದಕ್ಕೂ ಕಾರಣವನ್ನು ಹೇಳುವೆನು ಕೇಳು ? ಆದರೆ ಮೊದಲು ಶ್ರೀರಾಮನ ಕಥೆಯನ್ನುಪಕ್ರಮಿಸ ವೆನು. ಅಂಬರೀಷನ ಉಪಾಖ್ಯಾನಕ್ಕಾಕರವಾದ ಪುರುಷೋತ್ತಮನ ಮಹಿಮೆಯು ಸರ್ವಪಾಪವನ್ನೂ ಹೋಗಲಾಡಿಸುವುದು. ಅಂಬರೀಷನ ತಾಯಿಯಾದ ತ್ರಿಶಂಕುವಿನ ಭಾರ್ಯೆಯು ಸರ್ವಲಕ್ಷಣಸಂಪನ್ನೆಯಾಗಿಯೂ ಶೀಲವತಿಯಾಗಿಯೂ ಇರುತ್ತಿದ್ದಳು. ಆಕೆಯು, ಯೋಗನಿದ್ರೆಯನ್ನು ಹೊಂದಿ ಶೇಷಪರ್ಯಂಕದಲ್ಲಿ ಪವಡಿಸಿದ್ದ ಸರ್ವದೇವನಮಸ್ಕೃತನಾದ ನಾರಾಯಣನನ್ನು ತಮೋಗುಣದಿಂದ ಕಾಲರುದ್ರನೆಂದೂ, ರಜೋಗುಣದಿಂದ ಬ್ರಹ್ಮನೆಂದೂ, ಸತ್ವಗುಣದಿಂದ ವಿಷ್ಣುವೆಂದೂ ತಿಳಿದು ಮನೋವಾಕ್ಕಾಯಗಳಿಂದರ್ಚಿಸುತ್ತಿದ್ದಳು, ಹೂವಿನ ಮಾಲೆಗಳನ್ನು ತಾನೇ ಕಟ್ಟಿ ದೇವರಿಗೊಪ್ಪಿಸುತ್ತಿದ್ದಳು. ಗಂಧವನ್ನು ತೆಗೆಯುವುದೂ, ಧೂಪದ್ರವ್ಯಗಳನ್ನರೆಯುವುದೂ ಮುಂತಾದ ಕೆಲಸವನ್ನು ತಾನೇ ಮಾಡುತ್ತಿದ್ದಳು. ಆ ಪದ್ಮಾವತಿಯು, "ನಾರಾಯಣ ಅನಂತ" ಎಂದು ನುಡಿಯುತ್ತ ಹತ್ತುಸಾವಿರ ವರ್ಷಗಳು ತದ್ಗತವಾದ ಮನಸ್ಸುಳ್ಳವಳಾಗಿ ಗೋವಿಂದನನ್ನು ಗಂಧಪುಷ್ಪಾದಿಗಳಿಂದ ಪೂಜಿಸುತ್ತಿದ್ದಳು. ವಿಷ್ಣುಭಕ್ತರಾಗಿಯೂ ಪಾಪವರ್ಜಿತರಾಗಿಯೂ ಇದ್ದ ಮಹಾನುಭಾವರಿಗೆ ಧನಧಾನ್ಯರತ್ನಾದಿಗಳನ್ನಿತ್ತು ಅವರನ್ನು ಸಂತೋಷಪಡಿಸುತ್ತಿದ್ದಳು. ಬಳಿಕ ಯಾಪದ್ಮಾವತೀದೇವಿಯು ದ್ವಾದಶಿಯ ದಿವಸ ಉಪವಾಸವನ್ನು ಮಾಡಿ, ಪತಿಯೊಡನೆ ಹರಿಯ ಮುಂದೆ ಪವಡಿಸಿರಲು, ಆಗ ಪುರುಷೋತ್ತಮನು ಸ್ವಪ್ನದಲ್ಲಿ ಬಂದು—"ಎಲೌ ಸ್ತ್ರೀಯೆ ! ನನ್ನಿಂದ ನಿನಗಾಗಬೇಕಾದುದೇನು ? ಹೇಳು ?" ಎಂದು ಪ್ರಶ್ನೆಮಾಡಿದನು. ಅದಕ್ಕವಳು- 'ಎಲೈ ಸ್ವಾಮಿಯೆ ! ನಿನ್ನಲ್ಲಿ ಭಕ್ತಿಯುಳ್ಳವನಾಗಿಯೂ, ಚಕ್ರವರ್ತಿಯಾಗಿಯೂ, ಸರ್ವಕರ್ಮನಿರತನಾಗಿಯೂ ಶುಚಿಯಾಗಿಯೂ ಇರುವ ಮಗನೊಬ್ಬನನ್ನು ಕೊಡು ?" ಎಂದು ಬೇಡಿಕೊಂಡಳು. ನಾರಾಯಣನು ಹಾಗೆಯೇ

ಆಗಲೆಂದು ಆಕೆಗೊಂದು ಫಲವನ್ನು ಕೊಟ್ಟನು. ಆಕೆಯು ಎಚ್ಚತ್ತ ಮೇಲೂ ಫಲವನ್ನು ನೋಡಿ ಪತಿಗೆ ಸಂಗತಿಯೆಲ್ಲವನ್ನೂ ಬಿನ್ನೈಸಿ ಆ ಹಣ್ಣನ್ನು ತಿಂದಳು. ಕೆಲವು ಕಾಲಕಳೆದಮೇಲೆ ಆಕೆಯು ವಾಸುದೇವನಲ್ಲನುರಕ್ತನಾಗಿರುವ ಯೋಗ್ಯನಾದ ಮಗನೊಬ್ಬನನ್ನು ಪಡೆದಳು. ಆ ತ್ರಿಶಂಕುರಾಜನು ಮಗನು ಹುಟ್ಟಿದನು ಎಂದು ಕೇಳಿ, ಸಂತೋಷವನ್ನು ತಾಳಿ, ಆ ಮಗನಿಗೆ ಜಾತಕರ್ಮಾದಿ ಸಂಸ್ಕಾರವನ್ನು ಬ್ರಾಹ್ಮಣರಿಂದ ಮಾಡಿಸಿ ಅಂಬರೀಷನೆಂದು ಹೆಸರಿಟ್ಟನು.

ಕಾಲಕ್ರಮೇಣ ಆ ಮಗನು ಬೆಳೆಯುತ್ತ ಬರಲಾಗಿ ಅವನ ತಂದೆಯು ದೇವೇಂದ್ರನೋಲಗದ ಚಾವಡಿಯನ್ನೇರಿದನು. ತರುವಾಯ ಪುರದ ಪ್ರಮುಖರೆಲ್ಲರೂ ಸೇರಿ ಆ ಬಾಲಕನಿಗೆ ಪಟ್ಟಗಟ್ಟಿದರು. ಆ ಅಂಬರೀಷನು ಮಂತ್ರಿಗಳವಶಕ್ಕೆ ರಾಜ್ಯಾಧಿಪತ್ಯವನ್ನೊಪ್ಪಿಸಿ, ತಾನು ತಪಸ್ಸು ಮಾಡಲುಪಕ್ರಮಿಸಿ,ಹೃತ್ಪುಂಡರೀಕ ಮಧ್ಯಸ್ಥನಾಗಿಯೂ, ಸೂರ್ಯಮಂಡಲಮಧ್ಯವರ್ತಿಯಾಗಿಯೂ, ಶಂಖ ಚಕ್ರ ಗದಾಪದ್ಮಗಳನ್ನು ನಾಲ್ಕು ಭುಜದಲ್ಲಿಯೂ, ಧರಿಸಿಕೊಂಡು, ಶುದ್ಧವಾದ ಅಪರಂಜಿಯಂತೆ ಪ್ರಕಾಶಿಸುವವನಾಗಿಯೂ, ಬ್ರಹ್ಮ ವಿಷ್ಣು ಶಿವಾತ್ಮಕನಾಗಿಯೂ, ಪೀತಾಂಬರಧಾರಿಯಾಗಿಯೂ ಶ್ರೀವತ್ಸವಕ್ಷನಾಗಿಯೂ ಇರುವ ಪುರುಷೋತ್ತಮನಾದ ವಿಷ್ಣುವನ್ನು ಧ್ಯಾನಮಾಡುತ್ತಿದ್ದನು. ಬಳಿಕ ಭಕ್ತಾನುಗ್ರಹತತ್ಪರನಾದ ವಿಷ್ಣುವು, ಗರುಡಾರೂಢನಾಗಿ ಸರ್ವದೇವತೆಗಳಿಂದಲೂ ಹೊಗಳಿಸಿಕೊಳ್ಳುತ್ತ ಬಂದು ಭಕ್ತಮನೋಭಾವವನ್ನು ಭಾವಿಸಲೆಳಸಿ ತನ್ನ ವಾಹನವಾದ ಗರುಡನನ್ನು ಐರಾವತವನ್ನಾಗಿ ಮಾಡಿ, ತಾನು ಇಂದ್ರನಾಗಿ ಅದರ ಮೇಲೆ ಕುಳಿತುಕೊಂಡು, ರಾಜನ ಸಮಿಾಪವನ್ನೈದಿ.—"ಎಲೈ ರಾಜೇಂದ್ರನೆ! ಇಂದ್ರನಾದ ನಾನು ಬಂದಿರುವೆನು ನಿನಗೇನು ಬೇಕು? "ಎಲೈ ಚಕ್ರವರ್ತಿಯೆ! ನಿನ್ನನ್ನು ಕಾಪಾಡಲು ಸಿದ್ಧನಾಗಿರುವೆನು" ಎಂದು ನುಡಿದನು. ಅದಕ್ಕೆ ಅಂಬರೀಷನು—"ಎಲೈ ಇಂದ್ರನೆ! ನಾನು ವಿಷ್ಣುಭಕ್ತಿಯುಕ್ತನಾಗಿರುವೆನು. ನಿನ್ನನ್ನು ಕುರಿತು ತಪಸ್ಸುಮಾಡಿದವನಲ್ಲ. ನೀನು ಕೊಡುವ ವರವನ್ನು ನಾನು ಒಪ್ಪುವನೂ ಅಲ್ಲ, ನಿನ್ನನ್ನು ನಾನು ಮೆಚ್ಚಿಸಿದವನೂ ಅಲ್ಲ; ನೀನು ಬಂದ ದಾರಿಯನ್ನು ಹಿಡಿದು

ಹೋಗು ? ನನಗೆ ನಾರಾಯಣನೇ ನಾಥನು, ಹೊರಡು ! ಹೊರಡು !! ನೀನಿಲ್ಲಿದ್ದು ಇನ್ನು ನನಗೆ ತಪೋವಿಘ್ನವನ್ನು ಮಾಡಬೇಡ, ಎಂದು ಹೇಳಿದನು. ತರುವಾಯ ಹರಿಯು ನಿಜರೂಪವನ್ನು ತೋರಿಸಿ ಶಂಖಚಕ್ರಗದಾಧಾರಿಯಾಗಿ ಗರುಡನನ್ನೇರಿ ಎರಡನೆಯ ಅಂಜನಾದ್ರಿಯಂತೆ ಕಂಗೊಳಿಸುತ್ತ ದೇವ ಗಂಧರ್ವರಿಂದ ಹೊಗಳಿಸಿಕೊಳ್ಳುತ್ತ ಪ್ರತ್ಯಕ್ಷನಾದನು. ಅದನ್ನು ನೋಡಿ ರಾಜನು ದೇವರನ್ನು ನಮಿಸಿ, ಹರ್ಷವನ್ನು ಹೊಂದಿ "ಎಲೈ ಲೋಕನಾಥನೆ ! ಪ್ರಸನ್ನನಾಗು, ನಾನು ನಿನ್ನ ಮರೆಯನ್ನೈದಿರುವೆನು, ನೀನುದ್ಧರಿಸು ? ಅನ್ಯಥಾ ನನಗೆ ರಕ್ಷಕರಿಲ್ಲ,, ಎಂದು ಬಹಳವಾಗಿ ಸ್ತುತಿಸಿ ಬೇಡಿಕೊಂಡನು, ಬಳಿಕ ವಿಷ್ಣುವು ಪ್ರಸನ್ನನಾಗಿ "ಎಲೈ ರಾಜನೆ ! ನಿನಗೆ ಬೇಕಾದುದೇನು ? ನೀನು ನನಗೆ ಪರಮಭಕ್ತನಾಗಿರುವೆ, ಬೇಕಾದುದನ್ನೆಲ್ಲಾ ನಿನಗೆ ಕೊಡುವೆನು" ಎಂದು ಹೇಳಿದನು, ಅಂಬರೀಷನದನ್ನು ಕೇಳಿ ಮುದವನ್ನು ಹೊಂದಿ, "ಎಲೈ ನಾರಾಯಣನೆ! ನೀನು ಪ್ರಸನ್ನನಾಗಿರುವಾಗ ನನಗೆ ಏನುತಾನೇ ಕಡಮೆಯಾಗಿರುವುದು, ನನ್ನ ಬುದ್ಧಿಯು ಯಾವಾಗಲೂ ನಿನ್ನ ಚಿಂತನೆಯಲ್ಲಿಯೇ ವರ್ತಿಸುವಂತೆ ಅನುಗ್ರಹಿಸು ? ನಾನು ಜನರನ್ನು ವಿಷ್ಣುಭಕ್ತಿಯುಕ್ತರನ್ನು ಮಾಡಿ ರಕ್ಷಿಸುತ್ತ ಬರುವಂತೆಯೂ, ಯಜ್ಞಹೋಮಾದಿಗಳಿಂದ ದೇವತೆಗಳನ್ನು ತೃಪ್ತಿಗೊಳಿಸುವಂತೆಯೂ, ವೈಷ್ಣವರನ್ನು ಕಾಪಾಡುತ್ತ ವೈರಿಗಳನ್ನಿರಿಯುವಂತೆಯೂ, ನನಗೆ ಅನುಗ್ರಹಿಸಬೇಕು. ಎಂದು ಕೇಳಿಕೊಂಡನು. ಅದನ್ನು ಕೇಳಿ ವಿಷ್ಣುವು ಹಾಗೆಯೇ ಆಗಲೆಂದು ಹೇಳಿ—ಎಲೈ ರಾಜನೆ ! ಈ ಸುದರ್ಶನ ಚಕ್ರವು, ಪೂರ್ವದಲ್ಲಿ ರುದ್ರನ ಪ್ರಭಾವದಿಂದ ನನಗೆ ಲಭ್ಯವಾಯಿತು. ಇದರಿಂದ ಋಷಿಶಾಪಾದಿದುಃಖವೂ, ಶತ್ರುರೋಗಾದಿ ಭಯಗಳೂ, ನಾಶವಾಗುವುವು, ಎಂದು ಹೇಳಿ ಚಕ್ರವನ್ನು ರಾಜನಿಗೆ ಕೊಟ್ಟು ಅಲ್ಲಿಯೇ ಅದೃಶ್ಯನಾದನು. ಆಮೇಲೆ ಅರಸನು ಸಂತುಷ್ಟನಾಗಿ ನಾರಾಯಣನನ್ನು ನಮಿಸಿ ತನ್ನ ರಾಜಧಾನಿಯಾದ ಅಯೋಧ್ಯೆಗೆ ಬಂದು ರಾಜ್ಯವನ್ನು ಸುಖವಾಗಿ ಕಾಪಾಡಿಕೊಂಡಿದ್ದನು. ಬ್ರಾಹ್ಮಣಾದಿ ವರ್ಣಚತುಷ್ಟಯಗಳೂ, ತಮ್ಮತಮ್ಮ ವೃತ್ತಿಗಳನ್ನು ಮೀರುತ್ತಿರಲಿಲ್ಲ. ರಾಜನು

ಅಶ್ವಮೇಧ ಮೊದಲಾದ ಅನೇಕ ಯಜ್ಞಗಳನ್ನು ಮಾಡಿ, ಸಮುದ್ರಮಧ್ಯೆ ಇರುವ ದೇಶವನ್ನೆಲ್ಲಾ ಒಂದೇ ಪೊಳಲಿನಂತೆ ಕಾಪಾಡುತ್ತಿದ್ದನು. ರಾಜ್ಯವೆಲ್ಲವೂ ವಿಷ್ಣುಭಕ್ತಿಮಯವಾಯಿತು. ಮನೆಮನೆಯಲ್ಲಿಯೂ ಹರಿನಾಮಸ್ಮರಣೆಯೂ, ಬ್ರಾಹ್ಮಣರ ಮನೆಯಲ್ಲಿ ವೇದಘೋಷವೂ ತುಂಬಿ ತುಳುಕಾಡುತ್ತಿತ್ತು. ಅವನ ರಾಜ್ಯದಲ್ಲಿ ಕ್ಷಾಮಡಾಮರ ಮೊದಲಾದ ಬಾಧೆಗಳಾವುವೂ ತಲೆಹಾಕುತ್ತಿರಲಿಲ್ಲ. ಪ್ರಜೆಗಳೆಲ್ಲರೂ ನೆಮ್ಮದಿಯಾಗಿ ನಲಿಯುತ್ತಿದ್ದರು.

ಎರಡನೆಯ ಅಧ್ಯಾಯವು ಮುಗಿದುದು.

## ಮೂರನೆಯ ಅಧ್ಯಾಯವು.

ಹೀಗಿರಲಾಗಿ ಅಂಬರೀಷನಿಗೆ ಸರ್ವಲಕ್ಷಣ ಸಂಪನ್ನೆಯಾಗಿಯೂ ಶೀಲವತಿಯಾಗಿಯೂ ಇರುವ ಮಗಳೊಬ್ಬಳು ಜನಿಸಿದಳು. ಅವಳಿಗೆ ರಾಜನು ಶ್ರೀಮತಿಯೆಂಬ ಹೆಸರನ್ನಿಟ್ಟು ಬಹಳ ವೈಭವದಿಂದ ನಾಮಕರಣವನ್ನು ಮಾಡಿದನು. ಆ ಬಾಲೆಯು ತಂದೆಯನ್ನು ಮೆಚ್ಚಿಸುತ್ತ ದಿನೇದಿನೇ ಬೆಳೆಯುತ್ತಿದ್ದಳು. ಒಮ್ಮೆ ದೇವಮುನಿಯಾದ ನಾರದನೂ, ಶ್ರೇಷ್ಠನಾದ ಪರ್ವತನೂ ಅಂಬರೀಷನ ಮನೆಗೈಯ್ತಂದರು. ಆ ರಾಜನಾ ಮುನಿಗಳನ್ನು ವಿಧಿವಿಧಾನದಿಂದರ್ಚಿಸಿ ಕುಶಲಪಶ್ನೆಗಳಿಂದ ಸಂತೋಷಗೊಳಿಸಿದನು.

ಆಗ ನಾರದನು ರಾಜನ ಪಕ್ಕದಲ್ಲಿದ್ದ ಬಾಲಕಿಯನ್ನು ನೋಡಿ ಆಶ್ಚರ್ಯಯುಕ್ತನಾಗಿ ‘‘ಎಲೈ ರಾಜನೆ ! ಮಹಾಭಾಗನೆ ! ಈ ಹುಡುಗಿಯಾರು? ದೇವಕನ್ನಿಕೆಯಂತಿರುವಳು,, ಎಂದು ಪ್ರಶ್ನೆಮಾಡಿದನು. ಆಮಾತನ್ನು ಕೇಳಿ ರಾಯನು,— ‘ ಎಲೈ ವಿಭುವೆ ? ಈ ಹುಡುಗಿಯು ನನ್ನ ಮಗಳು,ಇವಳಿಗೆ ಶ್ರೀಮತಿಯೆಂಬ ಹೆಸರಿಟ್ಟಿರುವೆನು. ಈ ಬಾಲೆಯು ಮದುವೆಗೆ ನೆರೆದಿದ್ದಾಳೆ. ನಾನು ತಕ್ಕವನಾದ ವರನನ್ನು ನೋಡುತ್ತಿದ್ದೇನೆ,, ಎಂದು ಬಿನ್ನವಿಸಿದನು. ಈ ಮಾತನ್ನುಕೇಳಿ ನಾರದನು ತಾನು ಆ ಕನ್ನಿಕೆ

ಯನ್ನು ಮದುವೆಯಾಗಬೇಕೆಂದುಮನಸ್ಸಿನಲ್ಲಿ ಬಹಳವಾಗಿ ಕುತೂಹಲವುಳ್ಳವನಾದನು.ಹಾಗೆಯೇ ಪರ್ವತನಿಗೂ ಶ್ರೀಮತಿಯನ್ನುಮದುವೆಯಾಗಬೇಕೆಂಬ ಕೋರಿಕೆಯು ಬಗೆಯಲ್ಲಿ ಬೇರೂರಿತು. ನಾರದನು ರಾಜನನ್ನು ರಹಸ್ಯವಾಗಿ ಕರೆದು-ಎಲೈ ರಾಜನೆ ! ನಿನ್ನ ಮಗಳನ್ನು ನನಗೆ ಕೊಟ್ಟು ನನ್ನನ್ನು ಗೃಹಸ್ಥನನ್ನಾಗಿ ಮಾಡು ಎಂದು ತನ್ನ ಮನೋಗತವನ್ನು ತಿಳಿಸಿದನು. ಪರ್ವತನೂ ಇದೇಮೇರೆಗೆ ಏಕಾಂತದಲ್ಲಿ--ಎಲೈರಾಜನೆ ! ನಿನ್ನ ಮಗಳನ್ನು ನನಗೆ ಕೊಟ್ಟು ಮದುವೆ ಮಾಡು ಎಂದು ರಾಯನಿಗೆ ಸೂಚಿಸಿದನು. ಬಳಿಕ ರಾಯನು ಮುನಿಗಳೀರ್ವರ ಮನೋಭಿಪ್ರಾಯವನ್ನು ತಿಳಿದು--ಎಲೈ ಪೂಜ್ಯರಿರಾ ! ನೀವಿಬ್ಬರೂ ನನ್ನ ಮಗಳನ್ನು ಮದುವೆಯಾಗಲು ಬಯಸಿರುವಿರಿ ? ಇದಕ್ಕೆ ನಾನೇನುಹೇಳಲಿ ! ಮಾನ್ಯರಾದ ನೀವು ನನ್ನದೊಂದು ಪ್ರಾರ್ಥನೆಯನ್ನು ನೆರವೇರಿಸಿ ಕೊಡಿ, ನಿಮ್ಮಿಬ್ಬರಲ್ಲಿ ಯಾರನ್ನು ನನ್ನ ಮಗಳೊಪ್ಪುವಳೋ ಅವರಿಗೆ ಅವಳನ್ನು ಕೊಟ್ಟು ಮದುವೆ ಮಾಡುವೆನು. ಇದುವಿನಾ ನನಗೆ ಬೇರೆ ಶಕ್ತಿಯಿಲ್ಲವೆಂದು ಅವರ ಸಂಗಡ ಹೇಳಿದನು.

ಅದಕ್ಕವರು "ಹಾಗೆಯೇ ಆಗಲಿ ! ನಾಳೆ ಬೆಳಗ್ಗೆ ಬರುವೆವು,,ಎಂದು ಹೇಳಿ ಮನದಲ್ಲಿ ಸಂತೋಷವನ್ನೈದುತ್ತ ವಿಷ್ಣು ಲೋಕಕ್ಕೆ ತೆರಳಿದರು. ನಾರದನು ವಿಷ್ಣುಲೋಕದಲ್ಲಿ ಶ್ರೀಕೃಷ್ಣನನ್ನು ಕಂಡು ಅವನಡಿದಾವರೆಗೆ ಮಣಿದು,—ಎಲೈ ನಾಥನೆ! ರಹಸ್ಯವಾದ ಕಾರ್ಯವೊಂದುಂಟು, ಅದನ್ನರಿಕೆ ಮಾಡುವೆನು. ಕೈಗೂಡುವಂತೆ ಮಾಡಿಕೊಡಬೇಕು ಎಂದು ಬೇಡಿದನು. ಅದನ್ನು ಕೇಳಿ ನಾರಾಯಣನು ನಕ್ಕು "ಎಲೈ ಮುನಿಯೆ ! ನಿನ್ನ ಮನೋಭಿಪ್ರಾಯವನ್ನು ಹೇಳು !" ಎಂದು ಕೇಳಿದನು. ಆ ಮೇಲೆ ನಾರದನು—"ಎಲೈ ಪರಮಾತ್ಮನೆ ! ನಿನಗೆ ಪರಮ ಭಕ್ತನಾಗಿರುವ ಅಂಬರೀಷನೆಂಬ ರಾಯನೊಬ್ಬನಿರುವನಷ್ಟೆ? ಅವನಿಗೆ ಶ್ರೀಮತಿಯೆಂಬ ಮಗಳೊಬ್ಬಳಿರುವಳು. ಅವಳ ಚೆಲುವಿಕೆಯನ್ನು ನೋಡಿ, ನಾನವಳನ್ನು ಮದುವೆಯಾಗಬೇಕೆಂದು ಬಯಸಿದೆನು. ನನ್ನಂತೆಯೇ ನಿನ್ನ ಭೃತ್ಯನಾದ ಪರ್ವತನೂ ಆ ಬಾಲೆಯನ್ನು ನೋಡಿ ತಾನೂ ಅವಳನ್ನು ಮದುವೆಯಾಗಬೇಕೆಂದು ಆಸೆ ಪಟ್ಟನು. ಹೀಗೆ ನಾವಿಬ್ಬರೂ ಆಶಿಸು

ವುದನ್ನು ಕಂಡು ರಾಯನು—"ಎಲೈ ಮುನಿಗಳಿರಾ! ಕೇಳಿ! ನಿಮ್ಮಿ ಬ್ಬರಲ್ಲಿ ಯಾರು ಲಾವಣ್ಯಯುಕ್ತರಾಗಿರುವಿರೋ ಅವರನ್ನು ನನ್ನ ಮಗ ಳು ವರಿಸುವಳು. ನಾನವರಿಗೆ ಅವಳನ್ನು ಕೊಟ್ಟು ವಿವಾಹ ಮಾಡುವೆ ನು" ಎಂದು ಹೇಳಿದ್ದಾನೆ. ನಾನದನ್ನು ಕೇಳಿ "ಹಾಗೆಯೇ ಆಗಲಿ ನಾ ಳೆಬೆಳಗ್ಗೆ ಬರುವೆನು" ಎಂದು ಹೇಳಿ ನಿನ್ನ ಹತ್ತಿರಕ್ಕೆ ಬಂದೆನು. ಎ ಲೈ ಜಗನ್ನಾಥನೆ! ನೀನು ನನಗೆ ಹಿತವನ್ನುಂಟುಮಾಡಬೇಕು. ನೀನು ನನ್ನಲ್ಲಿ ಅಕ್ಕರೆಯುಳ್ಳವನಾದರೆ ಆ ಪರ್ವತನ ಮುಖವು ಆ ಬಾಲೆಯ ದೃ ಷ್ಟಿಗೆ ಮಾತ್ರ ಕಪಿಯಂತೆ ಕಾಣುವಹಾಗೂ, ಇನ್ನೆಲ್ಲರಿಗೂ ಯಥಾಸ್ಥಿತ ವಾಗಿ ತೋರುವಂತೆಯೂ ಅನುಗ್ರಹಿಸಬೇಕೆಂದು ಬೇಡಿಕೊಂಡನು. ಅದಕ್ಕೆ ವಿಷ್ಣುವು ನಕ್ಕು ಹಾಗೆಯೇ ಆಗಲಿ! ನಿನ್ನ ಕೋರಿಕೆಯನ್ನು ನೆರವೇರಿಸಿ ಕೊಡುವೆನು ನೀನು ಹೋಗು! ಎಂದು ಹೇಳಿ ಅವನನ್ನು ಕಳುಹಿಸಿಕೊಟ್ಟನು. ಆ ಮಾತನ್ನು ಕೇಳಿ ನಾರದನು ಸಂತುಷ್ಟನಾಗಿ ಗೋವಿಂದನಿಗೆ ವಂದನೆಯನ್ನು ಗೈದು, ನನ್ನಿಷ್ಟವು ಕೈಗೂಡಿತೆಂದು ಮ ನದಲ್ಲಿ ನಲಿಯುತ್ತ ಅಯೋಧ್ಯೆಗೆ ತೆರಳಿದನು.

ನಾರದನು ಹೊರಟುಹೋದ ಕೂಡಲೆ ಪರ್ವತನೂ ಬಂದು, ಮಾಧ ವನಡಿಗೆರಗಿ ರಹಸ್ಯವಾಗಿ ನಾರದನ ವರ್ತಮಾನವನ್ನು ತಿಳಿಸಿ, ತನಗೆ ಶ್ರೀಮತಿಯಲ್ಲಿರುವ ಅಭಿರುಚಿಯನ್ನು ಹೇಳಿ—ಎಲೈ ಜಗತ್ಪತಿಯೆ! ಶ್ರೀಮತಿಯು ನೋಡಿದರೆ ನಾರದನ ಮುಖವು ಕರಡಿಯ ಮುಖದಹಾಗೆ ಇರುವಂತೆ ಮಾಡು, ಮತ್ತಾರದೃಷ್ಟಿಗೂ ಹಾಗೆ ಕಾಣಿಸಲಾಗದು" ಎಂದು ದೇವರನ್ನು ಕುರಿತು ಪ್ರಾರ್ಥಿಸಿಕೊಂಡನು. ಅದನ್ನು ಕೇಳಿ ನಾರಾಯಣನು—"ಎಲೈ ಮುನಿಯೆ! ನೀನು, ಹೇಳಿದ ಹಾಗೆಯೇ ಆ ಗಲಿ ಬೇಗಹೋಗು? ಎಂದು ಹೇಳಿ ಪರ್ವತನನ್ನು ಕಳುಹಿಸಿದನು. ತ ರುವಾಯ ಆ ಪರ್ವತನು ಶೀಘ್ರವಾಗಿ ಅಯೋಧ್ಯೆಗೆ ಬಂದು ಸೇರಿದನು.

ಬಳಿಕ ಮುನಿಗಳಿಬ್ಬರೂ ಒಂದರೆಂಬ ಸಮಾಚಾರವನ್ನು ತಿಳಿದು, ರಾಯನು,—ಅಯೋಧ್ಯಾ ಪಟ್ಟಣವನ್ನು ಬಗೆಬಗೆಯಾದ ತೋರಣಗಳಿಂ ದಲೂ, ಬಾವುಟಗಳಿಂದಲೂ ಅಲಂಕರಿಸುವಂತೆ ಅಪ್ಪಣೆ ಮಾಡಿದನು. ಪಟ್ಟಣದ ಬೀದಿಗಳಲ್ಲಿ ಅರಳುಗಳನ್ನೂ ಹೂಗಳನ್ನೂ ಎರಚಿ

ಚಿತ್ರವಿಚಿತ್ರವಾಗಿ ಅಲಂಕರಿಸಿದರು. ಸ್ತ್ರೀಯರು ತಮ್ಮ ತಮ್ಮ ಮನೆಯಬಾಗಿಲುಗಳಲ್ಲಿ ರಂಗವಲ್ಲಿಗಳಿಂದ ಹಸೆಗಳನ್ನು ಬರೆದು ರಮ್ಯವಾಗಿರುವಂತೆ ಅಲಂಕರಿಸಿದರು. ದಿವ್ಯವಾದ ಧೂಪಗಳು ಕೇರಿಕೇರಿಗಳಲ್ಲಿಯೂ ಘಮಘಮಿಸುತ್ತಿದ್ದುವು. ರಾಜಸಭೆಯನ್ನು ಚಿತ್ರವಿಚಿತ್ರವಾದ ನಿರ್ಮಾಣಕೌಶಲ್ಯದಿಂದ ಮನೋಹರವಾಗಿ ಅಲಂಕರಿಸಿದರು. ಬಹು ಬೆಲೆಯುಳ್ಳ ರತ್ನಗಂಬಳಿಗಳಿಂದ ಸಭಾಸ್ಥಾನದ ನೆಲವನ್ನೆಲ್ಲಾ ಮುಚ್ಚಿದರು. ಅವುಗಳಮೇಲೆ ಭದ್ರಾಸನಗಳು ಕಂಗೊಳಿಸುತ್ತಿದ್ದವು. ಆ ಸಭೆಗೆ ನಾನಾ ದೇಶಗಳಿಂದಲೂ ರಾಜಕುಮಾರರು ಬಂದು ಭದ್ರಪೀಠಗಳಲ್ಲಿ ಮೆರೆಯುತ್ತಿದ್ದರು. ಶ್ರೀಮತಿಎಂಬ ರಾಜಕುಮಾರಿಯು ಸರ್ವಾಭರಣಭೂಷಿತಳಾಗಿ ಸಾಕ್ಷಾತ್‌ಲಕ್ಷ್ಮಿಯಂತೆ ಪ್ರಕಾಶಿಸುತ್ತ ಬಂದು ಆ ಸಭಾಮಂದಿರವನ್ನು ಪ್ರವೇಶಿಸಿದಳು. ಆ ಬಾಲೆಯ ಬಡನಡು ಸಿಡಿಯಲ್ಲಿ ಹಿಡಿಯುವಷ್ಟಿದ್ದುದರಿಂದ ಬಳಕುತ್ತಿತ್ತು. ಅವಳ ಪಕ್ಕದಲ್ಲಿ ಗೆಳತಿಯರೆಲ್ಲರೂ ಬಂದು ಸೇರಿದರು. ರಾಜಸಭೆಯು ಸೊಗಸಾದ ಮೇಲುಕಟ್ಟುಗಳಿಂದಲೂ ರತ್ನಗಳಿಂದಲೂ ಅಲಂಕೃತವಾಗಿ ಪರಿಮಳವನ್ನು ದಿಕ್ಕುದಿಕ್ಕಿನಲ್ಲಿಯೂ ಎರಚುತ್ತಿತ್ತು. ಆ ಸಮಯಕ್ಕೆ ಸರಿಯಾಗಿ ದೇವಮುನಿಯಾದ ನಾರದನೂ, ಪೂಜ್ಯನಾದ ಪರ್ವತನೂ ಬಂದು ನೆರೆದರು.

ಮೂರನೆಯ ಅಧ್ಯಾಯವು ಮುಗಿದುದು.

## ನಾಲ್ಕನೆಯ ಅಧ್ಯಾಯವು.

ತರುವಾಯ ರಾಜನು ಪರ್ವತನಾರದರು ಬಂದುದನ್ನು ನೋಡಿ ಸಂಭ್ರಾಂತನಾಗಿ ಪೀಠವನ್ನು ತೋರಿಸಿ ಅವರಿಗೆ ಸತ್ಕಾರಮಾಡಿದನು. ನಿತ್ಯಜ್ಞಾನಿಗಳೊಳಗೆ ಶ್ರೇಷ್ಠರಾದ ಆ ಮುನಿಗಳಿಬ್ಬರೂ ಕನ್ಯಾರ್ಥಿಗಳಾಗಿ ಸಿಂಹಪೀಠವನ್ನಲಂಕರಿಸಿದರು. ಆಗ ಶ್ರೀಮತಿಯು ಬಂದು, ಆ ಮುನಿಗಳಡಿದಾವರೆಗೆರಗಿ ನಿಂತಿದ್ದಳು. ಅಂಬರೀಷನು—"ಎಲೌ ಮಗಳೆ! ಇವರಿಬ್ಬರಲ್ಲಿ ನೀನಾರನ್ನು ಮೆಚ್ಚುವೆಯೋ ಅವನಿಗೆ ಯಥಾವಿಧಿಯಾಗಿ ಪುಷ್ಪಮಾಲೆಯನು ಹಾಕು" ಎಂದು ತನ್ನ ಮಗಳಿಗೆ ಹೇಳಿದನು.

ರಾಯನಾಡಿದ ನುಡಿಯನ್ನು ಕೇಳಿ ಆ ಕನ್ನೆಯು ಮಾಲೆಯೊಂದನ್ನು ಬೇಗ ತರಿಸಿ ತನ್ನ ಕೈಯಲ್ಲಿ ಹಿಡಿದುಕೊಂಡು ಸುಮ್ಮನೆ ನಿಂತಿದ್ದಳು. ಅದನ್ನು ನೋಡಿ ರಾಜನು ಎಲೌ ವತ್ಸೆ ! ಏಕೆ ಸುಮ್ಮನಿರುವೆ. ಇವರಲ್ಲಾರಾದ ರೊಬ್ಬರಿಗೆ ಮಾಲೆಯನ್ನು ಹಾಕು. ಸಾವಕಾಶವೇಕೆ ? ಎಂದು ನುಡಿದನು. ಆ ಮಾತನ್ನು ಕೇಳಿ ಆ ಬಾಲಕಿಯು ಗಡಗಡನೆ ನಡುಗುತ್ತ ತನ್ನ ತಂದೆಯೊಡನೆ ಎಲೈ ತಂದೆಯೆ ! ಇವರಲ್ಲೊಬ್ಬನಮುಖವು ಕಪಿಯ ಮುಖದಹಾಗೆ ಇದೆ. ಮತ್ತೊಬ್ಬನದು ಕರಡಿಯ ಮುಖದಹಾಗಿರುವುದು ಇವರಿಬ್ಬರೂ ಪೂಜ್ಯರಾದ ಪರ್ವತನಾರದರಂತೆ ಕಾಣುವುದಿಲ್ಲ. ಇವರಿಬ್ಬರ ನಡುವೆ ಹದಿನಾರುವರುಷದ ಹುಡುಗನೊಬ್ಬನು ಕಂಗೊಳಿಸುತ್ತಿರುವನು. ಅವನು ಸರ್ವಾಭರಣಭೂಷಿತನಾಗಿಯೂ, ಅಗಸೆಯ ಹೂವಿನಂತೆ ಶರೀರಕಾಂತಿಯುಳ್ಳವನಾಗಿಯೂ ಇರುವನು. ಅವನ ಬಾಹುಗಳು ಮೊಣಕಾಲವರೆಗೂ ಚಾಚಿಕೊಂಡಿರುವುವು. ಕಣ್ಣುಗಳು ಕಿವಿಯವರೆಗೂ ಪ್ರಸರಿಸಿರುವುವು. ಎದೆಯು ವಿಶಾಲವಾಗಿರುವುದು. ಕೈಗಳು ಕಮಲಗಳಂತೆಯೂ, ಮುಖವು ತಾವರೆಯಂತೆಯೂ, ನೇತ್ರಗಳು ಇಂದೀವರಗಳಂತೆಯೂ ಪ್ರಕಾಶಿಸುವುವು. ಪಾದಗಳು ಪದ್ಮಗಳನ್ನಲೆಗಳೆಯುತ್ತಿರುವುವು. ನಾಭಿಯಲ್ಲಿ ಪದ್ಮವಿರುವುದು. ಲಕ್ಷ್ಮಿಯು ಎಡೆಬಿಡದೆ ಆ ಪುರುಷನನ್ನು ವ್ಯಾಪಿಸಿಕೊಂಡಿರುವಳು. ಹಲ್ಲುಗಳು ಸಾಲುಮಲ್ಲಿಗೆಯ ಮೊಗ್ಗುಗಳನ್ನು ಹಳಿಯುತ್ತಿರುವುವು. ಆ ಪುರುಷನು ನನ್ನನ್ನು ನೋಡಿ ತನ್ನ ಬಲಗೈಯನ್ನು ಮುಂದಕ್ಕೆ ಚಾಚಿಕೊಂಡು ಪ್ರಚ್ಛನ್ನನಾಗಿರುವನು, ಎಂದು ಹೇಳಿದಳು.

ಅದನ್ನು ಕೇಳಿ ನಾರದನು ಸಂಶಯಾವಿಷ್ಟನಾಗಿ ಎಲೌ ಬಾಲೆ ! ಆ ಪುರುಷನಿಗೆ ಬಾಹುಗಳೆಷ್ಟಿರುವುವು ? ನಿಜವಾಗಿಯೂ ಹೇಳು, ಎಂದು ಪ್ರಶ್ನೆ ಮಾಡಿದನು. ಆ ಕನ್ನಿಕೆಯು ವಿಸ್ಮಿತಳಾಗಿ ಎರಡು ಬಾಹುಗಳು ಮಾತ್ರ ಕಾಣುವುವು ಎಂದುತ್ತರಕೊಟ್ಟಳು. ಆಮೇಲೆ ಪರ್ವತನು ಅವನ ವಕ್ಷಸ್ಥಲದಲ್ಲಿರುವದೇನು, ಕೈಯಲ್ಲಿ ಏನನ್ನು ಹಿಡಿದಿರುವನು ? ಹೇಳು ಎಂದು ಕನ್ನಿಕೆಯನ್ನು ಕೇಳಿದನು. ಆ ಹುಡುಗಿಯು ಮುನಿಯೊಡನ ಎಲೈ ಪೂಜ್ಯನೆ! ಆ ಪುರುಷನೆದೆಯಲ್ಲಿ ಮಿಂಚಿನಂತೆ ಮಿಣುಗುವ

ಮಾಲೆಯೊಂದು ಕಣ್ಣಿಗೆ ಕಾಣುತ್ತದೆ. ಕೈಯ್ಯಲ್ಲಿ ಗದೆಯನ್ನು ಹಿಡಿದಿರುವನು; ಎಂದು ಬಿನ್ನೈಸಿದಳು. ಅನಂತರ ಈ ಮಾತನ್ನು ಕೇಳಿ ಆ ಮುನಿಗಳು ಅಂತರಂಗದಲ್ಲಿಯೇ ಚಿಂತಿಸತೊಡಗಿದರು. ನಾರದನು ಇದು ಯಾರದೋ ಮಾಯೆಯಾಗಿರಬೇಕು. ವಿಷ್ಣುವೇ ಮಾಯಾವಿಯಾಗಿ ಕಳ್ಳತನದಿಂದ ಬಂದಿರಬೇಕು. ಹಾಗಲ್ಲದಿದ್ದರೆ ನನ್ನ ಮುಖವು ಕರಡಿಯ ಮುಖದ ಹಾಗೆ ಕಾಣಲು ಕಾರಣವೇನು ! ಎಂದು ಮನಸ್ಸಿನಲ್ಲಿಯೇ ಚಿಂತಿಸುತ್ತಿದ್ದನು. ನಾರದನ ಮುಖವು ಹಾಗೆ ಕಾಣುವುದೇನೋ ಯುಕ್ತ. ನನ್ನ ಮುಖವು ವಾನರ ಮುಖದ ಹಾಗೆ ಹೇಗೆ ಆಯಿತೆಂದು ಪರ್ವತನು ಬಹಳವಾಗಿ ಯೋಚಿಸುತ್ತಿದ್ದನು. ತರುವಾಯ ರಾಜನು ಆ ಮುನಿವರರಿಗೆ ಮಣಿದು, ಎಲೈ ಪೂಜ್ಯರಿರಾ ! ನೀವು ಕನ್ಯಾರ್ಥಿಗಳಾಗಿ ಬಂದಿದ್ದರೂ ಬುದ್ಧಿವೈಕಲ್ಯದಿಂದ ಏಕೆ ಸುಮ್ಮನೆ ಕುಳಿತಿರುವಿರಿ ಎಂದು ಕೇಳಿಕೊಂಡನು. ಅದಕ್ಕವರು—"ನೀನೇ ನಮಗೆ ವೈಕಲ್ಯವನ್ನುಂಟುಮಾಡಿರಬೇಕೇ ವಿನಾ ನಾವು ಬೇರೆ ಎಂದಿಗೂ ವೈಕಲ್ಯವನ್ನೈದಲಾರೆವು. ನಮ್ಮಿಬ್ಬರಲ್ಲಿ ಯಾರನ್ನಾದರೂ ಈ ಬಾಲೆಯು ವರಿಸಬಹುದು" ಎಂದು ರಾಯನ ಸಂಗಡ ಹೇಳಿದರು.

ಆಮೇಲಾ ಕನ್ನೆಯು ದೈವವನ್ನು ನೆನೆದು, ತಂದೆಯ ಅನುಮತಿಯನ್ನು ಮೀರಲಾಗದೆಂದೂ, ಮುನಿಗಳು ಶಾಪಕೊಟ್ಟಾರೆಂದೂ ಹೆದರಿ ಆ ಮಾಲೆಯನ್ನು ಕೈಗೆ ತೆಗೆದುಕೊಂಡು, ಮುನಿಗಳಿಗೆ ಹಾಕಲು ಮುಂದಕ್ಕಡಿಯನ್ನಿಟ್ಟು ಆ ಮುನಿಗಳ ಮಧ್ಯೆ ಮೊದಲಿನಂತೆ ಇದ್ದ ಪುರುಷನನ್ನು ನೋಡಿ ಅವನ ಕಂಠಕ್ಕೇ ಮಾಲೆಯನ್ನು ಹಾಕಿದಳು. ತರುವಾಯ ಆ ಬಾಲೆಯು ಅಲ್ಲಿರುವ ಜನಗಳ ದೃಷ್ಟಿಗೆ ಗೋಚರಳಾಗಲೇ ಇಲ್ಲ. ಅಲ್ಲಿದ್ದವರೆಲ್ಲರೂ "ಇದೇನಾಶ್ಚರ್ಯ" ವೆಂದು ಕಲಕಲ ಶಬ್ದಮಾಡತೊಡಗಿದರು. ಆ ಬಾಲೆಯನ್ನು ಕರೆದುಕೊಂಡು ಹರಿಯು ತನ್ನ ಸ್ಥಾನಕ್ಕೆ ತೆರಳಿದನು. ಆ ರಾಜಪುತ್ರಿಯು ಪರಮಾತ್ಮನನ್ನೇ ಪತಿಯಾಗಿ ಪಡೆಯಬೇಕೆಂದು ತಪಸ್ಸು ಮಾಡಿದ್ದಳಾದುದರಿಂದ ಅವಳು ಹರಿಯನ್ನೇ ಮದುವೆಯಾದಳು. ಆಮೇಲೆ ಆ ಮುನಿಗಳಿಬ್ಬರೂ ಖಿನ್ನರಾಗಿ ವಾಸುದೇವನನ್ನು ನೋಡಲು ಹರಿಲೋಕಕ್ಕೆ ಹೊರಟು ಹೋದರು. ಇವರು ಬಂದ

ರೆಂಬ ಸಂಗತಿಯನ್ನರಿತು ಹರಿಯು ಶ್ರೀಮತಿಯೊಡನೆ ಎಲೌ ರಮಣಿ ಯೆ, ಆ ಮುನಿಗಳಿಬ್ಬರೂ ಇಲ್ಲಿಗೆ ಬಂದಿದ್ದಾರೆ. ನೀನುಮಾತ್ರ ಇಲ್ಲಿಯೇ ಪ್ರಚ್ಛನ್ನಳಾಗಿರು ! ಎಂದು ಹೇಳಲಾಕೆಯು ತನ್ನ ಆಕಾರವನ್ನು ಮರೆ ಮಾಡಿಕೊಂಡಳು.

ನಾರದನು ಬಂದು ಹರಿಯಡಿಗೆ ವಂದಿಸಿ—ಎಲೌ ಪೂಜ್ಯನೆ! ಈಗ ನೀನು ಪರ್ವತನ ವಿಷಯದಲ್ಲಿಯೂ ನನ್ನ ವಿಷಯದಲ್ಲಿಯೂ ಮಾಡಿದ ಮೋಸವೇನು ? ಎಲೈ ಗೋವಿಂದನೆ ! ನೀನೇ ತಂತ್ರಮಾಡಿ ಆ ಬಾಲೆ ಯನ್ನು ಅಪಹರಿಸಿಕೊಂಡು ಬಂದಿರುವೆಯಲ್ಲದೆ ಮತ್ತೆ ಬೇರೆ ಇಲ್ಲ" ಎಂದು ಹೇಳಿದನು. ಅದನ್ನು ಕೇಳಿ ನಾರಾಯಣನು—ಕೈಗಳಿಂದ ಕಿವಿ ಗಳನ್ನು ಮುಚ್ಚಿಕೊಂಡು ಶಿವ ! ಶಿವ !! ಎನ್ನುತ್ತ ಪೂಜ್ಯನೆ ! ನೀನು ಹೇಳಿದುದೇನು ? ಹೀಗೆ ಸ್ವೇಚ್ಛೆಯಾಗಿ ಮಾತನಾಡುವುದು ಮುನಿವೃತ್ತಿಗೆ ತಕ್ಕುದಲ್ಲ; ಎಂದು ಹೇಳಿದನು.

ನಾರದನು:—ಎಲೈ ವಾಸುದೇವನೆ ! ಹಾಗಾದರೆ ನನ್ನ ಮುಖವು ಕರಡಿಯ ಮುಖದಂತೆ ಹೇಗೆ ಆಯಿತು ?

ವಾಸುದೇವ:—(ಬುದ್ಧಿವಂತಿಕೆಯಿಂದ ಯೋಚಿಸಿ) ಎಲೈ ಮುನಿ ಯೇ ನೀನು ಪರ್ವತನ ಮುಖವನ್ನು ಶ್ರೀಮತಿಗೆ ಮಾತ್ರ ಕಪಿಮುಖದಂತೆ ಕಾಣುವಹಾಗೆ ಮಾಡೆಂದು ರಹಸ್ಯವಾಗಿ ಹೇಗೆ ಹೇಳದೆಯೋ ಹಾಗೆ ಯೇ ಪರ್ವತನೂ ಕೂಡ ನಾರದನ ಮುಖವು ರಾಜಬಾಲೆಗೆ ಕರಡಿ ಯ ಮುಖದಹಾಗೆ ಕಾಣಲಿ" ಎಂದು ಕೇಳಿಕೊಂಡನು. ನಾನು ಭಕ್ತಾಧೀನನಾದುದರಿಂದ ನಿಮ್ಮಿಬ್ಬರಿಷ್ಟದಂತೆ ನೆರವೇರಿಸಿಕೊಟ್ಟೆನು. ನಾನೇ ಸ್ವೇಚ್ಛೆಯಿಂದ ಮಾಡಿ ನಿಮ್ಮ ಪ್ರಿಯವನ್ನು ಹೋಗಲಾಡಿಸಲಿಲ್ಲ. ನನಗೆ ಭಕ್ತರಾಗಿ ಯಾರು ಏನನ್ನು ಕೇಳುವರೋ ಅವರಿಗದನ್ನು ಕೊಡುವುದು ನನ್ನ ಕೆಲಸ. ಈ ವಿಷಯದಲ್ಲಿ ನನ್ನ ತಪ್ಪಾಗಲಿ ನಿಮ್ಮ ತಪ್ಪಾಗಲಿ ಯಾವುದೂ ಇಲ್ಲ. ಎಲೈ ಪರ್ವತನಾರದರೆ ! ನಾನು ನಿಮಗೆ ಸತ್ಯವಾಗಿಯೂ ಪ್ರಿಯವನ್ನೇ ಮಾಡಿದ್ದೇನೆ. ಈ ವಿಷಯದಲ್ಲಿ ಬೇಕಾದರೆ ಆಯುಧವನ್ನು ಹಿಡಿದು ಪ್ರಮಾಣಮಾಡುವೆನು.

ನಾರದನು—ಎಲೈ ದೇವನೇ ; ಹಾಗಾದರೆ ನಮ್ಮಿಬ್ಬರ ಮಧ್ಯೆ

ಬಂದು ದ್ವಿಭುಜನಾಗಿ ಧನುಸ್ಸಿನಿಂದ ಕೂಡಿ ಆ ಬಾಲೆಯನ್ನು ಹೊತ್ತುಕೊಂಡು ಹೋದನಲ್ಲಾ ! ಅವನಾರು ?

ನಾರಾಯಣ—ಎಲೈ ದ್ವಿಜರಿರಾ ! ಮಾಯಾವಿಗಳಾದ ಮಹಾತ್ಮರು ಜಗತ್ತಿನಲ್ಲಿ ಬಹಳ ಮಂದಿಗಳಿದಾರೆ. ಅವರಲ್ಲಿ ಯಾರೋ ಅವಳನ್ನಪಹರಿಸಿರಬಹುದು. ನಾನು ನಿತ್ಯವೂ ಚಕ್ರಪಾಣಿಯಾಗಿರುವೆನು. ನನಗೆ ಭುಜಗಳು ನಾಲ್ಕಿವೆ. ನಾನೆಂದಿಗೂ ಸುಳ್ಳು ಹೇಳುವನಲ್ಲ. ಈ ವಿಷಯವು ನಿಮಗೇ ಗೊತ್ತಿರುವುದು. ಅದನ್ನು ಕೇಳಿ ಮುನಿಗಳಿಬ್ಬರೂ ದೇವರನ್ನು ವಂದಿಸಿ ಹೃಷ್ಟಮಾನಸರಾಗಿ "ಎಲೈ ದೇವನೇ ! ಈ ವಿಷಯದಲ್ಲಿ ನಿನ್ನ ತಪ್ಪೇನೂ ಇಲ್ಲ ; ನೀನು ಜಗತ್ಪತಿಯಾಗಿರುವೆ. ಈ ಮೋಸಕೃತ್ಯವು ರಾಯನದೇ ಆಗಿರಬಹುದು. ಅವನೇ ಮಾಯೆಯನ್ನೇನಾದರೂ ಉಂಟುಮಾಡಿದನೋ, ಎಂದು ಹೇಳಿ ಅಲ್ಲಿಂದ ಹೊರಟು ಅಂಬರೀಷನ ಹತ್ತಿರಕ್ಕೆ ಬಂದು ಎಲೈ ರಾಜನೆ ! ಪರ್ವತನಾರದರಾದ ನಾವಿಬ್ಬರೂ ಇಲ್ಲಿಗೇಕೆ ಬಂದೆವು. ನಮ್ಮನ್ನು ಕರೆಯಿಸಿ ಕನ್ಯೆಯನ್ನು ಮತ್ತೊಬ್ಬರಿಗೆ ಕೊಡಬಹುದೆ ? ಎಲೋ ಮೂಢನೆ ! ನಿನಗೆ ತಮಸ್ಸುಂಟಾಗಲಿ. ನೀನದರಿಂದ ನಿನ್ನನ್ನು ತಿಳಿಯಲಾರದೆ ಹೋಗುವೆ, ಎಂದು ಆ ಮುನಿಗಳು ಶಾಪವನ್ನು ಕೊಟ್ಟೊಡನೆಯೇ ತಮೋರಾಶಿಯು ಮುಂದೆ ಬಂದು ನಿಂತಿತು. ಕೂಡಲೇ ರಾಜನಕಡೆ ವಿಷ್ಣುಚಕ್ರವೂ ಬಂದೊದಗಿತು. ಚಕ್ರವು ಕತ್ತಲೆಯನ್ನಟ್ಟಿಬರಲು ಆ ಕತ್ತಲೆಯು ಮುನಿಗಳ ಹತ್ತಿರಕ್ಕೆ ಹೋಯಿತು. ಅವರು ಅದನ್ನು ನೋಡಿ ಗಡಗಡನೆ ನಡುಗುತ್ತ, ಓಡಿಹೋದರು. ಆದರೂ ಹಿಂದುಗಡೆ ಚಕ್ರವು ಕತ್ತಲೆಯನ್ನು ತರುಮಿಕೊಂಡೇ ಬರುತ್ತಿತ್ತು. ಮುನಿಗಳು ಕಾಲಿನ ವೇಗವನ್ನು ಮತ್ತಷ್ಟು ಬಲಮಾಡಿದರು. ಆದರೂ ತಪ್ಪಿಸಿಕೊಳ್ಳುವುದಕ್ಕಾಗಲಿಲ್ಲ. ತರುವಾಯ ಆ ಮುನಿಗಳು ನಮಗೆ ಈಗ ಕನ್ಯಾಸಿದ್ಧಿಯು ಚೆನ್ನಾಗಿ ನೆರವೇರಿತೆಂದು ಪಲಾಯನ ಮಾಡುತ್ತ ಚಕ್ರವಾಳ ಪರ್ವತದವರೆಗೂ ಹೋದರು. ಅಲ್ಲಿಗೂ ಅದು ಅವರನ್ನು ಬಿಡಲಿಲ್ಲ. ಅವರು ದಾರಿಯಲ್ಲಿ ಹೆದರುತ್ತಾ ಗೋವಿಂದನೆ ! ಕಾಪಾಡು ! ಕಾಪಾಡು !! ಎಂದನ್ನುತ್ತ ವಿಷ್ಣುಲೋಕವನ್ನು ಕುರಿತೋಡಿದರು. ಅಲ್ಲಿಗೆ ಹೋಗಿ, ನಾರಾಯಣ ! ಜಗತ್ಪತೆ ! ವಾಸುದೇವ ! ಹೃ

ಷೀಕೇಶ! ಪದ್ಮನಾಭ! ಜನಾರ್ದನ! ಪುಂಡರೀಕಾಕ್ಷ! ನೀನು ನಮ ಗೊಡೆಯನಾಗಿರುವೆ ಕಾಪಾಡು! ಕಾಪಾಡು! ಎಂದು ಮರೆಹೊಕ್ಕರು.. ಆಮೇಲೆ ನಾರಾಯಣನು ಭಕ್ತರನ್ನು ಕಾಪಾಡಲು ಕತ್ತಲೆಯನ್ನೂ ಚಕ್ರವನ್ನೂ ತಡೆದುಕೊಂಡು, ಅಂಬರೀಷನು ಹೇಗ ನನಗೆ ಮುಖ್ಯ ಭಕ್ತನೋ ಹಾಗೆಯೇ ಈ ಮುನಿಗಳೂ ಭಕ್ತರಾಗಿದ್ದಾರೆ. ರಾಜನಿಗೆ ಹಿತವಾಗುವಂತೆ ಇವರಿಬ್ಬರಿಗೂ ಹಿತವನ್ನುಂಟುಮಾಡಬೇಕೆಂದೆಣಿಸಿ ಆ ಮುನಿಗಳಿಬ್ಬರನ್ನೂ ಬರಮಾಡಿಕೊಂಡು ಮಾತಿನಿಂದವರನ್ನು ಬೆರಗು ಮಾಡುತ್ತ ಎಲೈ ಮುನಿಗಳೆ! ನನ್ನ ಮಾತನ್ನು ಸ್ವಲ್ಪ ಲಾಲಿಸಿ! ನನಗಾಗಿಯೇ ನೀವು ನನ್ನ ಭಕ್ತನನ್ನು ಕಾಪಾಡಬೇಕು. ಈ ಚಕ್ರವು ಅಪರಾಧಿಯಾಗಿರುವುದು. ಸಾಧುಗಳು ಯಾವಾಗಲೂ ಕ್ಷಮಾಶೀಲರಾದುದರಿಂದ ಇದನ್ನು ಮನ್ನಿಸಬೇಕು, ಎಂದು ಕೇಳಿಕೊಂಡನು.

ತರುವಾಯ ಆ ಮುನಿಗಳು ಇದೆಲ್ಲವೂ ವಿಷ್ಣುವಿನ ಮಾಯೆಯೆಂದು ತಿಳಿದು, ಅವನ ಮೇಲೆ ಸಿಟ್ಟುಮಾಡಿಕೊಂಡು ಎಲೈ ಮಧುಸೂಧನನೆ! ನೀನು ಮೋಸಮಾಡಿ ಶ್ರೀಮತಿಯನ್ನು ಯಾವ ಆಕಾರದಿಂದ ಬಂದು ಅಪಹರಿಸಿದೆಯೋ ಅದೇ ಆಕಾರದಿಂದಲೇ ಅಂಬರೀಷನ ವಂಶೀಯನಾದ ದಶರಥನಲ್ಲಿ ಜನಿಸು? ಶ್ರೀಮತಿಯು ಭೂಪುತ್ರಿಯಾಗಿ ಜನಿಸಲಿ, ಅವಳನ್ನು ವಿದೇಹರಾಜನು ಕೈ ಕೊಂಡು, ಕಾಪಾಡುವನು, ಆಗ ನೀಚನಾದ ರಾಕ್ಷಸನೊಬ್ಬನು ಲೋಕಕಂಟಕನಾಗಿ ಹುಟ್ಟುವನು. ನೀನು ಶ್ರೀಮತಿಯನ್ನು ರಾಕ್ಷಸಧರ್ಮದಿಂದ ಅಪಹರಿಸಿದಂತೆ ನಿನ್ನ ಹೆಂಡತಿಯಾದ ಸೀತೆಯನ್ನು ರಾಕ್ಷಸನು ಗುಪ್ತವಾಗಿ ಅಪಹರಿಸುವನು. ನಾವು ಶ್ರೀಮತಿಗಾಗಿ ಹೇಗೆ ದುಗುಡವನ್ನು ತಾಳಿದೆವೋ ಹಾಗೆಯೇ ನೀನೂ ದುಃಖವನ್ನು ಅನುಭವಿಸು, ಎಂದು ನಾರಾಯಣನಿಗೆ ಶಾಪವನ್ನಿತ್ತರು.

ನಾರಾಯಣನು—(ಅದನ್ನು ಕೇಳಿ) ಅಂಬರೀಷನ ವಂಶದಲ್ಲಿ ಶ್ರೀಮಂತನಾಗಿಯೂ ಧಾರ್ಮಿಕನಾಗಿಯೂ ಇರುವ ದಶರಥಮಹಾರಾಯನು ಜನಿಸುವನಷ್ಟೆ! ಅವನಿಗೆ ನಾನು ರಾಮನೆಂಬ ಹೆಸರಿನಿಂದ ದೊಡ್ಡವನಾಗಿ ಜನ್ಮವನ್ನೆತ್ತುವೆನು. ಅಲ್ಲಿ ನನಗೆ ದಕ್ಷಿಣಬಾಹುವಾಗಿ ಭರತನೂ ವಾಮಬಾಹುವಾಗಿ ಶತ್ರುಘ್ನನೂ ಜನಿಸಲಿ, ಆದಿಶೇಷನು ಲಕ್ಷ್ಮಣನಾಗಿ

ಜನಿಸಲಿ, ಎಲೈ ಚಕ್ರವೇ ಮುನಿಶಾಪವು ಅನ್ಯಥಾ ಆಗತಕ್ಕುದಲ್ಲ, ಹೋಗು ಮುನಿಶಾಪದಿಂದ ಬಂದ ತಮೋರಾಶಿಯೆ, ನಾನು ರಾಮನಾದಾಗ ನೀನು ನನ್ನಲ್ಲಿಗೆ ಬಾ, ಈಗ ರಾಜನನ್ನು ಬಿಟ್ಟು ತೊಲಗು! ಎಲೈ ಮುನಿಗಳಿರ ನಿಮ್ಮನ್ನೂ ಬಿಟ್ಟುಹೋಗಲಿ, ಎಂದು ಹೇಳಿದನು. ಹೀಗೆ ಹೇಳುತ್ತಲೇ ಆ ತಮಸ್ಸು ನಾಶವಾಯಿತು. ಭಕ್ತರಕ್ಷಣನಾದ ನಾರಾಯಣನ ಆಜ್ಞಾರ್ಥವಾದ ಚಕ್ರವು ಮೊದಲಿದ್ದಂತೆಯೇ ಇದ್ದಿತು. ಮುನಿಶ್ರೇಷ್ಠರು ಭಯವನ್ನು ಕಳೆದುಕೊಂಡು ಗೋವಿಂದನಿಗೆ ವಂದನೆಯನ್ನು ಗೈದು ಶೋಕದಿಂದ ತೃಪ್ತರಾಗಿ ಹೊರಟುಹೋಗುತ್ತ ಇಬ್ಬರಿಗೊಬ್ಬರು ಇನ್ನುಮೇಲೆ ನಾವು ಕನ್ಯಾಪರಿಗ್ರಹವನ್ನೆಂದಿಗೂ ಮಾಡಬಾರದು, ಎಂದು ಪ್ರತಿಜ್ಞೆಮಾಡಿಕೊಂಡು ಧ್ಯಾನಪರರಾಗಿ ಪೂರ್ವದಂತೆ ನಿಯಮದಲ್ಲಿದ್ದರು. ಆ ಅಂಬರೀಷರಾಜನು ಭೂಮಿಯನ್ನು ಪಾಲಿಸಿ ಭೃತ್ಯ ಜ್ಞಾತಿಗಳೊಡನೆ ವಿಷ್ಣುಲೋಕದಲ್ಲಿ ವಾಸವಾಗಿದ್ದನು. ಅಂಬರೀಷನಿಗೂ ಆ ದೇವಮುನಿಗಳಿಬ್ಬರಿಗೂ ಗೌರವವುಂಟಾಗಲು ರಾಮನು ದಶರಥಪುತ್ರನಾಗಿ ಜನಿಸಿ ತಮಸ್ಸಿನಿಂದ ಲುಪ್ತವಾದ ಬುದ್ಧಿಯುಳ್ಳವನಾದನು. ಇವ್ಮೊವ್ಮೆ ಕಾರ್ಯವಶದಿಂದ ಆತ್ಮಸ್ಮೃತಿಯೂ ಉಂಟಾಗುತ್ತಿತ್ತು. ಮಹಾಬಾಹುವಾದ ಶ್ರೀರಾಮನು ಪರಿಪೂರ್ಣಕಾಮನಾದರೂ ಅಪೂರ್ಣ ಕಾಮನಂತೆ ನಟಿಸುತ್ತಿದ್ದನು. ಪ್ರಭುಗಳ ಈ ವರ್ತನವು ಭಕ್ತಾನುಗ್ರಹಾರ್ಥವಲ್ಲದೆ ಬೇರೆಯಲ್ಲ. ಮಾಯೆಯನ್ನು ಮಾಡಿದುದರಿಂದ ಪರಮೇಶ್ವರನು ಮನುಷ್ಯಜನ್ಮವನ್ನೆತ್ತಬೇಕಾಯಿತು. ಆದಕಾರಣ ವಿದ್ವಾಂಸರು ದೋಷವನ್ನು ತಿಳಿದು ಮಾಯೆಯನ್ನು ಮಾಡಬಾರದು. ಎಲೈ ಮುನಿಯೇ! ಈ ರೀತಿಯಾಗಿ ರಾಮನ ಜನ್ಮಕ್ಕೆ ಕಾರಣವನ್ನು ಅಂಬರೀಷನ ಮಹಾತ್ಮೆಯನ್ನೂ ಹರಿಯ ಮಾಯೆಯನ್ನೂ ನಿನಗೆ ತಿಳಿಸಿರುವೆನು. ಆರಾದರೂ ಈ ಹರಿಯ ಮಾಯಾಪವಿತ್ರವನ್ನು ಕೇಳಿದರೂ ಸರಿಯೇ ಓದಿದರೂ ಸರಿಯೇ ಅವರು ಮಾಯಾರಹಿತರಾಗಿ ವಿಷ್ಣುಲೋಕವನ್ನೈದುವರು. ಅಲ್ಲದೆ ರಾಮನ ಜನ್ಮವನ್ನು ಯಾರು ಭಕ್ತಿಯಿಂದ ಕೇಳುತ್ತಾರೋ ಅಥವಾ ಪಠಿಸುತ್ತಾರೋ ಅವರೆಂದಿಗೂ ಯಮನಿಗೆ ಭಯಪಡಬೇಕಾದುದಿಲ್ಲ. ಅವರು ಪರಮೇಶ್ವರನ ಗೃಹಕ್ಕೆ ಅತಿಥಿಗಳಾಗುವರು.

ನಾಲ್ಕನೆಯ ಅಧ್ಯಾಯವು ಮುಗಿದುದು.

ಸತಿಯೊಡನೆ ಕೂಡಿ ಗಾನಮಂದಭಿನಯಿಸುತ್ತ ಅಲ್ಲಿಯೇ ವಾಸವಾಗಿರುತ್ತಿದ್ದನು. ಕುಶಸ್ಥಲಿಯಲ್ಲಿ ಜನಿಸಿದ ಐವತ್ತುಮಂದಿ ಬ್ರಾಹ್ಮಣರು ಹರಿಗಾನಕ್ಕೋಸ್ಕರ ಬಂದು ಪೂಜ್ಯನಾದ ಕೌಶಿಕನಿಗೆ ಸಹಾಯಕರಾಗಿ ಬೇಕಾದ ಕೆಲಸಗಳನ್ನು ಮಾಡಿಕೊಡುತ್ತ ಗಾನವಿದ್ಯಾ ತತ್ವವನ್ನು ತಿಳಿದು ಗಾನವನ್ನು ಲಾಲಿಸುತ್ತ ಸುಖವಾಗಿ ಅಲ್ಲಿಯೇ ಇರುತ್ತಿದ್ದರು. ಆಗ ಆ ಕೌಶಿಕನ ಗಾನವು ಜಗದ್ವಿಖ್ಯಾತವಾಗುತ್ತ ಬಂದಿತು. ಕಳಿಂಗ ದೇಶದ ರಾಜನು ಆ ವರ್ತಮಾನವನ್ನು ಕೇಳಿ ವಿಷ್ಣು ಸ್ಥಳಕ್ಕೆ ಬಂದು—"ಎಲೈ ಕೌಶಿಕನೇ! ಈ ಶಿಷ್ಯರುಗಳೊಡನೆ ಕೂಡಿ ನೀನು ನನ್ನ ವಿಷಯವಾಗಿ ಗಾನಮಾಡು? ಕುಶಸ್ಥಲ ನಿವಾಸಿಗಳಾದ ಈ ವಿಪ್ರರೆಲ್ಲರೂ ಕೇಳಲಿ?" ಎಂದು ಕೌಶಿಕನಿಗೆ ಹೇಳಿದನು. ಅದನ್ನು ಕೇಳಿ ಕೌಶಿಕನು ದೊರೆಯನ್ನು ಮೃದುವಾದ ಮಾತಿನಿಂದ ಸಂತೈಸುತ್ತ ಮಹಾರಾಜನೆ! ನನ್ನ ನಾಲಿಗೆಯಲ್ಲಿ ಸರ್ವದಾ ವಾಣಿಯು ಇರುವುದಿಲ್ಲ. ಹರಿಯನ್ನು ಬಿಟ್ಟು ಇಂದ್ರನೇ ಮೊದಲಾದ ಯಾವ ದೇವತೆಗಳನ್ನೂ ನಾನು ಸ್ತುತಿಸುವುದೂ ಇಲ್ಲ. ಮಾತಾಡಿಸುವುದೂ ಇಲ್ಲವೆಂದು ಹೇಳಿದನು.

ಹೀಗೆ ಕೌಶಿಕ ಗುರುವು ಹೇಳಲು ರಾಜನು ಅವನ ಶಿಷ್ಯರಹತ್ತಿರಕ್ಕೆ ಹೋಗಿ ನನ್ನ ವಿಷಯವಾಗಿ ಗಾನಮಾಡಿರಿ ಎಂದು ಕೇಳಿಕೊಂಡನು. ಅವನ ಶಿಷ್ಯರಾದ ವಸಿಷ್ಠ-ಗೌತಮ-ಅರುಣಿ-ಸಾರಸ್ವತ-ಸೈಕ್ಯ ಶಿಬಿವಾದ ಚಿತ್ರಮಾಲಾ ಇವರೂ ಆ ಮಾತನ್ನು ಕೇಳಿ ಕೌಶಿಕನು ಹೇಳಿದಂತೆಯೇ ಎಲೈ ಅರಸೇ! ನಮ್ಮ ಕಿವಿಗಳು ಹರಿಗಾನವನ್ನಲ್ಲದೆ ಮನುಷ್ಯನ ಗಾನವನ್ನು ಕೇಳಲೊಲ್ಲವು. ಆದುದರಿಂದ ನಾವು ನಿನ್ನ ಕೀರ್ತಿಯನ್ನು ಕೇಳುವದೂ ಇಲ್ಲ, ಹೊಗಳುವದೂ ಇಲ್ಲವೆಂದವನಿಗೆ ಉತ್ತರವಿತ್ತರು. ಆ ಮಾತನ್ನು ಕೇಳಿ ರಾಜನು, ಕೋಪವನ್ನು ತಾಳಿ ತನ್ನೊಂದಿಗೆ ಬಂದಿದ್ದ ಸೇವಕರಿಗೆ —"ಎಲೈ ನೀವು ನನ್ನ ವಿಷಯವಾಗಿ ಸ್ವಲ್ಪ ಗಾನಮಾಡಿ? ಈ ಬ್ರಾಹ್ಮಣರು ಹೇಗೆ ಕೇಳುವುದಿಲ್ಲವೋ ನೋಡೋಣ" ಎಂದಾಜ್ಞಾಪಿಸಲು ಆ ಭೃತ್ಯರು ರಾಜನ ಮಾತನ್ನು ಕೇಳಿ ಆ ಜನಗಳ ಸುತ್ತಲೂ ರಾಜನ ವಿಷಯವಾಗಿ ಗಾನಮಾಡತೊಡಗಿದರು. ಆ ಬ್ರಾಹ್ಮಣರೆಲ್ಲರೂ ತಮ್ಮ ಕಿವಿಗಳನ್ನು ಮುಚ್ಚಿಕೊಂಡು ಗಾನದತ್ತಿಗೆ ದೂಷಿಸುತ್ತ ಕಾಡ

ಸತಿಯೊಡನೆ ಕೂಡಿ ಗಾಯನಾನಂದವನ್ನನುಭವಿಸುತ್ತ ಅಲ್ಲಿಯೇ ವಾಸವಾಗಿದ್ದನು. ಈ ಕಾಲದಲ್ಲಿ ಜನಿಸಿದ ಮಹಾತ್ಮರಾದ ಬ್ರಾಹ್ಮಣರು ಹರಿಗಾಯನಕ್ಕೋಸ್ಕರ ಬಂದು ಪೂಜ್ಯನಾದ ಕೌಶಿಕನಿಗೆ ಸಹಾಯಕರಾಗಿ ಬೇಕಾದ ಕೆಲಸಗಳನ್ನು ಮಾಡಿಕೊಡುತ್ತ ಗಾಯನದ ತತ್ವವನ್ನು ತಿಳಿದು ಗಾಯನವನ್ನು ಕಲಿಯುತ್ತ ಸುಖವಾಗಿ ಅಲ್ಲಿಯೇ ಇರುತ್ತಿದ್ದರು. ಹೀಗೆ ಆ ಕೌಶಿಕನ ಗಾಯನವು ಜಗತ್ಪ್ರಖ್ಯಾತವಾಗುತ್ತ ಬಂದಿತು. ಕಳಿಂಗ ದೇಶದ ರಾಜನು ಆ ವರ್ತಮಾನವನ್ನು ಕೇಳಿ ಹರ್ಷ ಸ್ಫುರಿತನಾಗಿ ಬಂದು—"ಎಲೈ ಕೌಶಿಕನೇ! ಈ ಶಿಷ್ಯರಾಗಿರುವವರೊಡನೆ ಕೂಡಿ ನೀನು ನನ್ನ ಸನ್ನಿಧಿಯಲ್ಲಿ ಗಾಯನಮಾಡು! ಕಾಶಸ್ಥರು ಹಿಮಾಲಯದ ಈ ಪುತ್ರರೆಲ್ಲರೂ ಕೇಳಲಿ" ಎಂದು ಕೌಶಿಕನಿಗೆ ಹೇಳಿದನು. ಅದನ್ನು ಕೇಳಿ ಕೌಶಿಕನು ಭೂಮಿಯನ್ನು ಸ್ಪರ್ಶಿಸಿ ನಮಸ್ಕರಿಸಿದ ನಂತರ ಮಹಾರಾಜನೇ! ನಾನು ಮನುಷ್ಯರೆಲ್ಲರ ಸಮ್ಮುಖದಲ್ಲಿ ಗಾಯನವು ಬರುವುದಿಲ್ಲ. ಹರಿಯನ್ನು ಹೊಗಳುವ ಬಿಂಬದ ಹೊರತಾದ ಬೇರೆ ದೇವತೆಗಳನ್ನು ನಾನು ಸ್ತುತಿಸುವುದು ಇಲ್ಲ. ಮನ್ನಿಸಬೇಕೆಂದು ಬೇಡಿದನು.

ಹೀಗೆ ಕೌಶಿಕ ಗುರುವು ಹೇಳಲು ರಾಜನು ಅವನ ಶಿಷ್ಯರೆಡೆಗೆ ತಕ್ಕೆ ಹೋಗಿ ನನ್ನನ್ನು ಕುರಿತು ಗಾಯನಮಾಡಿರಿ ಎಂದು ಕೇಳಿಕೊಂಡನು. ಅವನ ಶಿಷ್ಯರಾದ ವಸಿಷ್ಠ-ಗೌತಮ-ಅಂಗೀರ-ಭಾರದ್ವಾಜ-ಸ್ತೃಷ್ಟ ಕಿಲನಾದ ಚಿತ್ರರಥಾ ಇವರೂ ಆ ಮಾತನ್ನು ಕೇಳಿ ಕೌಶಿಕನು ಹೇಳಿದಂತೆಯೇ ಎಲೈ ಅರಸೇ! ನಮ್ಮ ಕಿವಿಗಳು ಹರಿಗಾಯನವನ್ನಲ್ಲದೆ ಮತ್ತಾವ ಗಾನವನ್ನು ಕೇಳಲೊಲ್ಲವು. ಅದುದರಿಂದ ನಾವು ನಿನ್ನ ಕೀರ್ತಿಯನ್ನು ಕೇಳುವುದೂ ಇಲ್ಲ, ಹೊಗಳುವುದೂ ಇಲ್ಲವೆಂದವನಿಗೆ ಉತ್ತರವನ್ನಿತ್ತರು. ಆ ಮಾತನ್ನು ಕೇಳಿ ರಾಜನು ಕೋಪವನ್ನು ತಾಳಿ ತನ್ನ ಹಿಂದೆ ಬಂದಿದ್ದ ಸೇವಕರಿಗೆ—"ಎಲೈ ನೀವು ನನ್ನ ವಿಷಯವಾಗಿ ಸ್ತುತಿ ಗಾಯನಮಾಡಿ? ಈ ಬ್ರಾಹ್ಮಣರು ಹೇಗೆ ಕೇಳುವುದಿಲ್ಲವೋ ನೋಡೋಣ" ಎಂದಾಜ್ಞಾಪಿಸಲು ಆ ಭೃತ್ಯರು ರಾಜನ ಮಾತನ್ನು ಕೇಳಿ ಆ ಜನರೆಲ್ಲ ಸುತ್ತಲೂ ರಾಜನ ವಿಷಯವಾಗಿ ಗಾಯನಮಾಡತೊಡಗಿದರು. ಆ ಬ್ರಾಹ್ಮಣರೆಲ್ಲರೂ ತಮ್ಮ ಕಿವಿಗಳನ್ನು ಮುಚ್ಚಿಕೊಂಡು ಗಾಯನ ತ್ಯಾಗ ಮಾಡುತ್ತ ಕಾಲ

ಗಳಿಂದಲೂ ಶಂಕುಗಳಿಂದಲೂ ಪ್ರತಿಯೊಬ್ಬರೂ ತಮ್ಮ ಕಿವಿಗಳನ್ನೊಡೆದು ಕೊಂಡರು. ಕೌಶಿಕ ಮೊದಲಾದವರು ಆ ರಾಜನ ಮನೋವೃತ್ತಿಯನ್ನರಿತು "ಎಲೈ ಈ ರಾಜನು ತನ್ನ ಗಾನದವಿಷಯವಾಗಿ ಏಕೆ ನಿರ್ಬಂಧ ಮಾಡುವನು. ಇದಕ್ಕಾಗಿ ನಾವೆಲ್ಲರೂ ನಾಲಿಗೆಯನ್ನು ಕೊಯ್ದುಕೊಳ್ಳುವ ಎಂದು ನಿಶ್ಚಯಿಸಿ ಹಾಗೆಯೇ ಮಾಡಿದರು. ತರುವಾಯ ರಾಜನು ಕ್ರುದ್ಧನಾಗಿ ಅವರ ವಿತ್ತಾದಿಗಳನ್ನು ತಾನು ಸೇರಿಸಿಕೊಂಡು, ನಮ್ಮದೇಶದಲ್ಲಿ ನೀವಿರಬೇಕೂಡದೆಂದು ಅವರನ್ನು ಹೊರಡಿಸಿದನು.

ಅವರು ಆ ದೇಶವನ್ನು ಬಿಟ್ಟು ಉತ್ತರ ದಿಕ್ಕಿಗೆಹೋಗಿ ಕೆಲವು ಕಾಲವಿದ್ದು ಬಳಿಕ ಕಾಲವಶರಾದರು. ಯಮನು, ತನ್ನ ರಾಜಧಾನಿಗೆ ಅವರು ಬಂದುದನ್ನು ನೋಡಿ, ಏನು ಮಾಡಲಿ ಎಂದು ಬಹಳವಾಗಿ ಚಿಂತಿಸಹತ್ತಿದನು. ಆಗ ಬ್ರಹ್ಮನುಬಂದು ವಿಸ್ಮಿತನಾಗಿ ಆ ದಿಕ್ಪಾಲಕರೊಡನೆ— ಎಲೈ ದೇವತೆಗಳಿರಾ! ಕೌಶಿಕಾದಿ ದ್ವಿಜರು ವಾಸುದೇವ ಪರಾಯಣರಾಗಿ ಗಾನ ಯೋಗದಿಂದ ಹರಿಯನ್ನು ಸ್ತುತಿಸುತ್ತ ಕಾಲವನ್ನು ಕಳೆಯುತ್ತಿದ್ದರು, ನೀವು ದೇವತ್ವವನ್ನು ಬಯಸುವರಾದರೆ ಅವರನ್ನು ಮನ್ನಣೆಯ ಮೂಲಕ ಬರಮಾಡಿ ಕೊಳ್ಳಿರಿ ? ಎಂದುಹೇಳಿದನು. ಅದನ್ನು ಕೇಳಿ ಲೋಕಪಾಲಕರು ಕೌತುಕಾವಿಷ್ಟರಾಗಿ "ಓ ಕೌಶಿಕನೆ! ಮಾಲತಿಯೆ ! ಪದ್ಮಾಕ್ಷನೆ ಎಂದು ಕೂಗುತ್ತಬಂದು ಅವರನ್ನಂತರಿಕ್ಷ ಮಾರ್ಗದಲ್ಲಿಯೇ ! ಕರೆದುಕೊಂಡು ಹೋಗುತ್ತ ಕ್ಷಣಮಾತ್ರದಲ್ಲಿ ಬ್ರಹ್ಮಲೋಕವನ್ನು ಸೇರಿದರು. ಆ ಬ್ರಹ್ಮಲೋಕದಲ್ಲಿ ಪಿತಾಮಹನು, ಕೌಶಿಕಾದಿಗಳು ಬಂದುದನ್ನು ನೋಡಿ, ಅಭ್ಯುತ್ಥಾನದಿಂದ ಸನ್ಮಾನಮಾಡಿ ಸ್ವಾಗತ ಪೂರ್ವಕವಾಗಿ ಅವರನ್ನು ಪೂಜಿಸಿದನು. ಆಗ ಅಲ್ಲಿ ಬಹಳ ಕೋಲಾಹಲ ವುಂಟಾಯಿತು. ಪೂಜ್ಯನಾದ ಹಿರಣ್ಯಗರ್ಭನು ಆ ದೇವತೆಗಳನ್ನು ನಿವಾರಿಸಿ ಕೌಶಿಕ ಮೊದಲಾದವರನ್ನು ತನ್ನ ಸಂಗಡ ಕರೆದುಕೊಂಡು ಹರಿಯನ್ನು ನೆನೆಯುತ್ತ ಹೊರಟು ವಿಷ್ಣುಲೋಕವನ್ನು ಸೇರಿಸಿದನು. ಅಲ್ಲಿ ದೇವನಾದ ನಾರಾಯಣನು—ಜ್ಞಾನಯೋಗದಿಂದ ವಿಷ್ಣುಭಕ್ತಿ ಪರಾಯಣರಾಗಿರುವ ಶ್ವೇತ ದ್ವೀಪ ನಿವಾಸಿಗಳಿಂದಲೂ, ನಾರಾಯಣನಿಗೆ ಸಮಾನರಾಗಿ ಚತುರ್ಬಾಹುಗಳನ್ನು ಹೊಂದಿ ವಿಷ್ಣು ಚಿಹ್ನೆಗಳಿಂದೆಸೆಯುವ ನಿಷ್ಕಲ್ಮಷರಾದ ಎಷ್ಟು

ತ್ತೆಂಟು ಸಾವಿರ ಮಂದಿ ಭಕ್ತರಿಂದಲೂ, ನಾರದಾದಿಗಳಿಂದಲೂ, ಸನಕಾದಿಗಳಿಂದಲೂ ಅನೇಕ ಭೂತ ನಿವಹಗಳಿಂದಲೂ ಸೇವಿಸಿ ಕೊಳ್ಳುತ್ತ, ಸಹಸ್ರ ದ್ವಾರದಿಂದಕೂಡಿ ಸಹಸ್ರಯೋಜನ ವಿಸ್ತಾರವಾಗಿರುವ ಮಣಿಖಚಿತವಾದ ವಿಮಾನದೊಳಗೆ ಭದ್ರಪೀಠದಲ್ಲಿ ಕುಳಿತುಕೊಂಡು, ಲೋಕ ಕಾರ್ಯ ಪ್ರಸಕ್ತರಾದವರಲ್ಲಿ ದೃಷ್ಟಿಯನ್ನು ಇಟ್ಟುಕೊಂಡು ಕಂಗೊಳಿಸುತ್ತಿದ್ದನು. ಆಗ ಪೂಜ್ಯನಾದ ಬ್ರಹ್ಮನು ಕೌಶಿಕಾದಿಗಳಿಂದ ಕೂಡಿ ಅಲ್ಲಿಗೆಹೋಗಿ ಭಗವಂತನನ್ನು ವಂದಿಸಿ ಮುಂದೆ ನಿಂದು ಬಗೆಬಗೆಯಾಗಿ ಸ್ತುತಿಸಿದನು. ಪ್ರಭುವಾದ ನಾರಾಯಣನು ಅವರೆಲ್ಲರನ್ನೂ ಕ್ರಮವಾಗಿನೋಡಿ "ಎಲೈ ಕೌಶಿಕನೇ! ಎಂದು ಕರೆಯುವ ಸಮಯಕ್ಕೆ ಸರಿಯಾಗಿ ದೊಡ್ಡದಾದ ಜಯಘೋಷವೊಂದುಂಟಾಯಿತು. ಆಗ ವಿಶ್ವಾತ್ಮನಾದ ವಿಷ್ಣುವು ಬ್ರಹ್ಮನೊಡನೆ" "ಎಲೈ" ಕೌಶಿಕನ ಹಿತದಲ್ಲಿ ನಿರತರಾಗಿದ್ದ ಕುಶಸ್ಥಳನಿವಾಸಿಗಳಾದ ವಿಪ್ರರೂ ನನ್ನ ಕೀರ್ತಿಯನ್ನು ಕೇಳುವುದರಲ್ಲಿ ಆಸಕ್ತರಾಗಿ, ಗಾನವಿದ್ಯಾ ತತ್ವವನ್ನು ತಿಳಿದು ಅನನ್ಯ ಭಕ್ತರಾಗಿದ್ದುದರಿಂದ ಅವರು ಸಾಧ್ಯರೆಂಬ ದೇವತೆಗಳಾಗುವಂತೆ ಅವರಿಗೆ ವರವನ್ನು ಕೊಟ್ಟಿರುವೆನು. ಕೌಶಿಕನು ಮಾತ್ರ ನನ್ನ ಪಕ್ಕದಲ್ಲಿಯೇ ಇರಲಿ, ಎಂದು ಹೇಳಿ ಬಳಿಕ ಕೌಶಿಕನೊಡನೆ —ಎಲೈ ಮಹಾಪ್ರಾಜ್ಞನ! ನೀನು ಶಿಷ್ಯರೊಡನೆ ಕೂಡಿ ದಿಗ್ಪಾಲನೆಂಬ ಹೆಸರಿನಿಂದ ಗಣಾಧಿಪತ್ಯವನ್ನು ಹೊಂದಿ ನಾನೆಲ್ಲಿರುವೆನೋ ನೀನು ಅಲ್ಲಿಯೇ ಇರು ? ಎಂದು ಹೇಳಿದನು. ಆಮೇಲೆ ಮಾಲವನೊಡನೆ—"ಎಲೈ ಮಾಲವನೆ ! ನೀನು ನನ್ನ ಲೋಕದಲ್ಲಿ ಹೆಂಡತಿಯಾದ ಮಾಲತಿಯೊಡಗೂಡಿ, ದಿವ್ಯರೂಪ ಧರನಾಗಿ ಗಾನವನ್ನು ಕೇಳುತ್ತ ನಿತ್ಯ ತೃಪ್ತನಾಗಿ, ಆಕಲ್ಪಾಂತದ ವರೆಗೂ ವಾಸಮಾಡುತ್ತಿರು ಎಂದೂ ಬಳಿಕ ಪದ್ಮಾಕ್ಷನೊಡನೆ, "ಎಲೈ ಪದ್ಮಾಕ್ಷನ! ನೀನು ಕುಬೇರನಾಗು, ಧನಗಳಿಗೆ ಒಡೆಯನಾಗಿದ್ದುಕೊಂಡು ಬೇಕಾದಷ್ಟು ಭೋಗಗಳನ್ನು ಹೊಂದು ಎಂದು ಹೇಳಿದನು.

ಆಮೇಲೆ ಹರಿಯು ಬ್ರಹ್ಮನನ್ನು ಕುರಿತು-ಎಲೈ ಪಿತಾಮಹನೆ! ಕೌಶಿಕನು ಗಣಾಧಿಪನಾದನು. ಅವನನ್ನುಗಣಗಳು ಸಂತೋಷಪಡಿಸುವರು, ಇವನು ನನ್ನ ಸಾಲೋಕ್ಯವನ್ನು ಬೇಗಹೊಂದಿದನು, ಈಬ್ರಾಹ್ಮಣರು ನನ್ನಭಕ್ತ

ವಾಗಿ ಒಬ್ಬರಿಗೊಬ್ಬರು ಗೂಟಗಳಿಂದ ಶ್ರೋತ್ರ ಛಿದ್ರವನ್ನು ಮುಚ್ಚಿಕೊಂಡು ನಾವು ಹರಿಯ ಕೀರ್ತನೆಯನ್ನು ವಿನಾ ಇನ್ನೊಂದನ್ನು ಕೇಳುವುದಿಲ್ಲವೆಂದು ಹೇಳಿದುದರಿಂದ ಇವರು ಮಹಾವ್ರತವನ್ನು ಧರಿಸಿ ದೇವತ್ವವನ್ನು ಹೊಂದಿ ನನ್ನಸಾನ್ನಿಧ್ಯವನ್ನು ಪಡೆದರು. ಮಾಲವನೂ ಭಾರ್ಯೆಯೊಡನೆ ಕ್ಷೇತ್ರವನ್ನು ಪರಿಶುದ್ಧಮಾಡಿ ನನ್ನ ಭಕ್ತಿಯನ್ನು ತಿಳಿದು ಗಾನವನ್ನು ಕೇಳುತ್ತಿದ್ದುದರಿಂದ ಅವನೂ ಶಾಶ್ವತವಾದ ನನ್ನ ಲೋಕವನ್ನು ಹೊಂದಿದನು. ಕೌಶಿಕನಿಗೆ ಅನ್ನವನ್ನಿಟ್ಟ ಪದ್ಮಾಕ್ಷನು ಧನೇಶ ನಾದನು ಎಂದು ತಿಳಿ. ನಾನು ಅಲ್ಲಿ ಸಮಸ್ತಲೋಕ ಪೂಜಿತನಾಗಿ ಭಕ್ತರನ್ನು ಸಲಹುತ್ತಿದ್ದೆನು.

ಐದನೆಯ ಅಧ್ಯಾಯವು ಮುಗಿದುದು.

---

## ಆರನೆಯ ಅಧ್ಯಾಯವು

— ೧ —

ಆಕ್ಷಣದಲ್ಲಿಯೇ ಕೌಶಿಕನ ಸಂತೋಷಾರ್ಥವಾಗಿ ಮಹಾ ಮಹೋತ್ಸವ ವೊಂದು ನಡೆಯಿತು. ಆ ಉತ್ಸವಕ್ಕೆ ವೀಣಾಗಾನವನ್ನು ತಿಳಿದಿದ್ದ ಗಾಯಕರೆಲ್ಲರೂ ಬಂದಿದ್ದರು. ಆ ವೀಣಾನಾದವನ್ನೂ ಗಾನವನ್ನೂ ಕೇಳುವ ಕೌತುಕದಿಂದ ಕೋಟಿಮಂದಿ ಚೇಟಿಯರೂ ಅಲ್ಲಿ ಸೇರಿದ್ದರು. ಆಗ ಲಕ್ಷ್ಮಿಯು ವಿಷ್ಣು ಪರಿಗ್ರಹದೊಡನೆ ಕೂಡಿ ಗಾನಮಾಡುತ್ತ ಬಂದಳು. ಅಲ್ಲಿ ಸಾವಿರಾರುಮಂದಿ ದೇವತೆಗಳು ಕೈಯಲ್ಲಿ ಬೆತ್ತವನ್ನು ಹಿಡಿದು ಗದ್ದಲವಿಲ್ಲದಹಾಗೆ ನಿಂತುಕೊಂಡಿದ್ದರು. ಆ ಮಹೋತ್ಸವ ದರ್ಶನಕ್ಕಾಗಿ ಬ್ರಹ್ಮಾದಿ ದೇವತೆಗಳು ದೊಡ್ಡ ಗುಂಪುಗಳಾಗುತ್ತ ಬಂದು ಸಂಭ್ರಮದಿಂದ ಬಂದು ಮೇಲೆ ಮೇಲೆ ಬೀಳುತ್ತಿರುವುದನ್ನು ನೋಡಿ ಚೇಟಿಗಳೂ ಗಣಾಧಿಪರೂ ಕೋಪವುಳ್ಳವರಾಗಿ ದೊಣ್ಣೆಗಳನ್ನು ಹಿಡಿದುಕೊಂಡು ಆ ಗುಂಪನ್ನೂ ಮುನಿಸ್ತೋತ್ರಪರರನ್ನೂ ಒಳಕ್ಕೆ ಹೋಗದಹಾಗೆ ನಿವಾರಿಸುತ್ತಲೂ, ಸಮೀಪಕ್ಕೆ ಬಂದವರನ್ನು ದೂರಕ್ಕೆ ಕಳುಹಿಸುತ್ತಲೂ ಇದ್ದರು. ಹೀಗೆ ನಿವಾರಿಸುವುದನ್ನು ಕಂಡು ಅಲ್ಲಿದ್ದವರೆಲ್ಲರೂ “ ದೊರೆಗಳಿವರಿಗೆ ನಾವಾರು ” ಎಂದುಕೊಂಡು ಬ್ರಹ್ಮನೊಡನೆ ಕೂಡಿ ದೂರಕ್ಕೆ

ಹೊರಟುಬಂದರು. ಹಾಗೆ ಮಾಡಿದುದು ಯುಕ್ತವೇ ಆಯಿತು ! ಆ ಸಭೆಯಲ್ಲಿ ತ್ರಿದಶರು ಮಾತ್ರ ಅಂಜಲಿಬದ್ಧರಾಗಿ ಕೋಪವನ್ನುಳಿದು ನಿಂತುಕೊಂಡರಲ್ಲದೆ ಉಳಿದ ಮಹರ್ಷಿಗಳೇ ಮೊದಲಾದವರೆಲ್ಲರೂ ಈಚೆಗೆ ಬಂದುಬಿಟ್ಟಿದ್ದರು. ಹೀಗಿರುವಾಗ ತುಂಬುರನನ್ನು ಮಾತ್ರ ಸನ್ಮಾನಿಸಿ ಒಳಕ್ಕೆ ಬರಮಾಡಿಕೊಂಡರು.

ಆ ತುಂಬುರನು ಒಳಹೊಕ್ಕು ದೇವೀ ದೇವರ ಸಮೀಪದಲ್ಲಿದ್ದ ಮಣೆಯಮೇಲೆ ಕುಳಿತುಕೊಂಡು, ಹಾಗೆಯೇ ಶಾಸ್ತ್ರಾನುಸಾರವಾಗಿ ನಾನಾ ಮೂರ್ಛನಾ ಕ್ರಮಗಳಿಂದ ಚೆನ್ನಾಗಿ ವೀಣಾನಾದದೊಡನೆ ಗಾನಮಾಡಿ ಅಲ್ಲಿದ್ದವರಿಗೆಲ್ಲಾ ಸಂತಸವನ್ನುಂಟುಮಾಡಿದನು. ವಿಷ್ಣುವು ಆ ಗಾಯಕೋತ್ತಮನನ್ನು ಕೌಶಿಕನ ಸಂತೋಷಾರ್ಥವಾಗಿ ಕರೆಯಿಸಿಕೊಂಡು ಅವನಿಗೆ ವಿಶೇಷವಾಗಿ ಗೌರವವನ್ನಿತ್ತನು. ಹಾಗೆ ಸನ್ಮಾನಿತನಾಗಿಯೂ, ದಿವ್ಯಮಾಲ್ಯಾದಿ ವಸ್ತ್ರಗಳಿಂದ ವಿಭೂಷಿತನಾಗಿಯೂ ತುಂಬುರನು ವಿಷ್ಣುಮಂದಿರದಿಂದ ತೆರಳಲು, ಬ್ರಹ್ಮಾದಿ ದೇವತೆಗಳೂ ಮುನಿಗಳೂ ಒಳಕ್ಕೆ ಹೋಗಿ ದೇವರಿಗೆ ನಮಸ್ಕರಿಸಿ ಜಯವೆಂದುಹೇಳಿ ಅಪ್ಪಣೆಯನ್ನು ಹೊಂದಿ ಬಂದ ದಾರಿಯನ್ನು ಹಿಡಿದರು. ತುಂಬುರನಿಗೆ ಆ ಸಭೆಯಲ್ಲಾದ ಸತ್ಕಾರವನ್ನು ನೋಡಿ ನಾರದನು, ಶೋಕಾವಿಷ್ಟಚಿತ್ತನಾಗಿ ತಾಪವನ್ನೈದುತ್ತ ತಾನು ಒಳಕ್ಕೆಹೋಗಲು ಲಕ್ಷ್ಮಿಯ ದಾಸಿಯರು ಅವನಿಗೆ ಅವಕಾಶವನ್ನು ಕೊಡಲಿಲ್ಲ. ನಾರದನು ಕುಪಿತನಾಗಿ ಲಕ್ಷ್ಮಿಯನ್ನು ಕುರಿತು–ಎಲೈಲಕ್ಷ್ಮಿಯೆ! ನೀನು ರಾಕ್ಷಸ ಭಾವದಿಂದ ವರ್ತಿಸಿ ಚೇಟಿಯರ ಮೂಲಕ ವೇತ್ರತಾಡನೆಯನ್ನು ಮಾಡಿಸಿ ನನ್ನನ್ನು ಹೊರಕ್ಕೆ ಹೊರಡಿಸಿದೆಯಾದ ಕಾರಣ ರಾಕ್ಷಸಗರ್ಭ ಸಂಭವಳಾಗು? ಗರ್ವಿತರಾದ ಚೇಟಿಯರು ನನ್ನನ್ನು ತಿರಸ್ಕರಿಸಿದುದರಿಂದ ನಾನು ಹೇಗೆ ಹೊರಗೆ ನಿಂತಿದ್ದೆನೋ ಹಾಗೆಯೇ ಆ ರಾಕ್ಷಸಿಯು ಹೇಲೆಯಿಂದ ಹೊರಗಣ ಭೂಮಿಯಲ್ಲಿ ನಿನ್ನನ್ನು ಇಡಲಿ," ಎಂದು ಶಾಪವನ್ನು ಕೊಟ್ಟನು. ಹೀಗೆ ಶಾಪಕೊಟ್ಟ ಮಾತ್ರಕ್ಕೆ ಭೂಮಿಯೆಲ್ಲಾ ನಡುಗಿಹೋಯಿತು. ದೇವಗಂಧರ್ವ ದಾನವರೇ ಮೊದಲಾದವರು ಹಾ ಹಾಕಾರವನ್ನು ಮಾಡತೊಡಗಿದರು. ನಾರದರು ನಾನು ಹುಟ್ಟಿದುದು ವ್ಯರ್ಥವಾಯಿತು. ಲಕ್ಷ್ಮಿಯ ಸಮೀಪದಲ್ಲಿ ನಾರಾಯಣನ ಸಮಾಯೋಗವನ್ನು

ತುಂಬುರನುಮಾತ್ರ ಹೊಂದಿದನು. ನನ್ನಬಾಳಿಗೆ ಅದೂ ಇಲ್ಲದೆ ಹೋ
ಯಿತು. ದೂತರು ನನ್ನನ್ನು ಹೊಡೆದು ದೂರವಾಗಿ ನಿಲ್ಲಿಸಿದರು. ನಾನು
ಜೀವಿಸಿಕೊಂಡು ಇಲ್ಲಿರುವದು ಸರಿಯಲ್ಲ.ಎಲ್ಲಿಗಾದರೂ ಪೋಗುವೆನು.ತುಂ
ಬುರನಿಂದ ನನಗಾಗಬೇಕಾದುದೇನು? ಎಂದು ರೋದಿಸುತ್ತ ವಿಶೇಷವಾಗಿ
ಚಿಂತಿಸುತ್ತಿದ್ದನು. ನಾರಾಯಣನು ದಾರುಣವಾದ ಲಕ್ಷ್ಮಿಯ ಶಾಪವನ್ನು
ಕೇಳಿ ಅವಳೊಡವೆರಡು ನಾರದನಿದ್ದೆಡೆಗೆ ಬಂದನು. ರಮೆಯು ಆ ವಿಪ್ರ
ನನ್ನು ಪ್ರಸನ್ನನಾಗುವಂತೆ ಮಾಡಿ ಅಂಜಲಿಬದ್ಧಳಾಗಿ "ಎಲೈ ಮುನಿಯೆ !
ನೀನು ನನ್ನವಿಷಯದಲ್ಲಿಟ್ಟ ಶಾಪವು ಅನ್ಯಥಾಆಗಲಾರದು ; ಆದರೆ ಅದ
ರಲ್ಲಿ ಸ್ವಲ್ಪ ವ್ಯತ್ಯಾಸವನ್ನು ಕೇಳಿಕೊಳ್ಳುವೆನು. ಅದರಂತೆ ದಯಮಾಡಿ
ನಡೆಯಿಸಿಕೊಡು ; ಅರಣ್ಯದಲ್ಲಿರುವ ಮುನಿರಕ್ತದಿಂದ ಪೂರಿತವಾದ ಕಲಶ
ದಲ್ಲಿನ ರಕ್ತವನ್ನು ಯಾವ ರಾಕ್ಷಸಿಯು ಕಾಮವಶಳಾಗಿ ಕುಡಿಯುವಳೋ
ಅವಳ ಗರ್ಭದಲ್ಲಿ ಆ ರಕ್ತದಿಂದ ಜನಿಸುವೆನು. ಈಪ್ರಕಾರ ಅನುಗ್ರಹಿಸು?
ಎಂದು ಬೇಡಿಕೊಂಡಳು.

ಅದನ್ನು ಕೇಳಿ ಇದು ಸಂಭವ ವಾಗತಕ್ಕದ್ದಲ್ಲವೆಂದು ಮನಸ್ಸಿನಲ್ಲಿ
ಅಂದುಕೊಂಡು ನಾರದನು ಹಾಗೆಯೇ ಆಗಲೆಂದು ಆಕೆಯ ದಾರುಣವಾದ
ಪ್ರಾರ್ಥನೆಯನ್ನನುಮೋದಿಸಿದನು. ಬಳಿಕಲಾ ನಾರಾಯಣನು ——
ನಾರದರೊಡನೆ— ಮುನಿಯೇ ! ಕೇಳು ನಾನು ಗಾನದಿಂದ ನನ್ನ ಹೆಸರ
ನ್ನು ಕೀರ್ತಿಸುವವರಿಗೆ ಪ್ರಸನ್ನನಾಗುವಷ್ಟು ದಾಸಿಗಳಿಗೂ ತಪಸ್ವಿ
ಗಳಿಗೂ, ಯಾಗಶೀಲರಿಗೂ, ತೀರ್ಥ ಯಾತ್ರಿಕರಿಗೂ, ಪ್ರಸನ್ನನಾಗಲಾರೆ
ನು. ಗಾನದ ಮೂಲಕ ನನ್ನ ನಾಮಸ್ಮರಣೆ ಗೈದವನು ನನ್ನ ಸಾಯು
ಜ್ಯವನ್ನು ಹೊಂದುವನು. ಈ ವಿಷಯದಲ್ಲಿ ಕೌಶಿಕನೇ ಸಾಕ್ಷಿಯು. ಅ
ವನು, ಗಾನದಿಂದ ನನ್ನ ನಾಮಸ್ಮರಣೆಮಾಡಿ ನನ್ನ ಲೋಕದಲ್ಲಿರುವನು.
ಮೂರ್ಛನಾಕ್ರಮದಿಂದ ಕೂಡಿದ ನನ್ನ ನಾಮಕೀರ್ತನೆಯು ನನಗೆ ಪರ
ಮ ಪ್ರಿಯವಾಗಿರುವುದು. ತುಂಬುರನು ಆ ಪ್ರಭಾವದಿಂದಲೇ ನಿನಗಿಂ
ತಲೂ ನನಗೆ ಪ್ರಿಯನಾಗಿರುವನು. ನೀನು ಅವನಂತೆ ಆಗಬೇಕಾದರೆ
ಮೂರ್ಛನಾಕಾಲ ಯೋಗದಿಂದಲೂ ಗಾನದಿಂದಲೂ ಅವನಿಗೆ ಸಮನಾಗ
ಬೇಕು. ಗಾನಯೋಗದಲ್ಲಿ ನಿನಗೆ ಅಭಿರುಚಿಯಿದ್ದರೆ ಉಲೂಕನನ್ನು ಹೋ

ಗಿನೋಡು ? ಅವನುಮಾನಸೋತ್ತರ ಶೈಲದಲ್ಲಿ ಗಾನಬಂಧುನೆಂದು ಪ್ರಸಿದ್ಧ ನಾಗಿದ್ದಾನೆ. ಅಲ್ಲಿಗೆ ಹೋದರೆ ನಿನಗವನು ಗಾನವನು ೃಪದೇಶಿಸುವನು," ಎಂದು ಹೇಳಿದನು.

ಅದನ್ನು ಕೇಳಿ ನಾರದನು ವಿಸ್ಮಯಾ ವಿಷ್ಟನಾಗಿ ಗಾನಬಂಧುವನ್ನು ಕಾಣಬೇಕೆಂಬ ನೆಪದಿಂದ ಮಾನಸೋತ್ತರದ ಪರ್ವತಕ್ಕೆ ದಾರಿ ತೆಗೆದನು. ತರುವಾಯ ನಾರದನಾ ಶೈಲವನ್ನು ಹೊಂದಿ ; ಅಲ್ಲಿ ಗಂಧರ್ವ - ಕಿನ್ನರ - ಯಕ್ಷ - ಅಪ್ಸರಸ್ಸುಗಳ ಮಧ್ಯದಲ್ಲಿ ತನ್ನಪಕ್ಷತಿಯಿಂದ ಅವರಿಗೆ ಗಾನವನ್ನು ಕಲಿಸುತ್ತಿದ್ದ ಗಾನ ಬಂಧುವನ್ನು ನೋಡಿದನು. ಮನೋಹರವಾದ ಕಂಠಸ್ವರಗಳುಳ್ಳ ಆ ಗಂಧರ್ವಾದಿಗಳು ಇಂಪಾಗಿ ಗಾನಮಾಡುತ್ತಿದ್ದರು. ಗಾನ ಬಂಧುವು, ನಾರದನು ಬಂದುದನ್ನು ದೂರದಿಂದಲೇ ಕಂಡು ನಮಸ್ಕರಿಸಿ ಯಥಾರ್ಥವಾಗಿ ಸ್ವಾಗತಪ್ರಶ್ನೆಯಿಂದ ಸನ್ಮಾನಿಸಿ ಬಳಿಕ— ಎಲೈಬ್ರಾಜ್ಮನೆ ! ನೀನೇಕೆ ಇಲ್ಲಿಗೆಬಂದೆ ? ನನ್ನಿಂದ ನಿನಗೇನುಕೆಲಸವಾಗಬೇಕು ? ಹೇಳು?ಸಿದ್ಧನಾಗಿ ನಡೆಯಿಸಿಕೊಡುವೆನೆಂದು ಬೆಸಗೊಂಡನು.ಆಗ ನಾರದನ! "ಎಲೈ ಪ್ರಾಜ್ಞಶಿರೋಮಣಿಯಾದ ಉಲೂಕೇಂದ್ರನೆ ! ನನ್ನ ವರ್ತಮಾನವನ್ನು ಕೊಂಚಕಲಾಲಿಸು. ಅದು ಬಹಳ ಅದ್ಭುತವಾಗಿರುವುದು. ವೈಕುಂಠ ನಗರದಲ್ಲಿ ಮಹಾವಿಷ್ಣುವು ಲಕ್ಷ್ಮೀ ಸಮೇತನಾಗಿ ಸರ್ವದಾ ಸಮೀಪದಲ್ಲಿರುವ ನನ್ನನ್ನು ನಿಯ್ಯಾಳಿಸಿ ತುಂಬುರನನ್ನು ಕರೆಯಿಸಿ ತುಂಬಾ ಮರ್ಯಾದೆಯನ್ನು ಮಾಡಿ ಅವನಿಂದ ಗಾನವನ್ನು ಕೇಳುತ್ತಿದ್ದನು. ಆಗ ಅನೇಕ ದೇವತೆಗಳೆಲ್ಲರೂ ಬಂದು ಸೇರಿದುದರಿಂದ ದ್ವಾರಪಾಲಕರು ಗದ್ದಲವನ್ನು ನಿಲ್ಲಿಸುವ ಉದ್ದಿಶ್ಯ ಬ್ರಹ್ಮಾದಿ ದೇವತೆಗಳನ್ನೂ ನನ್ನನ್ನೂ ಸಹಾ ಹೊರಗಡೆಯಲ್ಲಿಯೇ ನಿಲ್ಲಿಸಿದ್ದರು. ಕೌಶಿಕನೇ ಮೊದಲಾದವರು ಗಾನಯೋಗದಿಂದ ಹರಿಯನ್ನು ಆನಂದಾಂಬುಧಿಯಲ್ಲಿ ಮುಳುಗಿಸುತ್ತಿದ್ದರು; ಆ ಗಾನ ಯೋಗದಿಂದಲೇ ಕೌಶಿಕನು ವಿಷ್ಣುವನ್ನು ಮೆಚ್ಚಿಸಿ ಗಾಣಾಪತ್ಯವನ್ನು ಪಡೆದನು. ಗಾನವನ್ನು ನೋಡಿ ದುಃಖಾರ್ತನಾಗಿ ಮನಸ್ಸಿನಲ್ಲಿ " ನಾನು ಮಾಡಿದ ತಪಸ್ಸು ಈರೀತಿ ಪರಿಣಮಿಸಿತೆ ? ನಾನು ಮಾಡಿದ ಯಜ್ಞವೂ, ದಾನವೂ, ಅಧ್ಯಯನವೂ ಇಷ್ಟುಮಾತ್ರ ಫಲವುಳ್ಳದ್ದಾಯಿತೆ? ನಾನು ಮಾಡಿದ ಗಾನ ಶಾಸ್ತ್ರಾಧ್ಯಯನದಲ್ಲಿ

ಇತರ ಗಾನವು ಒಂದು ಕಲಾ ಮಾತ್ರವಾದರೂ ಹೋಲಲಾರದಲ್ಲಾ. ನನ್ನ ಗಾನವು ವಿಶೇಷವಾಗಿ ವಿಷ್ಣುವಿನ ಮಹಿಮೆಯಿಂದಲೇ ತುಂಬಿರುವುದು. ಆದರೂ ನನಗೆ ಬೇರೆ ಸನ್ಮಾನ ದೊರೆಯಲಿಲ್ಲವೆಂದು ಪಶ್ಚಾತ್ತಾಪ ಪಡುತ್ತಿದ್ದೆನು. ಹೀಗಿರುವುದನ್ನು ನೋಡಿ ಮಹಾವಿಷ್ಣುವು ಎಲೈ ದೇವರ್ಷಿಯೇ ! ನೀನು ಉಲೂಕರಾಜನ ಹತ್ತಿರಕ್ಕೆ ನಡೆ ? ಅಲ್ಲಿ ಗಾನವಿದ್ಯೆಯು ನಿನಗೆ ಚೆನ್ನಾಗಿ ಪ್ರಾಪ್ತವಾಗುವುದು.' ಎಂದು ಹೇಳಿ ನನ್ನನ್ನು ನಿನ್ನ ಸಮೀಪಕ್ಕೆ ಕಳುಹಿಸಿರುವನು. ನೀನು ಏನು ಮಾಡುವೆಯೋ ನೋಡು ? ನಾನು ನಿನಗೆ ಶಿಷ್ಯನಾಗಿರುವೆನು. ನನ್ನನ್ನು ಉದ್ಧರಿಸು, ಎಂದು ಬೇಡಿಕೊಂಡನು.

ಮಹಾ ಯಶಸ್ವಿಯಾದ ಗಾನ ಬಂಧುವು ನಾರದನೊಡನೆ— ಎಲೈ ಪೂಜ್ಯನೆ ! ಕೇಳು ? ನನ್ನ ಪೂರ್ವ ವೃತ್ತಾಂತವನ್ನು ಹೇಳುವೆನು. ಅದು ಬಹಳ ಆಶ್ಚರ್ಯಯುಕ್ತವಾಗಿಯೂ ಪಾಪವನ್ನು ಪರಿಹರಿಸುವುದಾಗಿಯೂ ಇರುವುದು. ಬಹುಕಾಲದ ಹಿಂದೆ ಭುವನೇಶನೆಂಬ ಪ್ರಸಿದ್ಧನಾದ ರಾಜನೊಬ್ಬನು ಧರ್ಮದಿಂದ ರಾಜ್ಯವನ್ನು ಪರಿಪಾಲಿಸುತ್ತಿದ್ದನು. ಅವನು ಸಾವಿರಾರು ಅಶ್ವಮೇಧ ಯಾಗಗಳನ್ನೂ ಅನೇಕವಾಗಿ ವಾಜಪೇಯ ಮೊದಲಾದುವುಗಳನ್ನೂ ಮಾಡಿದ್ದನಲ್ಲದೆ ಇನ್ನೂ ವಿಧವಿಧವಾದ ಯಜ್ಞಗಳಲ್ಲಿ ದಕ್ಷಿಣಾದಿಗಳನ್ನು ಕೊಟ್ಟು ಬ್ರಾಹ್ಮಣರನ್ನು ಬಹಳವಾಗಿ ತೃಪ್ತಿಗೊಳಿಸಿದ್ದನು. ಅಸಂಖ್ಯಾತವಾದ ಗೋದಾನ, ಸುವರ್ಣದಾನ ಕನ್ಯಾದಾನ, ವಸ್ತ್ರದಾನ ಗಜದಾನ ಅಶ್ವದಾನ ಮೊದಲಾದ ದಾನಗಳೆಲ್ಲವನ್ನೂ ಮಾಡಿದ್ದನು. ಇಷ್ಟಿದ್ದರೂ ಆ ರಾಯನು ತನ್ನ ದೇಶದಲ್ಲಿ ಗಾನವಿದ್ಯೆಯಿಂದ ಹರಿಯನ್ನು ಖಂಡಿತವಾಗಿಯೂ ಸ್ತುತಿಸಕೂಡದೆಂದೂ, ದೇವತಾಂತರವನ್ನು ಬೇಕಾದರೆ ಗಾನಮಾಡಬಹುದೆಂದೂ ಇದಕ್ಕೆ ತಪ್ಪಿದವನು ಶಿಕ್ಷಾರ್ಹನಾಗುವನೆಂದೂ ಕಟ್ಟು ಮಾಡಿದ್ದನು.

ಆ ಪರಮಪುರುಷನಾದ ವಿಷ್ಣುವನ್ನು ಮಾತ್ರ ವೇದಗಳಿಂದ ಸ್ತುತಿಸಬೇಕಲ್ಲದೆ ಮತ್ತಾವುದರಿಂದಲೂ ಹೊಗಳಕೂಡದು. ಉತ್ತಮವಾದ ವೇದಾಧ್ಯಯನವನ್ನು ಮಾಡಿದ ಬ್ರಾಹ್ಮಣನು ಗಾನವಿದ್ಯೆಯನ್ನು ಕಲಿಯಬಾರದು ! ಗಾನಯೋಗದಿಂದ ನನ್ನನ್ನು ಹೆಂಗಸರು ವಿಶೇಷವಾಗಿ

ಸ್ತುತಿಸಬೇಕು.” ಎಂದು ಗೊತ್ತುಮಾಡಿದ್ದನು. ಆ ರಾಯನ ಪುರದ ಪಕ್ಕದಲ್ಲಿಯೇ ಹರಿಮಿತ್ರನೆಂಬ ಬ್ರಾಹ್ಮಣನೊಬ್ಬನು ವಿಷ್ಣು ಭಕ್ತನಾಗಿಯೂ, ಸರ್ವದ್ವಂದ್ವ ವರ್ಜಿತನಾಗಿಯೂ ಇದ್ದು, ನಿತ್ಯವೂ ನದಿಗೆಹೋಗಿ ಅಲ್ಲಿ ಮಳಲಿನ ದಿಣ್ಣೆಯಮೇಲೆ ಹರಿಯ ಪ್ರತಿಮೆಯೊಂದನ್ನು ನಿರ್ಮಿಸಿ, ಆ ಪ್ರತಿಮೆಗೆ ಪೂಜೆಮಾಡಿ, ಧೂಪ ದೀಪ ನೈವೇದ್ಯಾದಿಗಳಿಂದ ದೇವರನ್ನು ತೃಪ್ತಿಗೊಳಿಸಿ, ಯಥಾನ್ಯಾಯವಾಗಿ ನಮಸ್ಕಾರಗಳನ್ನು ಮಾಡಿ, ಮನಸ್ಸ್ಥೈರ್ಯವನ್ನು ಹೊಂದಿ ಅಲ್ಲಿ ತಾಳ-ವೀಣೆ ಮೊದಲಾದುವುಗಳಿಂದ ಹರಿಯನ್ನು ಗಾನಮಾಡುತ್ತಿದ್ದನು. ಆ ಬ್ರಾಹ್ಮಣನ ಅಂತರಾತ್ಮವು ವಿಷ್ಣುವಿನಲ್ಲಿ ಅತಿ ಸ್ನೇಹಬಂಧಿತ್ತು. ಈ ವರ್ತಮಾನವನ್ನು ಆ ರಾಜನು ತಿಳಿದು ತನ್ನ ಭೃತ್ಯರನ್ನಲ್ಲಿಗೆ ಹೋಗುವಂತೆ ಅಪ್ಪಣೆಮಾಡಿದನು. ಅವರುಬಂದು ಆ ಬ್ರಾಹ್ಮಣನು ಮಾಡುತ್ತಿದ್ದ ಪೂಜೆಯನ್ನು ಚೆಕ್ಕುಪಾಲು ಮಾಡಿದುದಲ್ಲದೆ ಅವನನ್ನು ಹಿಡಿದುಕೊಂಡು ಹೋಗಿ ರಾಜನಿದಿರಿಗೆ ನಿಲ್ಲಿಸಿದರು. ಅರಸು ಕುಪಿತನಾಗಿ ಆ ವಿಪ್ರನನ್ನು ಗರ್ಜಿಸಿ ಅವನ ವಿಶಿಷ್ಟ ವಸ್ತುಗಳನ್ನೂ ಸುಲಿದುಕೊಂಡು, ತನ್ನ ರಾಜ್ಯದಲ್ಲಿರಕೂಡದೆಂದು ಆಚೆಗೆ ಹೊರಡಿಸಿಬಿಟ್ಟನು. ಆ ಹರಿಯ ಪ್ರತಿಮೆಯನ್ನು ರಾಯನು ಕಣ್ಣಿನಿಂದ ನೋಡಲಿಲ್ಲ. ಹೀಗೆ ಕೆಲವು ಕಾಲ ಕಳೆಯಲು ರಾಯನು ಕಾಲನರಮನೆಗೆ ಅತಿಥಿಯಾಗಿ ಲೋಕಾಂತರವನ್ನು ಪಡೆದು ಉಲೂಕ ದೇಹದಿಂದ ಅಲೆಯುತ್ತಿದ್ದನು. ಎಲ್ಲಿಗೆಹೋದರೂ ಹೊಟ್ಟೆಗೆ ಕೊಂಚವಾದರೂ ಪಿಂಡವು ದೊರೆಯದಂತಾಯಿತು. ಆಗ ಅವನು ಹಸಿವಿನಿಂದ ಬಳಲಿ ಬೇಸತ್ತು – ಯಮನೊಡನೆ ! ಎಲೈ ದೇವನೆ ! ದುರ್ಗತಿಯಿಂದ ನನಗೆ ಕ್ಷುದ್ಬಾಧೆಯು ಬಹಳವಾಗಿರುವುದು. ನಾನುಮಾಡಿದ ಪಾಪವೇನು ಇದಕ್ಕೆ ನಾನೇನುಮಾಡಲಿ ! ಹೇಳು ಎಂದು ಕೇಳಿಕೊಂಡನು.

ಬಳಿಕ ಧರ್ಮ ಪ್ರದರ್ಶಕನಾದ ಧರ್ಮರಾಯನು ಆ ರಾಜನಸಂಗಡ “ಎಲೈರಾಜನೆ ! ನೀನು ಜ್ಞಾನಹೀನನಾಗಿ ದೊಡ್ಡದಾದ ಪಾಪವೊಂದನ್ನು ಮಾಡಿರುವೆ. ವಾಸುದೇವ ಪರನಾದ ಹರಿಮಿತ್ರನೆಂಬುವನು ಮಹಾಪಾಪವನ್ನುಮಾಡಿ ಅದರ ಪರಿಹಾರಕ್ಕಾಗಿ ಶ್ರೀಕೃಷ್ಣನನ್ನು ಅರ್ಚಿಸುತ್ತಿದ್ದನು ಆಗ ನೀನು ಅವನಪೂಜೆಗೆ ವಿಘ್ನಮಾಡಿ ವಿಶೇಷವಾಗಿ ಪಾತಿತ್ಯವನ್ನು

ಪಡೆದುಕೊಂಡೆ? ಆದುದರಿಂದ ನಿನಗೆ ಕ್ಷುದ್ಬಾಧೆಯು ತುಂಬಾ ಉಂಟಾಗಿರುವುದು. ನೀನು ಮಾಡಿದ ದಾನಗಳೂ ಯಜ್ಞಗಳೂ ಇವೆಲ್ಲವೂ ನಿರರ್ಥಕಗಳಾಗಿ ಹೋದುವು. ನಿರಂತರವು ಗೀತ ನಾಟ್ಯ ಲಯದಿಂದ ಕೂಡಿ ಹರಿಯನ್ನು ಸ್ತುತಿಸುತ್ತ ಗಾನಮಾಡುತ್ತಿದ್ದ ಹರಿಮಿತ್ರನನ್ನೆಳೆದು ತರಿಸಿ ಅವನ ವಿತ್ತಾಪಹರಣವನ್ನು ಮಾಡಿದೆ? ವಾಸುದೇವನ ಹತ್ತಿರಿಟ್ಟಿದ್ದ ಉಪಹಾರಗಳನ್ನೆಲ್ಲಾ ನಿನ್ನಪ್ಪಣೆಯಮೇರಿಗೆ ನಿನ್ನ ಭೃತ್ಯರೇ ಬಂದು ಹಾಳುಮಾಡಿದರು. ಎಲೈ ರಾಜನೆ! ಹರಿಕೀರ್ತನೆಯನ್ನು ವಿನಾ ಬ್ರಾಹ್ಮಣರು ಇನ್ನಾವ ಗಾನವನ್ನೂ ಮಾಡಕೂಡದೆಂದು ನೀನು ವಿಧಿಸಬೇಕಾಗಿತ್ತು. ಹಾಗೆ ನೀನು ಮಾಡಲಿಲ್ಲ. ಆ ಹರಿಮಿತ್ರನ ಪಾಪವು ನಿನಗೆ ಸಂಘಟನೆ ಯಾಯಿತು. ನಿನ್ನ ಸ್ವರ್ಗಾದಿ ಫಲಭೋಗಗಳೆಲ್ಲವೂ ನೀರಿನಲ್ಲಿ ಹೋಮ ಮಾಡಿದಂತಾಯಿತು. ನೀನು ಬೆಟ್ಟದ ಗುಹೆಯಲ್ಲಿ ಎಲ್ಲಿಯಾದರೂ ಹೋಗಿ ವಾಸಮಾಡಿಕೊಂಡಿರು? ಪೂರ್ವದಲ್ಲಿ ನೀನು ಬಿಟ್ಟು ಬಂದಿರುವ ದೇಹವನ್ನು ಆಹಾರವಾಗಿ ಉಪಯೋಗಿಸಿಕೊ? ನಿನಗೆ ಒಂದು ಮನ್ವಂತರದ ವರೆಗೂ ನಿರಯ ಪ್ರಾಪ್ತಿಯುಂಟಾಗುವುದು. ತರುವಾಯ ನೀನು ಭೂಮಿಯಲ್ಲಿ ಜನಿಯಿಸುವೆ? ಬಹಳ ಕಾಲದ ಮೇಲೆ ನಿನಗೆ ಮಾನುಷ ಜನ್ಮವು ಬರುವುದು. ಎಂದು ಹೇಳಿ ಅಲ್ಲಿಯೇ ಅವನು ಅದೃಶ್ಯನಾದನು.

ಎಲೈ ನಾರದನೆ! ಆ ನಾನೇ ಪೂರ್ವದಲ್ಲಿ ಭುವನೇಶನೆಂಬ ರಾಜನಾಗಿದ್ದು ಈಗ ಉಲೂಕನಾಗಿರುವೆನು. ಹರಿಮಿತ್ರನಿಗೆ ಮೊದಲು ನಾನು ಮಾಡಿದ ದುಷ್ಕರ್ಮದಿಂದ ನನಗೀಗತಿಯಾಯಿತು. ತರುವಾಯ ನಾನು ಮಾನಸೋತ್ತರ ಶೈಲದ ಕೋಟರದಲ್ಲಿ ವಾಸವಾಗಿದ್ದೆನು. ಪೂರ್ವದ ನನ್ನ ದೇಹವು ಭಕ್ಷಣಾರ್ಥವಾಗಿ ಅಲ್ಲಿಗೆ ಬಂದಿತು. ಕ್ಷುಧಾರ್ತನಾಗಿ ನಾನದನ್ನು ತಿನ್ನುತ್ತಿದ್ದೆನು. ಅಷ್ಟರಲ್ಲಿಯೇ ದೈವ ಯೋಗದಿಂದ ಮಹಾಯಶಸ್ವಿಯಾದ ಹರಿಮಿತ್ರನು ಅಪ್ಸರೋಗಣಗಳಿಂದ ಹೊಗಳಿಸಿಕೊಳ್ಳುತ್ತ ಸೂರ್ಯನಂತೆ ಹೊಳೆಯುವ ವಿಮಾನದಲ್ಲಿ ಕುಳಿತುಕೊಂಡು ವಿಷ್ಣುದೇವ ಗಣಗಳೊಡನೆ ಕೂಡಿ ಆ ಮಾರ್ಗವಾಗಿಯೇ ಬರುತ್ತಿದ್ದನು. ಆ ಮಹಾತ್ಮನಾದ ವಿಷ್ಣು ಭಕ್ತನನ್ನು ನಾನು ನೋಡಿದೆನು. ಅವನೂ

ಉಲೂಕನಾದ ನನ್ನ ಹತ್ತಿರಿದ್ದ ರಾಜನ ದೇಹವನ್ನು ಕಂಡು ದಯಾಮಯನಾಗಿ ನನ್ನೊಡನೆ- ಎಲೈ ಪಕ್ಷಿಯೇ ! ಈ ದೇಹವು ರಾಜನ ದೇಹದಂತೆ ಕಾಣುವುದು. ನೀನು ಮಾತ್ರ ಉಲೂಕನಾಗಿರುವೆ ? ಇದೇನು ಮಹಾ ಆಶ್ಚರ್ಯವಾಗಿದೆ ಎಂದು ಪ್ರಶ್ನೆಮಾಡಿದನು. ಅದನ್ನು ಕೇಳಿ ನಾನು ಹರಿಮಿತ್ರನಿಗೆರಗಿ ಅಂಜಲಿಬದ್ಧನಾಗಿ ನನ್ನ ಪೂರ್ವ ವೃತ್ತಾಂತವನ್ನೆಲ್ಲಾ ತಿಳಿಸಿದೆನು. ಅವನು—ಎಲೈ ರಾಜನೆ ! ನೀನು ನನಗೆ ಮಾಡಿದ ಅಪರಾಧಕ್ಕೋಸ್ಕರ ತಕ್ಕ ಫಲವನ್ನು ಹೊಂದಿದೆ ಎಂದು ನುಡಿಯಲು ಅದಕ್ಕೆ ನಾನು "ಎಲೈ ಹರಿಮಿತ್ರನೆ ! ಒಂದು ಮನ್ವಂತರದವರೆಗೂ ಈಶವವನ್ನು ತಿನ್ನುತ್ತಿರಬೇಕು. ಆಮೇಲೆ ನನಗೆ ನಾಯಿಯಜನ್ಮವು ಬರುವುದು, ಅದೂ ಆದಮೇಲೆ ಮನುಷ್ಯನಾಗಿ ಹುಟ್ಟುವೆನು" ಎಂದು ಬಿನ್ನೈಸಿದೆನು. ಇದನ್ನು ಕೇಳಿ ಹರಿಮಿತ್ರನು ಕರುಣೆಯುಳ್ಳವನಾಗಿ "ಎಲೈ ಉಲೂಕರಾಜನೆ ! ಕೇಳು ? ನಿನ್ನ ಅಪರಾಧವನ್ನೆಲ್ಲಾ ನಾನು ಕ್ಷಮಿಸಿರುವೆನು. ಈ ಶವವು ಅದೃಶ್ಯವಾಗಿಹೋಗಲಿ. ನೀನು ನಾಯಿಯಾಗಬೇಡ, ನನ್ನನುಗ್ರಹದಿಂದ ನಿನಗೆ ಸಂಗೀತಶಾಸ್ತ್ರವು ಪ್ರಾಪ್ತವಾಗುವುದು. ಅದರಿಂದ ಹರಿಯನ್ನು ಚೆನ್ನಾಗಿ ಸ್ಮರಣೆಮಾಡು ? ನಿನ್ನ ನಾಲಿಗೆಯು ಚೆನ್ನಾಗಿ ವರ್ಣೋಚ್ಚಾರಣೆಯನ್ನು ಮಾಡಲಿ. ನೀನು ದೇವತೆಗಳಿಗೂ ವಿದ್ಯಾಧರರಿಗೂ ಗಂಧರ್ವರಿಗೂ ಅಪ್ಸರಸಿಯರಿಗೂ ಗಾನಶಿಕ್ಷಾಚಾರ್ಯನಾಗಿ ಬೇಕಾದ ಭಕ್ಷ್ಯಭೋಜ್ಯಾದಿಗಳಿಂದ ತೃಪ್ತಿಯನ್ನು ಹೊಂದು? ಕೆಲವುದಿವಸಗಳಲ್ಲಿಯೇ ನಿನಗೆ ಶುಭವಾಗುವುದು.?" ಎಂದು ನನ್ನೊಡನೆ ಹೇಳಿದನು. ಹಾಗೆ ವಿಷ್ಣುದೂತನಾದ ಹರಿಮಿತ್ರನ ಮಾತಿನಿಂದ ನನಗೆ ನಿರಯಪ್ರಾಪ್ತಿಯು ಕ್ಷಣಮಾತ್ರದಲ್ಲಿ ತೊಲಗಿಹೋಯಿತು. ವಿಷ್ಣುಭಕ್ತರಿಗೆ ಈಪ್ರಕಾರವಾದ ಕರುಣೆಯು ಪ್ರಕೃತಿಜನ್ಯವಾಗಿರುವುದು. ಅಲ್ಲದೆ ಅಪರಾಧಿಗಳನ್ನು ಶಿಕ್ಷೆಯಿಂದ ಬಿಡುಗಡೆ ಮಾಡುವುದು. ಹರಿಮಿತ್ರನು ಸ್ವಲ್ಪಹೊತ್ತು ಸೊದೆಯಾದ ನುಡಿಯಿಂದ ನನ್ನನ್ನು ಸಂತೈಸಿ ಹರಿಯನ್ನು ನೋಡಲು ಹೊರಟುಹೋದನು. ಎಲೈ ನಾರದನೆ ! ನಾನು ಗಾನಾಚಾರ್ಯನಿಂದ ಸಂಗತಿಯನ್ನು ಆಮೂಲಾಗ್ರವಾಗಿ ತಿಳಿಸಿದೆನು. ಅಲ್ಲದೆ ಹರಿಮಿತ್ರನ ಪ್ರಸಾದದಿಂದ ಆ ಮಹಾವಿಷ್ಣುವಿನ ಪ್ರಸಾದವನ್ನು ಪಡೆದೆನು. ನನ್ನ ಜನ್ಮ

ವೃತ್ತಾಂತವನ್ನು ಯಾರು ಕೇಳುವರೋ ಅವರು ಹರಿಯಮನೆಯನ್ನು ಸೇರಿ ಶಾಶ್ವಿತವಾದ ಸುಖವನ್ನು ಹೊಂದಿ ಆನಂದಿಸುವರು.

ಆರನೆಯ ಅಧ್ಯಾಯವು ಮುಗಿದುದು.

———o———

ಏಳನೆಯ ಅಧ್ಯಾಯವು.

—o—

ಮತ್ತೆ ಗಾನಬಂಧುವಾದ ಉಲೂಕರಾಜನು ನಾರದನೊಡನೆ "ಎಲೈ ಮುನೀಶ್ವರನೆ ! ಕೇಳು ? ಕಿನ್ನರರು, ವಿದ್ಯಾಧರರು, ಅಪ್ಸರರೇ ಮೊದಲಾದವರೆಲ್ಲರೂ ಶಿಕ್ಷಾಚಾರ್ಯನಾದ ನನ್ನ ಹತ್ತಿರ ಗಾನವಿದ್ಯಾಭ್ಯಾಸವನ್ನು ಮಾಡಲು ಬಂದಿರುವರು. ತಪಸ್ಸನ್ನು ಮಾಡಿದ ಮಾತ್ರಕ್ಕೆ ಗಾನವಿದ್ಯೆಯು ಲಭ್ಯವಾಗುವುದಿಲ್ಲ. ಶ್ರಮಪಟ್ಟು ಕಲಿತಹೊರತು ಸಂಗೀತಶಾಸ್ತ್ರವು ಚೆನ್ನಾಗಿ ಬರುವುದಿಲ್ಲ. ಆದುದರಿಂದ ನೀನುಮಾತ್ರ ನನ್ನಲ್ಲಿ ಶ್ರಮಪಟ್ಟು ಅಭ್ಯಾಸಮಾಡಿದರೆ ಗಾನವಿದ್ಯಾ ವಿಶಾರದನಾಗುವೆ" ಎಂದು ಹೇಳಲು, ನಾರದನು ಅದನ್ನು ಕೇಳಿ ಗಾನಬಂಧುವಿಗೆ ನಮಸ್ಕರಿಸಿ ಮೊದಲು ಗಾನಮಾಡುತ್ತಿದ್ದಂತೆ ಗಾನಮಾಡಲು ಮೊದಲುಮಾಡಿದನು. ಅದನ್ನು ನೋಡಿ ಉಲೂಕನು; "ಎಲೈ ಮುನಿಯೆ ! ಕೇಳು ? ಮೊದಲು ವಾಸುದೇವನಿಗೆ ನಮಸ್ಕಾರಮಾಡಿ ಗಾನವನ್ನು ಮಾಡಲಾರಂಭಿಸಬೇಕು. ಹಾಗೆಯೇ ಪ್ರಾರಂಭಿಸಿದರೆ ದೋಷಪ್ರಾಪ್ತಿಯಾಗುವುದು." ಎಂದು ತಿಳಿಸಲು ಅದಕ್ಕೆ ನಾರದನು ಹಾಗೆಯೇ ಆಗಲೆಂದು ಹೇಳಿ ಆ ಉಲೂಕೇಂದ್ರನಲ್ಲಿ ಶಿಕ್ಷಾಕ್ರಮದೊಡನೆ ಗಾನವಿದ್ಯವನ್ನು ಕಲಿತುಕೊಂಡನು. ತರುವಾಯ ಆ ಗಾನಬಂಧುವು ನಾರದನನ್ನು ಕುರಿತು ಎಲೈ ಮುನಿಯೆ ! ನೀನು ಖಂಡಿತವಾಗಿಯೂ ನಾಚಿಕೆಯನ್ನೈದಬೇಡ. ಸ್ತ್ರೀಸಂಗಮದಲ್ಲಿಯೂ, ಗಾನದಲ್ಲಿಯೂ, ಹಸಿವಿರುವಾಗಲೂ, ಕಥೆಯನ್ನು ಹೇಳುವಾಗಲೂ, ವಿವಾದವನ್ನು ನಡೆಯಿಸುವಾಗಲೂ, ಧ್ಯಾನಕಾಲದಲ್ಲಿಯೂ, ದ್ರವ್ಯವನ್ನು ಯಾಚಿಸುವುದರಲ್ಲಿಯೂ, ಆದಾಯವ್ಯಯದಲ್ಲಿಯೂ ಸ್ವಲ್ಪವೂ ನಾಚಿಕೆಪಡಕೂಡದು, ಕುಂಠಿತವಾಗಿಯೂ, ನಿಗೂಢವಾಗಿಯೂ, ಪ್ರಾವರಣಾದಿಗಳುಳ್ಳವನಾಗಿಯೂ, ಗಾನಮಾಡಬಾರದು, ಹಾಡುವಾಗ ಕೈಕಾಲುಗಳನ್ನು ಕುಣಿಸಿ

ಬಾಯಿಯನ್ನು ಸಿಕ್ಕಿದಹಾಗೆ ತೆರೆದುಕೊಂಡು ನಾಲಿಗೆಯನ್ನು ನೀಡುತ್ತ ವಕ್ರವಕ್ರವಾಗಿ ಚೇಷ್ಟೆಮಾಡುತ್ತ ಹಾಡಬಾರದು. ಹಾಸ, ಭಯ, ಕಂಪ ಶೋಕ, ಅನ್ಯಸ್ಮೃತಿ, ತೃಷೆ ಇವುಗಳು ಗಾನಯೋಗ್ಯಗಳಲ್ಲ. ಶಾಸ್ತ್ರಮಾರ್ಗವನ್ನು ಹಿಡಿದು ಗಾನಮಾಡಬೇಕು. ಒಂದೇಕೈಯಿಂದ ತಾಳವನ್ನು ಹಾಕಿ ಹಾಡಬಾರದು. ಕ್ಷುಧಾತುರನಾಗಿಯೂ, ಭಯಾರ್ತನಾಗಿಯೂ, ತೃಷಿತನಾಗಿಯೂ ಗಾನಮಾಡಕೂಡದು. ಕಣ್ಣುಗಳನ್ನು ಮುಚ್ಚಿಕೊಂಡು ಮನಸ್ಸಿಗೆ ಬಂದಹಾಗೆ ಕೂಗಬಾರದು. ಗಾನಯೋಗ್ಯಗಳಾದ ಚೇಷ್ಟೆಗಳನ್ನು ಮಾತ್ರ ಆಚರಿಸಬಹುದು; ಎಂದು ಉಪದೇಶಮಾಡಿದನು. ಅದನ್ನು ಕೇಳಿ ನಾರದನು, ಸವಿಧಿಯಾಗಿ ಆ ಉಲೂಕನಲ್ಲಿ ಒಂದು ದಿವ್ಯ ಸಹಸ್ರವರ್ಷದವರೆಗೂ ಗಾನವಿದ್ಯಾಭ್ಯಾಸ ಮಾಡುತ್ತಿದ್ದನು. ಗೀತಪ್ರಸ್ತಾರಿಕೆಯಲ್ಲಿ ಸುಶಿಕ್ಷಿತನೂ, ವೀಣೆ ಮೊದಲಾದುವುಗಳಲ್ಲಿ ಪ್ರವೀಣನೂ ಆಗಿ ಸ್ವರವಿಭಾಗಗಳೆಲ್ಲವನ್ನೂ ತಿಳಿದು, ಅನಂತರ ೨೬೦೦೦ ಭೇದಗಳಲ್ಲಿ ಪೂರ್ಣಪಾಂಡಿತ್ಯವನ್ನು ಪಡೆದು, ನಾರದನು ಸಂಗೀತಶಾಸ್ತ್ರ ಪಾರಂಗತನಾದನು. ತರುವಾಯ ಗಂಧರ್ವರೂ ಕಿನ್ನರರೂ ಮುನಿಯೊಡನೆ ಕೂಡಿ ಗಾನವನ್ನು ಮಾಡುತ್ತ ಅಮಂದಾನಂದವನ್ನನುಭವಿಸುತ್ತಿದ್ದರು. ಹೀಗಿರುವಾಗ ನಾರದನು ಒಂದುದಿನ ಗಾನಬಂಧುವಿನೊಡನೆ—" ಎಲೈ ಉಲೂಕೇಂದ್ರನೆ ! ನಿನ್ನ ಪ್ರಸಾದದಿಂದ ನಾನು ಚೆನ್ನಾಗಿ ಗಾನವಿದ್ಯಾವಿಶಾರದನಾದೆನು. ಎಲೈ ಮಹಾ ಪ್ರಾಜ್ಞನಾದ ಧ್ವಾಂಕ್ಷಶತ್ರುವೆ ? ನೀನು ಹೊಂದದಿರುವ ಯಾವ ಫಲವನ್ನು ನಾನು ಉಂಟುಮಾಡಬೇಕು. ಹೇಳು ? ಎಂದು ಬೇಡಿಕೊಂಡನು.

ಅದಕ್ಕೆ ಗಾನಬಂಧುವು, "ಎಲೈ ನಾರದನೆ! ಹದಿನಾಲ್ಕು ಮನ್ವಂತರಗಳಾದರೆ ಬ್ರಹ್ಮನಿಗೆ ಒಂದು ದಿವಸವಾಗುವುದಷ್ಟೆ? ಆಗ ಪ್ರಳಯವಾಗುವುದರಿಂದ ತ್ರೈಲೋಕ್ಯವೂ ಲೀನವಾಗಿ ಹೋಗುವುದು. ಅದುವರೆಗೆ ನನಗೆ ಲೋಕದಲ್ಲಿ ಯಶಸ್ಸುಂಟಾಗುವಹಾಗೂ, ಶುಭವು ಕೈಗೂಡುವಹಾಗೂ ಅನುಗ್ರಹಿಸು? ಇದೇ ನನಗೆ ಗುರುದಕ್ಷಿಣೆಯಾಗುವುದು.; ಎಂದು ಕೇಳಿಕೊಂಡನು. ಅದನ್ನುಕೇಳಿ ನಾರದನು ಹಾಗೆಯೇಆಗಲೆಂದು ಹೇಳಿ ಮತ್ತೆ ಉಲೂಕನನ್ನು ಕುರಿತು "ಎಲೈ" ನೀನು ಪ್ರಳಯ ವಾದಮೇಲೆ ಗರುಡನಾಗಿ ಜನಿಸುವೆ? ನೀನುಗಾನಗುಣದಿಂದಚ್ಯುತನನ್ನು ಮೆಚ್ಚಿಸಿರು

ವೆಯೂದಕಾರಣ ಆಗ ನಿನಗೆ ಆ ವಿಷ್ಣುವಿನಸಾಯುಜ್ಯವು ದೊರಕುವುದು. ಎಲೈ! ಮಹಾಪ್ರಾಜ್ಞನೆ! ನಿನಗೆ ಪರಮಮಂಗಳವಾಗಲಿ! ನನ್ನಲ್ಲಿ ಪ್ರಸನ್ನನಾಗು? ಗಮನಾನುಜ್ಞೆಯನ್ನುಕೊಡು? ನಾನುಹೊರಡುವೆನು'' ಎಂದು ಹೇಳಿ ಅಲ್ಲಿಂದ ತುಂಬುರನನ್ನು ಗೆಲ್ಲಬೇಕೆಂದು ಪಯಣವಮಾಡಿದನು.

ತರುವಾಯ ತುಂಬುರನ ಮನೆಯನ್ನು ಕುರಿತುಹೋಗುತ್ತಾ ನಾರದನು ಅವನ ಮನೆಯಸವಿಾಪದಲ್ಲಿ ವಿಕಾರವಾದ ಆಕಾರಗಳನ್ನು ಹೊಂದಿದ್ದ ಕೆಲವುಮಂದಿ ಸ್ತ್ರೀಪುರುಷರು ಇವನದೃಷ್ಟಿಗೆ ಗೋಚರರಾದರು. ಅವರಲ್ಲಿ ಕೆಲವರಿಗೆ ತೋಳಿರಲಿಲ್ಲ. ಕೆಲವರಿಗೆ ಕಾಲಿರಲಿಲ್ಲ. ಕೆಲವರಿಗೆ ತೊಡೆಗಳಿರಲಿಲ್ಲ. ಮೂಗಿಲ್ಲದೆ ಕೆಲವರಿದ್ದರು ಕೆಲವರಿಗೆ ಎದೆಯೇ ಇರಲಿಲ್ಲ. ಇನ್ನೂ ಕೆಲವರಿಗೆ ಕಣ್ಣುಗಳು ಹೋಗಿದ್ದುವು. ಕೆಲವರು ತಲೆಗಳಿಲ್ಲದೆಯೂ ಬೆಟ್ಟುಗಳಿಲ್ಲದೆಯೂ, ಕಾಣುತ್ತಿದ್ದರು. ಕೆಲವರ ಶರೀರವು ಭಿನ್ನವಾಗಿ ಗಾಯವನ್ನು ಹೊಂದಿತ್ತು. ಇಂಥವರು ಅಲ್ಲಿ ಸಾವಿರಾರು ಮಂದಿ ಸೇರಿದ್ದರು. ಅವರನ್ನೆಲ್ಲಾ ನೋಡಿ ನಾರದನು "ಎಲೈ ನೀವಾರು ? ನಿಮಗೀ ಯಂಗವಿಕಾರವೇಕಾಯಿತು" ಹೇಳಿರಿ? ಎಂದು ಕೇಳಿದನು. ಅದಕ್ಕವರೆಲ್ಲರೂಸೇರಿ ನಾರದನೊಡನೆ ಎಲೈಮುನಿಯೇ ನಿನ್ನಿಂದ

ನಮ್ಮ ಅಂಗಗಳೆಲ್ಲವೂ ಹೀನವಾಗಿ ಹೋದುವು. ನಾವು ಕೆಲವು ಮಂದಿ ರಾಗಗಳು ಕೆಲವರು ರಾಗಿಣಿಯರು. ನೀನು ಭಿನ್ನಸಂಧಿಯಾಗಿ ಗಾನಮಾಡಿದುದರಿಂದ ನಮ್ಮಂಗಗಳೆಲ್ಲವೂ ಈಪ್ರಕಾರ ಕುಂಠಿತಗಳಾಗಿ ಹೋದವು. ಪುನಃ ತುಂಬುರಗಾನದಿಂದ ಜೀವಿಸುವೆವೆಂದಿಲ್ಲಿಗೆ ಬಂದೆವು. ತುಂಬುರನು ನಮ್ಮನ್ನು ಬದುಕುವಂತೆ ಮಾಡುವನು. ನಿನ್ನಿಂದೀ ಅಂಗವೈಕಲ್ಯವು ನಮಗುಂಟಾಯಿತು. '' ಎಂದು ಹೇಳಿದನು.

ಆ ಆಶ್ಚರ್ಯವನ್ನು ಕಂಡು ನಾರದನು " ಅಯ್ಯೊ ! ನನ್ನ ಬಾಳಿಗಿಷ್ಟು ಬೆಂಕಿಹಾಕಿದರು. '' ಎಂದು ಅಂದುಕೊಂಡು ಜನಾರ್ದನನನ್ನು ಕಾಣುವುದಕ್ಕೆ ಬಂದನು. ಶ್ವೇತದ್ವೀಪ ನಿವಾಸಿಯಾದ ಹರಿಯು ನಾರದನನ್ನು ನೋಡಿ ಅವನೊಡನೆ " ಎಲೈ ಮುನಿಯೆ ! ಗಾನಬಂಧುವಿನಲ್ಲಿ ನೀನು ಚೆನ್ನಾಗಿ ಗಾನವಿದ್ಯಾಪಾರಂಗತನಾಗಲಿಲ್ಲ. ಹೀಗಿರುವಾಗ ನೀನು ತುಂಬುರನಿಗೆ ಸಮಾನನು ಹೇಗೆ ಆಗುವೆ ? ವೈವಸ್ವತಮನುವಿನ ೨೮ನೆಯ

ಯುಗದ ದ್ವಾಪರಾಂತ್ಯದೊಳಗೆ ಯದುವಂಶದಾದ ದೇವಕೀವಸುದೇವರಲ್ಲಿ ನಾನು ಕೃಷ್ಣನೆಂಬಭಿಧಾನದಿಂದ ಅವತರಿಸುವೆನು. ಆಗ ನೀನು ನನ್ನಲ್ಲಿಗೆ ಬಂದು ಈ ವಿಷಯವನ್ನು ಸ್ಮೃತಿಗೆ ತಂದುಕೊಡುವುದೇಆದರೆ ನಿನ್ನನ್ನು ನಾನು ಗಾನಸಂಪನ್ನನನ್ನಾಗಿ ಮಾಡುವೆನು. ಆಗ ನೀನು ತುಂಬುರನಿಗೆ ಸಮಾನನಾಗಿ ಅವನನ್ನೂ ಕೂಡ ಸಂಗೀತಶಾಸ್ತ್ರದಲ್ಲಿ ಮೀರಿಸುವೆ. ಆಪ್ರಕಾರ ನಾನು ನಿನಗನುಗ್ರಹವನ್ನು ಮಾಡುವೆನು ಅದುವರೆಗೂ ಶಾಸ್ತ್ರರೀತಿಯಾಗಿ ದೇವಗಂಧರ್ವರಲ್ಲಿ ಸಂಗೀತವನ್ನು ಕಲಿಯುತ್ತಿರು ” ಎಂದು ಹೇಳಿ ಅದೃಶ್ಯನಾದನು.

ತರುವಾಯ ಮುನಿಯು ನಾರಾಯಣನಡಿಗೆರಗಿ ವೀಣಾವಾದನ ತತ್ಪರನಾಗಿ, ಸರ್ವಾಭರಣ ಭೂಷಿತನಾದ ವಾಸುದೇವನಲ್ಲಿ ಮನಸ್ಸನ್ನಿಟ್ಟು ತಪೋನಿಧಿಯಾದನು. ಹಗಲಿನಮೇಲೆ ವೀಣೆಯನ್ನಿಟ್ಟುಕೊಂಡು ಲೋಕವೆಲ್ಲವನ್ನೂ ಸಂಚರಿಸುತ್ತಾ ಮನಸ್ಸಿನಲ್ಲಿಯೇ ಮರುಗಿ, ಅಷ್ಟದಿಕ್ಕುಗಳಲ್ಲಿಯೂ ಅಲೆಯುತ್ತ ಹರಿಯನ್ನು ವೀಣಾಧ್ವನಿಯಮೂಲಕ ಗಾನಮಾಡುತ್ತ, ಗಂಧರ್ವರಿಂದಲೂ, ಅಪ್ಸರಸಿಯರಿಂದಲೂ ಮಾನ್ಯನಾಗಿ, ಕೆಲವುಕಾಲದ ನಂತರ ಬ್ರಹ್ಮಲೋಕಕ್ಕೆ ಹೋದನು. ಅಲ್ಲಿ ಗೀತವಾದ್ಯವಿಶಾರದರಾದ “ ಹಾಹಾ ! ಹೂಹೂ ! ಎಂಬ ಗಂಧರ್ವರು. ನಿತ್ಯವೂ ಬ್ರಹ್ಮನ ಹತ್ತಿರ ಗಾನಮಾಡುತ್ತಿದ್ದರು. ಅವರೊಡನೆ ಸೇರಿ ನಾರದನು ಹರಿಯನ್ನು ಕುರಿತು ಗಾನಮಾಡುತ್ತಿದ್ದನು. ಬ್ರಹ್ಮನು ಆ ಮುನಿಶ್ರೇಷ್ಠನಿಗೆ ವಿಶೇಷವಾಗಿ ಸನ್ಮಾನಾದಿಗಳನ್ನು ಮಾಡಿ ಸಂತೋಷಪಡಿಸುತ್ತಿದ್ದನು. ಹೀಗೆ ನಾರದನು ತನ್ನ ಇಷ್ಟಬಂದಂತೆ ಲೋಕದಲ್ಲೆಲ್ಲಾ ಸುತ್ತಾಡಿ ಆಮೇಲೆ ತುಂಬುರನ ಮನೆಗೆ ಹೋದನು. ವೀಣೆಯನ್ನು ಹೆಗಲಮೇಲೆ ಹೊತ್ತುಕೊಂಡು ಬರುತ್ತಿದ್ದ ಇವನನ್ನು ಕೆಲವರು ನೋಡಿದರು. ಅವರಲ್ಲಿ ಸುರಕನ್ನಿಕೆಯರೂ, ಷಡ್ಜಾದಿಗಳೂ, ಸದ್ದೇವತೆಗಳೂ ಇವರೆಲ್ಲರೂ ಸೇರಿದ್ದರು. ನಾರದನು ಅವರನ್ನು ನೋಡಿ ನಾಚಿಕೊಂಡು ಹಿಂದಕ್ಕೆ ಜಾಗ್ರತೆಯಾಗಿ ಹೊರಟುಬಂದು, ಅಲ್ಲಲ್ಲಿ ಬಹಳವಾಗಿ ಸಂಗೀತವಿದ್ಯೆಯನ್ನು ಕಲಿಯುತ್ತಿದ್ದನು. ಕೆಲವುಕಾಲದಮೇಲೆ ಜಗನ್ಮಯನಾದ ವಿಷ್ಣುವು ದೇವಕೀ ವಸುದೇವರ ಉದರದಲ್ಲಿ ಯಾದವನಾಗಿ ಜನಿಸಿದನು.

ಗಾನವಿದ್ಯಾ ವಿಶಾರದನಾದ ನಾರದನು, ಸಪ್ತಸ್ವರಾಂಗನೆಯರನ್ನು ನೋಡಲು, ರೈವತಕ ಪರ್ವತದ ಬಳಿಗೆ ಹೋಗಿ ಅಲ್ಲಿ ಶ್ರೀ ಕೃಷ್ಣನನ್ನು ಕಂಡು, ಅವನಡಿದಾವರೆಗೆ ಮಣಿದು ಶ್ವೇತದ್ವೀಪದಲ್ಲಿ ಹಿಂದೆ ಹರಿಯು ಹೇಳಿದ್ದ ಗಾನವಿದ್ಯಾ ವಿಷಯವನ್ನು ನೆನೆದು ಆ ಸಂಗತಿಯನ್ನು ಶ್ರೀ ಕೃಷ್ಣನೊಡನೆ ವಿಜ್ಞಾಪಿಸಿಕೊಂಡನು.

ಅದನ್ನು ಕೇಳಿ ಕೃಷ್ಣನು ನಕ್ಕು ಜಾಂಬುವತಿಯೊಡನೆ "ಎಲೌ ಪ್ರಿಯೆ! ನೀನೀ ಮುನಿವರನಿಗೆ ಗಾನವಿದ್ಯೆಯನ್ನು ಕಲಿಸು," ಎಂದು ಹೇಳಲು ಆ ಜಾಂಬುವತಿಯು ಹಾಗೆಯೇ ಆಗಲೆಂದು ಪತಿಗೆ ಹೇಳಿ ಹೋಗುತ್ತಾ ನಾರದನನ್ನು ಕರೆದು ಶಾಸ್ತ್ರರೀತಿಯಾಗಿ ಅವನಿಗೆ ಗಾನವನ್ನು ಶಿಕ್ಷಿಸುತ್ತಬಂದಳು. ಹೀಗೆ ಒಂದುವರ್ಷಕಳೆದಮೇಲೆ ಮತ್ತೆ ಕೇಶವನು ನಾರದನನ್ನು ಕುರಿತು ಎಲೈ ಮುನಿಯೇ! ಇನ್ನುಮೇಲೆ ಸತ್ಯಭಾಮೆಯಲ್ಲಿ ಸಂಗೀತಶಾಸ್ತ್ರಾಭ್ಯಾಸವನ್ನು ಮಾಡು; ಜಾಂಬವತಿಯಲ್ಲಿ ಸಾಕು;" ಎಂದುಹೇಳಲು ನಾರದನು ಹಾಗೆಯೇ ಆಗಲೆಂದು ಸತ್ಯಭಾಮಾದೇವಿಯಬಳಿಗೆ ಹೋಗಿ ಅವಳಡಿಗೆರಗಿ ಅವಳನುಗ್ರಹದಿಂದ ಒಂದುವರ್ಷದಮೇಲೆ ಗಾನವಿದ್ಯಾಪಾರಂಗತನಾದನು.

ಆಮೇಲೆ ವಾಸುದೇವನು ಹೇಳಿದಮೇರೆಗೆ ರುಕ್ಮಿಣಿಯಮನೆಗೆ ಹೋಗಲು ಅಲ್ಲಿದ್ದ ದಾಸಿಯರೆಲ್ಲರೂ ಮುನಿಯನ್ನು ನೋಡಿ "ಎಲೈ ಮುನಿಯೆ ನಿನಗೆ ಎಷ್ಟುಹೇಳಿದರೂ ಸ್ವರಜ್ಞಾನವುಂಟಾಗಲೇಇಲ್ಲವೆಂದು ಹಿಯ್ಯಾಳಿಸಿದರು. ಆದರೂ ಮುನಿಯು ಎರಡುವರುಷಕಾಲ ಶ್ರಮಪಟ್ಟು ಕಲಿತಿದ್ದರೂ ಆಗ ಮತ್ತೆ ರುಕ್ಮಿಣಿಯಿಂದ ಶಿಕ್ಷಿತನಾಗಿ ಗಾನಮಾಡತೊಡಗಿದನು. ಸ್ವರಾಂಗನೆಯರುಬೇರೆ, ತಂತ್ರೀಯೋಗದಿಂದ ಮುನಿಯನ್ನೈದಲಿಲ್ಲ. ಇದನ್ನು ಕಂಡು ಕೃಷ್ಣನು ನಾರದನನ್ನು ಕರೆದು ತಾನೇ ಗೀತಾಶಾಸ್ತ್ರವನ್ನು ವಿಶೇಷವಾಗಿ ಶಿಕ್ಷಿಸಿದನು. ಕೃಷ್ಣನಶಿಕ್ಷೆಯಿಂದ ಸ್ವರಾಂಗನೆಯರೆಲ್ಲರೂ ನಾರದನನ್ನೊಲಿದರು. ಆಗ ಆ ಮುನಿಯ ಹೃದಯದಲ್ಲಿ ಬ್ರಹ್ಮಾನಂದವು ತುಂಬಿ ತುಳುಕಿತು. ಅವನಲ್ಲಿದ್ದ ರಾಗದ್ವೇಷಾದಿಗಳೆಲ್ಲಾ ದೂರವಾಗಿ ತೊಲಗಿಹೋದುವು. ತುಂಬುರನ ವಿಷಯದಲ್ಲಿದ್ದ ಹೊಟ್ಟೆಯಕಿಚ್ಚಂತು ಹುಟ್ಟುಗೆಟ್ಟುಹೋಯಿತು. ಆಮೇಲೆ ದೇವರ್ಷಿಯು ಜನಾರ್ದನನಡಿಗೆರಗಿ

ಸಂತೋಷದಿಂದ ನರ್ತಿಸಿ ನುತಿಸಿದನು. ಅದನ್ನು ಕಂಡು ಹೃಷೀಕೇಶನವ ನೊಡನೆ- ಎಲೈ ಮುನಿಯೆ ! ನೀನು ಸ್ವರಜ್ಞಾನದಲ್ಲಿ ಕುಶಲನೂ, ಪ್ರಾಜ್ಞ ನೂ ಆಗಿರುವೆ ; ಪ್ರಾಚೀನಗಾನಯೋಗದಿಂದ ನನ್ನ ಸಮೀಪದಲ್ಲಿಯೇ ನೀನು ಗಾನಮಾಡು ! ನಿನ್ನಕೋರಿಕೆಯಂತೆ ಎಲ್ಲವೂಸಫಲವಾಗಿ ನೆರವೇ ರಿದುವು. ನನ್ನಲೋಕದಲ್ಲಿ ನಿತ್ಯವೂ ತುಂಬುರನೊಡನೆ ಕೂಡಿ ಗಾನ ಮಾಡುತ್ತಿರು ? ಎಂದು ನುಡಿದನು. ಅದನ್ನು ಕೇಳಿ ಮುನಿಯು ಶಾಸ್ತ್ರ ರೀತ್ಯಾ ಗಾನ ವಿದ್ಯಾಪಾರವನ್ನು ಪೊಂದಿ ಲೋಕವನ್ನೆಲ್ಲಾ ಸಂಚರಿಸುತ್ತಾ ವಿಷ್ಣುವನ್ನು ಪೂಜಿಸುವಂತೆಯೇ ಲೋಕನಾಯಕನಾದ ಶಂಕರನನ್ನೂ ಪೂಜಿಸುತ್ತಿದ್ದನು. ಹರಿಯ ನಿಯೋಗದಿಂದ ಶಂಕರಾಲಯಕ್ಕೆ ಪೋಗಿ ಗಾನಮಾಡುತ್ತಿದ್ದುದಲ್ಲದೆ, ರುಕ್ಮಿಣಿ, ಸತ್ಯಭಾಮೆ, ಜಾಂಬುವತಿ ಇವರ ಮನೆಗೆ ಪೋಗಿ ಗಾನಮಾಡುತ್ತಿದ್ದನು; ಮತ್ತು ಶ್ರೀಕೃಷ್ಣನ ಜೊತೆಯಲ್ಲಿ ಯೂ ಗಾನ ಮಾಡುತ್ತಿದ್ದನು.

ಹೀಗೆ ನಾರದನು ಶ್ರುತಿಜಾತಿ ವಿಶಾರದನಾಗಿ ನಲಿಯುತ್ತ ಬ್ರಹ್ಮಾನಂ ದವನ್ನು ಪೊಂದುತ್ತಿದ್ದನು. ಎಲೈ ಭರದ್ವಾಜನೆ ! ಕೇಳು ? ನಿನಗೆ ಗಾನ ಕ್ರಮವನ್ನು ತಿಳಿಸಿದುದಾಯ್ತು. ಬ್ರಾಹ್ಮಣನು ವಾಸುದೇವಪರನಾಗಿ ದಿನವೂ ಗಾನ ಮಾಡುತ್ತಿದ್ದರೆ ಹರಿಯ ಸಾಯುಜ್ಯವನ್ನು ಪಡೆಯುವನು. ಅವನಿಗೆ ಸಮಸ್ತ ಯಜ್ಞಫಲಗಳೂ ಕರಗತಗಳಾಗುವುವು. ಹರಿಯನ್ನುಳಿದು ದೇವ ತಾಂತರವನ್ನು ಗಾನ ಮಾಡಿದರೆ ನರಕಭಾಗಿಯಾಗುವನು. ಮನೋವಾ ಕ್ಕಾಯಕರ್ಮಗಳಿಂದ ವಾಸುದೇವಪರನಾಗಿದ್ದುಕೊಂಡು ಗಾನಮಾಡುತ್ತ ಆ ಗಾನವನ್ನು ಕೇಳುತ್ತಾ ಇದ್ದುದರಿಂದ ಪ್ರಿಯಂವದನೆಂಬುವನೊಬ್ಬನು ಶ್ರೇಷ್ಠನಾದ ಗಂಧರ್ವನಾದನು. ಎಲೈ ಶಿಷ್ಯನೆ ! ನಿನಗೆ ಜಾನಕೀಜನ್ಮಹೇ ತುವನ್ನು ತಿಳಿಸುವನೆಪದಿಂದ ಸಂಗೀತ ವಿಚಾರವನ್ನು ತಿಳಿಸಿದುದಾಯಿತು. ಈ ವಿಚಾರವು ಮನಃಕಲ್ಮಷವನ್ನು ನಿಶ್ಶೇಷವಾಗಿ ಶೋಷಿಸಿ ಉತ್ತಮವಾದ ಗತಿಯನ್ನು ಕೊಡುವುದು.

ಏಳನೆಯ ಅಧ್ಯಾಯವು ಮುಗಿದುದು.

---o---

## ೮ನೆಯ ಅಧ್ಯಾಯವು.

—೦—

ಜಾನಕಿಯು ಶೋಣಿತೋದ್ಭೂತಳಾಗಿ ರಾಕ್ಷಸಿಯ ಗರ್ಭದಲ್ಲಿ ಹೇಗೆ ಹುಟ್ಟಿದಳು ? ಭೂಮಿಯತಲದಲ್ಲಿ ಹೇಗೆ ಜನಿಸಿದಳು ? ಎಂಬುವ ಸಂಗತಿಯನ್ನು ಹೇಳುವೆನು, ಎಲೈ ವಿಕ್ರಮೇಂದ್ರನೆ ! ಕೇಳು ? ಹತ್ತು ಮುಖಗಳುಳ್ಳ ರಾವಣನೆಂಬ ರಾಕ್ಷಸನೊಬ್ಬನು, ತಪಸ್ಸಿಗುಪಕ್ರಮಿಸಿ ಅದರಿಂದ ಮೂಲೋಕದೊಡೆತನವನ್ನೂ, ಸಾವಿಲ್ಲದಿರುವಿಕೆಯನ್ನೂ ಸಾಧಿಸಬೇಕೆಂದು ಅನೇಕ ವರ್ಷಗಳವರೆಗೂ ಸೂರ್ಯಜ್ವಾಲೆಗೆಣೆಯಾಗುವಂತೆ ತಪೋಜ್ವಾಲೆಯನ್ನು ಲೋಕದಲ್ಲಿ ಪ್ರಸರಿಸಿದನು. ಅವನ ತೇಜಸ್ಸಿನಿಂದ ಜಗತ್ತೆಲ್ಲವೂ ತಪಿಸಿ ಹೋಗುವಂತಾಗಲು, ಆಗ ಬ್ರಹ್ಮನು, ದೇವತೆಗಳೊಡನೆ ಆ ರಾವಣನ ಹತ್ತಿರಕ್ಕೆ ಬಂದು, " ಎಲೈ ಪೌಲಸ್ತ್ಯನೆ! ತಪಸ್ಸು ಸಾಕು. ಅದನ್ನು ನಿಲ್ಲಿಸು? ನೀನು ಮಾಡುತ್ತಿರುವ ತಪಸ್ಸಿನಿಂದ ಲೋಕವೆಲ್ಲವೂ ಭಸ್ಮೀಭೂತವಾಗುತ್ತಿರುವುದು. ನಾನು ವರವನ್ನು ಕೊಡುವೆನು, ನಿನ್ನ ಮನಸ್ಸಿನಲ್ಲಿರುವುದೇನು ? ವರದಿಂದ ಬೇಕಾದುದನ್ನು ಪಡೆದುಕೊ ? ಕೊಡುತ್ತೇನೆ, ಎಂದು ಹೇಳಿದನು.

ಆ ಮಾತನ್ನು ಕೇಳಿ ರಾವಣನು ಸೂರ್ಯಬಿಂಬದ ಕಡೆಇದ್ದ ತನ್ನ ದೃಷ್ಟಿಯನ್ನು ತೆಗೆದು ಬ್ರಹ್ಮನಕಡೆ ತಿರುಗಿಸಿ, ಆ ಜಗನ್ನಾಥನನ್ನು ವಂದಿಸಿ " ಎಲೈ ಪ್ರಭುವೆ ! ನೀನು ವರದನಾಗಿದ್ದಪಕ್ಷದಲ್ಲಿ ನನಗೆ ಸರ್ವಾಮರತ್ವವನ್ನು ದಯಪಾಲಿಸು " ಎಂದು ಕೇಳಲು, ಅದಕ್ಕೆ ಬ್ರಹ್ಮನು " ನಿನಗೆ ಸರ್ವಾಮರತ್ವವು ಬರತಕ್ಕುದಲ್ಲ, ಅದನ್ನು ಬಿಟ್ಟು ಬೇರೆ ಇನ್ನಾವ ವರವನ್ನಾದರೂ ಸರಿಯೇ ಕೇಳಿಕೊ ! ಕೊಡುವೆನು" ಎಂದು ತಿಳಿಸಿದನು. ರಾವಣನು ಕಪಟವಾಪಿಯಾದ ರಾಕ್ಷಸನಾದುದರಿಂದ ದೇವತೆಗಳು-ಯಕ್ಷರು-ರಾಕ್ಷಸರು-ಪಿಶಾಚಗಳು-ವಿದ್ಯಾಧರರು-ಕಿನ್ನರರು-ಅಪ್ಸರರೇ ಮೊದಲಾದ ಯಾವ ದೇವತೆಗಳಿಂದಲೂ ಯಾವವಿಧದಲ್ಲಿಯೂ ನನಗೆ ಮರಣವಾಗದಂತೆಯೂ, ನನ್ನ ಮಗಳನ್ನು ಮೋಹದಿಂದ ನಾನಪೇಕ್ಷಿಸಿದಾಗ ಅವಳು ಸಮ್ಮತಿಸದಿದ್ದರೆ ಆಗ ಮಗಳಿಂದಲೇ ನನಗೆ ಮರಣವಾಗುವಹಾಗೂ ವರವನ್ನು ಕೊಡಬೇಕೆಂದು ಬೇಡಿಕೊಂಡನು. ಅದನ್ನು ಕೇಳಿ ಬ್ರಹ್ಮನು ಹಾಗೆಯೇ ಆಗಲೆಂದು

ಹೇಳಿ ಅಲ್ಲಿನಿಲ್ಲದೆ ಜಾಗ್ರತೆಯಿಂದ ತನ್ನ ಲೋಕಕ್ಕೆ ಹೊರಟುಹೋದನು. ಆ ದುರುಳರಾಕ್ಷಸನು ಮನುಷ್ಯರನ್ನು ಮಾತ್ರ ಹುಲ್ಲುಕಡ್ಡಿಗಿಂತಲೂ ಕಡೆಯಾಗಿ ಭಾವಿಸಿ ಲೆಕ್ಕದಲ್ಲಿಯೇ ಇಟ್ಟಿರಲಿಲ್ಲ. ಹೀಗಿರಲಾಗಿ ಆ ರಾವಣನು ಬ್ರಹ್ಮದತ್ತವರದಿಂದಲೂ, ಬಲದಿಂದಲೂ ದರ್ಪವುಳ್ಳವನಾಗಿ, ಬಾಹುಬಲದಿಂದ ಮೂರುಲೋಕವನ್ನೂ ಜಯಿಸಿ, ಒಮ್ಮೆ ದಂಡಕಾರಣ್ಯಕ್ಕೆ ಬಂದನು. ಅಲ್ಲಿ ಅಗ್ನಿಕಲ್ಪರಾಗಿದ್ದ ಮುನಿಗಳನ್ನು ನೋಡಿ ಮನಸ್ಸಿನಲ್ಲಿ ಅಳುಕಿ, “ಇವರನ್ನು ನಾನು ಗೆಲ್ಲದೆ ಹೇಗೆತಾನೇ ಮೂಲೋಕದಜಯಕ್ಕೂ ಭಾಗಿಯಾಗುವೆನು. ಈ ಮಹಾತ್ಮರ ವಧೆಯಿಂದ ನನಗೆ ಬೇರೆ ಶ್ರೇಯಸ್ಸಾಗುವುದಿಲ್ಲವೆಂದು ತೋರುತ್ತದೆ.'' ಎಂದು ಚಿಂತಿಸುತ್ತ ಆ ದುರಾತ್ಮನು ಆ ಮುನಿಗಳೊಡನೆ “ಎಲೈ ಮುನಿಗಳಿರಾ! ನಾನು ಲೋಕಗಳಿಗೆಲ್ಲಾ ಶಿಕ್ಷಕನಾಗಿ ಜಗತ್ತನ್ನೆಲ್ಲಾ ಗೆದ್ದಿರುವೆನು, ನಿಮ್ಮನ್ನು ಗೆಲ್ಲಲು ಇಲ್ಲಿಗೆ ಬಂದಿಗೇನೆ, ಬೇಗ ಜಯವನ್ನು ಕೊಡಿ ಎಂದು ಹೇಳಿ ಬಾಣದಕೊನೆಯಿಂದ ತಿವಿದು ಅವರಂಗದಲ್ಲಿ ಬಲಾತ್ಕಾರದಿಂದ ರಕ್ತವನ್ನು ತೆಗೆದುಕೊಂಡು, ಅಲ್ಲಿಯೇ ನೂರುಮಂದಿ ಮಕ್ಕಳಿಗೆ ತಂದೆಯಾಗಿದ್ದ ಗೃತ್ಸಮದನೆಂಬ ಬ್ರಾಹ್ಮಣನ ಹೆಂಡತಿಯು “ಲಕ್ಷ್ಮಿಯು ನನ್ನ ಮಗಳಾಗಿ ಹುಟ್ಟಲಿ'' ಎಂದು ಗಂಡನನ್ನು ಬಹಳವಾಗಿಪ್ರಾರ್ಥಿಸುತ್ತಿದ್ದುದರಿಂದ ಆ ಮುನಿಯು ಪ್ರತಿದಿವಸವೂ ಕಲಶದಲ್ಲಿ ಹಾಲನ್ನುಹಾಕಿ ಅದನ್ನಭಿಮಂತ್ರಿಸುತ್ತ ಒಂದು ಕಡೆ ನಿಯತವಾಗಿಟ್ಟಿದ್ದನು; ಅವನು ದೈವಯೋಗದಿಂದ ಆ ದಿನವೇ ವನಕ್ಕೆ ಹೊರಟುಹೋಗಿರಲು, ರಾವಣನಾ ಕಲಶವನ್ನು ತೆಗೆದುಕೊಂಡು, ಅದರಲ್ಲಿ ಆ ಮುನಿಗಳ ಶೋಣಿತವನ್ನು ಹಾಕಿ ಅದನ್ನು ಜೋಪಾನದಿಂದ ತನ್ನ ಮನೆಗೆ ತೆಗೆದುಕೊಂಡು ಹೋಗಿ ಹೆಂಡತಿಯಾದ ಮಂಡೋದರಿಯೊಡನೆ “ಎಲೌ ಪ್ರಿಯೆ! ಈ ಕಲಶವನ್ನು ಮಾತ್ರ ಎಚ್ಚರಿಕೆಯಿಂದ ಕಾಪಾಡಿಕೊಂಡಿರು ಇದರಲ್ಲಿರುವ ರಕ್ತವು ವಿಷಕ್ಕಿಂತಲೂ ಉಲ್ಬಣವಾಗಿರುವುದು, ಇದನ್ನು ಯಾರಿಗೂ ಕೊಡಬೇಡ; ನೀನು ಪಾನಮಾಡಲೂ ಬೇಡ” ಎಂದು ಹೇಳಿ ಆ ಕಲಶವನ್ನವಳಕೈಗೆ ಕೊಟ್ಟನು.

ಅನಂತರ ತ್ರೈಲೋಕ್ಯ ವಿಜಯ ಲಾಭದಿಂದ ರಾವಣನುಹೊರಟು ದೇವ, ದಾನವ, ಯಕ್ಷ ಗಂಧರ್ವ ಮೊದಲಾದ ದೇವಕನ್ನೆಯರನ್ನುಬಲಾತ್ಕಾರದಿಂದ ತೆಗೆದುಕೊಂಡು ಬಂದು, ಸಹ್ಯಪರ್ವತದ ಮಂದಿರದಲ್ಲಿಯೂ ಹಿಮ

ವಂತ ಮೇರು ವಿಂಧ್ಯ ಮುಂತಾದ ಗಿರಿಯ ಸಾನುಗಳಲ್ಲಿಯೂ ಆ ಸ್ತ್ರೀಯ ಕೊಡನೆ ಕ್ರೀಡಿಸುತ್ತ ಸ್ವೇಚ್ಛೆಯಾಗಿ ವಿಹರಿಸುತ್ತಿದ್ದನು. ಮಂಡೋದರಿಯು ಗಂಡನಿರೀತಿ ಇದ್ದುದನ್ನು ನೋಡಿ ಮನದೊಳಗೆ ಮರುಗಿ ಚಿಂತಿಸುತ್ತ "ನನ್ನ ಗಂಡನು ನನ್ನನ್ನು ಕಣ್ಣೆತ್ತಿಯೂ ನೋಡುವುದಿಲ್ಲ ನಾನಿರುವುದು ವ್ಯರ್ಥ, ನನ್ನ ಯೌವನವನ್ನೂ ಕುಲವನ್ನೂ ಸುಡಬೇಕು ಅಕಟಕಟ! ಗಂಡನು ನನ್ನನ್ನು ವಂಚಿಸುತ್ತಿರುವನು ನಾನು ಪ್ರಾಣವನ್ನಿಟ್ಟುಕೊಂಡಿರುವುದಕ್ಕಿಂತಲೂ ಸಾಯುವುದೇ ಮೇಲೆಂದು ತೋರುತ್ತದೆ. ಮೊದಲೇ ಅವನು ವಿಷಕ್ಕಿಂತ ಕ್ರೂರವಾದ ಶೋಣಿತವನ್ನು ತಂದು ಕಲಶದಲ್ಲಿಟ್ಟು ನನ್ನ ವಶಕ್ಕೆ ಕೊಟ್ಟಿರುವನಷ್ಟೆ ? ಅದನ್ನಾದರೂ ಕುಡಿದು ಸಾಯುವೆನು" ಎಂದು ಅಂದುಕೊಂಡು, ಅದನ್ನು ಕುಡಿಯಲು ಲಕ್ಷ್ಮಿಗೆ ಆಧಾರವಾದ ಕ್ಷೀರದೊಡನೆ ಆರಕ್ತವು ಮಿಶ್ರವಾಗಿದ್ದ ಕಾರಣ ತತ್ ಕ್ಷಣದಲ್ಲಿಯೇ ಮಂಡೋದರಿಯ ಉದರದಲ್ಲಿ ಸೂರ್ಯಕೋಟಿ ಪ್ರಕಾಶಮಾನವಾದ ಗರ್ಭವಾವಿರ್ಭವಿಸಿತು. ಆಗ ಮಂಡೋದರಿಗೆ ಬಹಳ ಆಶ್ಚರ್ಯವುಂಟಾಗಿ "ವಿಷಕ್ಕಿಂತಲೂ ಕಠಿಣವಾದ ರಕ್ತವನ್ನು ಕುಡಿಯಲು ನನಗೆ ಗರ್ಭವುಂಟಾಯಿತು. ನನ್ನ ಪತಿಯು ಪಕ್ಕದಲ್ಲಿಲ್ಲ; ಅವನು ಕಾಮಿನಿಯರಿಂದ ಕೂಡಿ ಕ್ರೀಡಿಸುತ್ತ ಕಾಮಿಯಾಗಿ ಎಲ್ಲಿಯೋ ಅಲೆಯುತ್ತಿರುವನು. ನಾನು ಒಂದುವರ್ಷಕಾಲ ಗಂಡನ ಜೊತೆಯಲ್ಲಿ ವಾಸಮಾಡಕೂಡದು. ಗಂಡನ ಸಭೆಯಲ್ಲಿ ಪತಿವ್ರತೆಯಾದ ನಾನು ಗರ್ಭಿಣಿಯಾಗಿ ಏನುಹೇಳಲಿ, ಯಾರಾದರೂ ನೋಡಿದರೆ ಏನೆಂದುಕೊಳ್ಳುವರು" ಎಂದು ಯೋಚಿಸುತ್ತ ತೀರ್ಥ ಯಾತ್ರೆಯನೆಪದಿಂದ ವಿಮಾನವನ್ನೇರಿ ಕುರುಕ್ಷೇತ್ರಕ್ಕೆ ಹೋಗಿ, ಅಲ್ಲಿ ಗರ್ಭವನ್ನು ಕಳೆದುಕೊಂಡು, ಭೂಮಿಯಲ್ಲಿ ಬಚ್ಚಿಟ್ಟು ಸರಸ್ವತೀ ನದಿಯಲ್ಲಿ ಮಿಂದು. ಅಲ್ಲಿಂದ ತನ್ನಮನೆಗೆ ಬಂದು ತಾನುಮಾಡಿದ ಕಾರ್ಯವನ್ನು ಯಾರಿಗೂ ತಿಳಿಸದೆ ಗುಟ್ಟಾಗಿಟ್ಟುಕೊಂಡಿದ್ದಳು.

ಕೆಲವು ಕಾಲದಮೇಲೆ ಜನಕನೆಂಬ ರಾಜರ್ಷಿಯು ಯಜ್ಞಮಾಡುವುದಕ್ಕೋಸ್ಕರ ಕುರುಕ್ಷೇತ್ರಕ್ಕೆ ಹೋಗಿ ಚಿನ್ನದ ನೇಗಿಲಿನಿಂದ ನೆಲವನ್ನು ಉಳುತ್ತಿದ್ದನು. ಆ ನೇಗಲಿನ ಗೆರೆಯ ಸಾಲಿನಲ್ಲಿಯೇ ಕನ್ನಿಕೆಯೊಬ್ಬಳು ನೆಲದಿಂದ ಮೇಲಕ್ಕೆದ್ದಳು. ಅವಳಮೇಲೆ ಪುಷ್ಪವರ್ಷವುಂಟಾಯಿತು.

ಆ ಆಶ್ಚರ್ಯವನ್ನು ರಾಜನು ನೋಡಿ ವಿಸ್ಮಿತನಾಗಿ ದಿಗ್ಭ್ರಾಂತನಾದನು. ಆಗ ಆ ರಾಜನನ್ನು ಕುರಿತು—“ಎಲೈ ರಾಜನೆ! ಸುಂದರಿಯಾದೀಕನ್ನಿಕೆಯನ್ನು ನೀನು ತೆಗೆದುಕೋ ? ನಿನ್ನ ಮನೆಯಲ್ಲಿ ಮಹತ್ಕಾರ್ಯವೊಂದೊದಗುವುದು. ಇವಳಿಂದ ನೀನು ಬಹು ಕ್ಷೇಮವನ್ನು ಹೊಂದುವೆ ! ಯಜ್ಞವನ್ನೂ ನೆರವೇರಿಸು ? ಇದು ನಿನಗೆ ವಿಘ್ನವಾದುದಲ್ಲ ; ಈ ಬಾಲೆಯು ಸೀತಾ ಎಂಬ ನೇಗಿಲ ಸಾಲಿನಲ್ಲಿ ಹುಟ್ಟಿದುದರಿಂದಿವಳಿಗೆ ಸೀತೆಯೆಂಬ ಹೆಸರನ್ನಿಡು ? ಇವಳನ್ನೇ ಪುತ್ರಿಯನ್ನಾಗಿ ಭಾವಿಸು ?” ಎಂದು ಆಕಾಶವಾಣಿಯು ನುಡಿದು ಅದೃಶ್ಯವಾಯಿತು. ಅದನ್ನು ಕೇಳಿ ರಾಜನು ಹರ್ಷಕಡಲೊಳಗೆ ಮುಳುಗಿ ಬಹಳ ಹಣವನ್ನು ವ್ಯಯಮಾಡಿ ಯಜ್ಞವನ್ನು ನೆರವೇರಿಸಿದನು. ಸೀತೆಯನ್ನು ಮನೆಗೆ ಕರೆದುಕೊಂಡು ಬಂದು, ವಿಶ್ವಾಸಪೂರ್ವಕವಾಗಿ ಅವಳನ್ನು ಪೋಷಿಸುತ್ತಿದ್ದನು. ಎಲೈ ಮುನಿಯೆ! ಇದೋ ನಿನಗೆ ಸೀತಾಜನ್ಮ ಕಾರಣವನ್ನು ವಿವರವಾಗಿ ನಿರೂಪಿಸಿದೆನು. ಇದನ್ನು ಕೇಳಿದವರು ಪಾಪವನ್ನು ಕಳೆದುಕೊಳ್ಳುವರು. ಈ ಕಥಾಶ್ರವಣದಿಂದ ಶ್ರೀರಾಮ ಪತ್ನಿಯಾದ ಲಕ್ಷ್ಮಿಯು ಶ್ರೋತೃಗಳ ಮನೆಯನ್ನು ಬಿಟ್ಟು ಯಾವಾಗಲೂ ಅಗಲುವುದಿಲ್ಲ.

ಎಂಟನೆಯ ಅಧ್ಯಾಯವು ಮುಗಿದುದು.

———o———

ಒಂಭತ್ತನೆಯ ಅಧ್ಯಾಯವು.

——o——

ಶ್ರೀ ರಾಮಚಂದ್ರನು ದಶರಥನೇ ಮೊದಲಾದ ಬಂಧು ವರ್ಗದೊಡನೆ ಕೂಡಿ, ಮಿಥಿಲಾಪುರದಲ್ಲಿ ಸೀತಾದೇವಿಯನ್ನು ಮದುವೆಯಾಗಿ ತಂಮಂದಿರೊಡನೆ ಬೆರೆದು, ಭಾರ್ಯಾಸಮೇತನಾಗಿ ಅಲ್ಲಿಂದ ಪಯಣಮಾಡಿಕೊಂಡು ಅಯೋಧ್ಯೆಗೆ ಬರುತ್ತಿದ್ದನು. ‘ಶ್ರೀ ರಾಮನು ಧನುರ್ಭಂಗ ಮಾಡಿ ಸೀತೆಯನ್ನು ಮದುವೆಯಾದನೆಂದು ಕೇಳಿ, ಭೃಗು ನಂದನನಾದ ಪರಶುರಾಮನು, ಆ ದಾರಿಯಲ್ಲಿಯೇ ಎದುರಾಗಿ ಬರುತ್ತಾ, ತನ್ನ ಮನಸ್ಸಿನಲ್ಲಿ ‘ಶ್ರೀ ರಾಮನ ಬಲವು ಹೇಗೆ ಇದೆಯೋ’ ನೋಡೋಣ ! ಎಂದೆಂದುಕೊಂಡು, ಕ್ಷತ್ರಿಯರನ್ನು ಮೂಲೋತ್ಪಾಟನೆ ಮಾಡಿದ ಧನುಸ್ಸಿ

ನೊಡನೆ ಯುದ್ಧಕ್ಕೆ ಸಿದ್ಧನಾದನು. ಆಗ ಧನುರ್ಧರನಾಗಿ ಯುದ್ಧೋನ್ಮುಖನಾದ ಪರಶುರಾಮನನ್ನು ನೋಡಿ 'ಶ್ರೀ ರಾಮನು' ಎಲೈ ಮುನಿಯೆ ! ನಿನಗೆ ಸ್ವಾಗತವೆ ? ನನ್ನಿಂದ ನಿನಗಾಗತಕ್ಕ ಕಾರ್ಯವೇನು ? ಹೇಳು ? ಎಂದು ಕೇಳಲು ಅವನು ಈ ಸ್ವಾಗತದಿಂದ ನನಗೆ ಬಂದುದೇನು, ಎಲೈ ರಾಜೇಂದ್ರನೆ ! ಇದೋ ಈ ಧನುಸ್ಸು ಕ್ಷತ್ರಿಯರಿಗೆಲ್ಲಾ ಕಾಳರಾತ್ರಿಯಂತಿರುವುದು ನಿನ್ನಲ್ಲಿ ಶಕ್ತಿ ಇದ್ದುದೇ ಆದರೆ ಈ ಧನುವನ್ನಾರೋಪಿಸು ! ಎಂದು ಕೇಳಲು ಆಗ ಶ್ರೀ ರಾಮನು—ಎಲೈ ! ನೀನು ಹೀಗೆ ಆಕ್ಷೇಪಿಸಲು ಕಾರಣವಿಲ್ಲ. ಬಾಹುವೀರ್ಯವನ್ನು ಸ್ವತಃ ಕೇಳಿಕೊಳ್ಳುವುದು ಬಾಹುಜರಿಗಧರ್ಮವಾದುದು. ತಥಾಪಿ ಇಕ್ಷ್ವಾಕು ವಂಶದವರಿಗಂತೂ ಬಾಹು ಬಲ ಕೀರ್ತನೆಯು ಸಲ್ಲತಕ್ಕುದೇ ಅಲ್ಲ, ಎಂದು ನುಡಿದನು. ಅದಕ್ಕೆ ಭಾರ್ಗವನು——' ಈಗ ಉಪದೇಶವನ್ನು ಮಾಡಿದ್ದು ಸಾಕು.' ಧನುಸ್ಸನ್ನು ತೆಗೆದುಕೋ ? ಎಂದು ಶ್ರೀ ರಾಮನಿಗೆ ಹೇಳಿದನು. ದಾಶರಥಿಯು ಪರಶುರಾಮನ ಕೈಯಲ್ಲಿದ್ದ ದಿವ್ಯವಾದ ಧನುಸ್ಸನ್ನು ತೆಗೆದುಕೊಂಡು, ಅದನ್ನಾರೋಪಿಸಿ, ತೀವ್ರವಾಗಿ ಜ್ಯಾ ಶಬ್ದವನ್ನು ಮಾಡಿ ಎಲ್ಲರಿಗೂ ವಿಸ್ಮಯವನ್ನುಂಟುಮಾಡಿದನು. ಆ ಶಬ್ದದಿಂದ ಪ್ರಾಣಿಗಳೆಲ್ಲವೂ ಸಿಡಿಲು ರಭಸಕ್ಕೆ ಹೆದರಿದಂತೆ ಭಯವನ್ನು ಹೊಂದಿದುವು. ಆಮೇಲೆ ಶ್ರೀ ರಾಮನು ಪರಶುರಾಮನ ಸಂಗಡ—' ಎಲೈ ಬ್ರಾಹ್ಮಣನೇ ! ಈ ಧನುಸ್ಸನ್ನಾರೋಪಿಸಿದುದಾಯಿತು. ಇನ್ನು ಮುಂದೆ ಮಾಡತಕ್ಕುದೇನು, ಎಂದು ಕೇಳಲು ಭಾರ್ಗವನು ಮತ್ತೊಂದು ಧನುಸ್ಸನ್ನು ಕೊಟ್ಟು ಎಲೈ ರಾಮನೆ! ಇದನ್ನು ಆಕರ್ಣಾಂತವಾಗಿ ಎಳೆದುಕೋ ? ನೋಡೋಣ ! ಎಂದು ಹೇಳಿದನು. ಅದಕ್ಕೆ ದಾಶರಥಿಯು ಕ್ರುದ್ಧನಾಗಿ, ಎಲೈ ನೀನೇಕೆ ಗರ್ವ ಪರಿಪೂರ್ಣನಾಗಿ ಮಾತಾಡುವೆ ? ಬ್ರಹ್ಮನ ಅನುಗ್ರಹದಿಂದ ಕ್ಷತ್ರಿಯರಿಗಿಂತಲೂ ವಿಶೇಷವಾದ ಬಲವನ್ನು ಪಡೆದುಕೊಂಡಿರುವೆನೆಂದು ಈಗ ನನ್ನನ್ನು ಹಿಯ್ಯಾಳಿಸುವೆಯೋ ? ನನ್ನ ನಿಜವಾದ ಸ್ವರೂಪವನ್ನು ನೋಡು ? ನಿನಗೆ ನಾನು ದೃಷ್ಟಿಯನ್ನು ಕೊಡುವೆನು. ಎಂದು. ಹೇಳಿ ದಾಶರಥಿಯು ಪರಶುರಾಮನಿಗೆ ದಿವ್ಯ ದೃಷ್ಟಿಯನ್ನು ದಯಪಾಲಿಸಿದನು. ಆ ಭಾರ್ಗವನು ಆ ಶ್ರೀರಾಮನ ಶರೀರದಲ್ಲಿ, ಆದಿತ್ಯರನ್ನೂ, ವಸುಗಳನ್ನೂ, ರುದ್ರರನ್ನೂ

ಸಾಧ್ಯರನ್ನೂ ಮರುದ್ಗಣಗಳನ್ನೂ, ಪಿತೃದೇವತೆಗಳನ್ನೂ, ಅಗ್ನಿಯನ್ನೂ, ನಕ್ಷತ್ರಗಳನ್ನೂ, ಗ್ರಹಗಳನ್ನೂ, ಗಂಧರ್ವ ಯಕ್ಷ ರಾಕ್ಷಸ ಮೊದಲಾದವರನ್ನೂ, ನದಿ ಮೊದಲಾದ ತೀರ್ಥಗಳನ್ನೂ, ಮುನಿಗ ನ್ನೂ, ಬ್ರಹ್ಮರ್ಷಿಗಳನ್ನೂ, ದೇವರ್ಷಿಗಳನ್ನೂ, ಎಲ್ಲಾ ಪರ್ವತಗಳನ್ನೂ, ನದಗಳನ್ನೂ, ಉಪನಿಷತ್ತಿನಿಂದ ಕೂಡಿದ ವೇದಗಳನ್ನೂ, ಯಜ್ಞಗಳಿಂದ ಕೂಡಿದ ವಷಟ್ಕಾರಗಳನ್ನೂ ಋಗ್ಯಜುಸ್ಸಾಮಥರ್ವವೇದ ಮೊದಲಾದುವನ್ನೂ, ಮಿಂಚು ಮೋಡ ಮಳೆ ಮೊದಲಾದುವನ್ನೂ, ನೋಡಿದನು. ಆಮೇಲೆ ಶ್ರೀರಾಮನು ಭಾರ್ಗವನಿಗೆ ಬಾಣವನ್ನು ಪ್ರಯೋಗಿಸಲು ಅದು ಸಿಡಿಲುಗಳಿಂದಲೂ ಉಲ್ಕಾಪಾತಗಳಿಂದಲೂ ಕೂಡಿ ಭಯವನ್ನೊದಗಿಸಿ ಧೂಳುಗಳಿಂದ ಕೂಡಿದ ಮೋಡಗಳಿಂದ ಮಳೆಗಳನ್ನು ಕರೆಯಿತು. ಆಗ ಭೂಕಂಪವೇ ಮೊದಲಾದ ಉತ್ಪಾತಗಳೆಲ್ಲಾ ಉಂಟಾದುವು. ಹೀಗೆ ಶ್ರೀರಾಮನ ಬಾಣವು ಭಾರ್ಗವನನ್ನು ಖಿನ್ನನನ್ನಾಗಿ ಮಾಡಿ ಅವನ ತೇಜಸ್ಸನ್ನು ಕುಗ್ಗಿಸಿ ಮತ್ತೆ ಅವನ ಹತ್ತಿರಕ್ಕೆ ಬಂದು ಸೇರಿತು.

ಬಳಿಕ ಭಾರ್ಗವನು ವಿಹ್ವಲನಾಗಿ ಚೇತನವನ್ನು ಹೊಂದಿ ಪ್ರಯಾಸ ಪಟ್ಟು ಪ್ರಾಣವನ್ನುಳಿಸಿಕೊಂಡು ವಿಷ್ಣುವಿನ ಅವತಾರ ಭೂತನಾದ ರಾಮನನ್ನು ನಮಸ್ಕರಿಸಿ ಅವನಾಜ್ಞೆಯನ್ನು ಪಡೆದು, ಮಹೇಂದ್ರಪರ್ವತಕ್ಕೆ ಹೋಗಿ, ಅಲ್ಲಿ ಭೀತನಾಗಿಯೂ ವಿನೀತನಾಗಿಯೂ ಇದ್ದುಕೊಂಡು ತಪಸ್ಸನ್ನು ಮಾಡುತ್ತಿದ್ದನು. ಒಂದು ವರ್ಷದಮೇಲೆ ಅವನಬಲವೆಲ್ಲವೂ ಅಡಗಿ ಹೋಯಿತು. ಆಗ ಖಿನ್ನನಾಗಿಯೂ ನಿರ್ಮದನಾಗಿಯೂ ಇದ್ದ ಪರಶು ರಾಮನನ್ನು ನೋಡಿ ಜಮದಗ್ನಿಯು–ಎಲೈ ಮಗನೆ ! ನೀನು ವಿಷ್ಣುವಿನ ಸಂಗಡ ಸೆಣಸ ಬಾರದಾಗಿತ್ತು. ಅವನು ಸರ್ವದಾ ತ್ರಿಲೋಕವಂದ್ಯನಾಗಿಯೂ ಮಾನ್ಯ ನಾಗಿಯೂ, ಇರುವನು. ನೀನು ಪವಿತ್ರ ತಮವಾದ ನದಿಯನ್ನೈದಿ, ಆ ತೀರ್ಥವನ್ನು ಸ್ಪರ್ಶಮಾಡು ? ಅದರಿಂದ ನೀನು ಮೊದಲಿದ್ದಂತೆ ಪ್ರಕೃತಿಯನ್ನು ಪಡೆಯುವೆ ? ಆ ತೀರ್ಥದ ಹೆಸರು ಪುಣ್ಯನದಿಯು. ಅಲ್ಲಿ ನಿಮ್ಮ ಮುತ್ತಾತನಾದ ಭೃಗುವು ದೇವಯುಗದಲ್ಲಿ ಉತ್ತಮವಾದ ತಪಸ್ಸನ್ನು ಮಾಡಿದ್ದನು, ಎಂದು ಹೇಳಿದನು. ಭಾರ್ಗವನು ತಂದೆಯ ಅಪ್ಪಣೆಯಂತೆ ನಡೆದು ಕೊಳ್ಳಲು ಪುನಃ

ತನ್ನ ತೇಜಸ್ಸನ್ನು ಯಥಾ ಪ್ರಕಾರವಾಗಿ ಪಡೆದನು. ಎಲೈ ವತ್ಸನೆ! ಈ ರಾಮಚರಿತ್ರೆಯನ್ನಾರು ಕೇಳುವರೋ ಅಥವಾ ಪಠಿಸುವರೋ ಅವರು ಸರ್ವ ಪಾಪವಿನಿರ್ಮುಕ್ತರಾಗಿ ವಿಷ್ಣುಲೋಕದಲ್ಲಿ ವಾಸಮಾಡುವರು. ತರುವಾಯ ಶ್ರೀರಾಮನು ಜಾನಕಿಯ ಕೈಯ್ಯನ್ನು ಹಿಡಿದುಕೊಂಡು ವಂದಿಗಳಿಂದ ಹೊಗಳಿಸಿ ಕೊಳ್ಳುತ್ತ ದೇವತೆಗಳು ಕರೆದ ಪೂಮಳೆಯನ್ನು ಹೊಂದಿ ಉತ್ತರ ಕೋಸಲ ದೇಶಗಳನ್ನು ಕುರಿತು ಬಂದನು.

ಒಂಭತ್ತನೆಯ ಅಧ್ಯಾಯವು ಮುಗಿದುದು.

---

## ಹತ್ತನೆಯ ಅಧ್ಯಾಯವು.

---

ಬಳಿಕ ರಾಮನು ಸೀತಾ ಲಕ್ಷ್ಮಣರೊಡನೆ ಕೂಡಿ ಆವುದೋ ಒಂದು ಕಾರಣದಿಂದ ದಂಡಕಾರಣ್ಯಕ್ಕೆ ಬಂದು, ಅಲ್ಲಿ ಗೋದಾವರೀ ತೀರದ ಹತ್ತಿರ ಪರ್ಣಶಾಲೆಯೊಂದನ್ನು ಮಾಡಿಕೊಂಡು, ಕೆಲವುಕಾಲ ಬೇಟೆಯಾಡುತ್ತ ವಿನೋದದಿಂದ ಕಾಲ ಕಳೆಯುತ್ತಿದ್ದನು. ಹೀಗಿರಲು ಒಂದುದಿನ ರಾಮಲಕ್ಷ್ಮಣರಿಲ್ಲದ ವೇಳೆಯನ್ನು ಕಾದಿದ್ದು ರಾವಣನು, ಸೀತೆಯನ್ನು ಕಳ್ಳತನದಿಂದ ತೆಗೆದುಕೊಂಡು ಹೋಗಿ ತನ್ನ ಲಂಕಾಪಟ್ಟಣದ ಅಶೋಕವನದಲ್ಲಿಟ್ಟುಕೊಂಡನು. ರಾಮ ಲಕ್ಷ್ಮಣರು ಸೀತೆಯನ್ನು ಕಾಣದೆ ಅಲ್ಲಲ್ಲಿರುವ ಬೆಟ್ಟಗಳಲ್ಲಿಯೂ ಅಡವಿಗಳಲ್ಲಿಯೂ ಬಹಳವಾಗಿ ಹುಡುಕಿನೋಡಿದರು. ಹಾಗೂ ಸೀತೆಯನ್ನು ಕಾಣದೆ ರಾಮನು, ಬಹಳವಾಗಿ ಶೋಕಿಸಿ ಕಣ್ಣೀರನ್ನು ಸುರಿಸಿದನು. ಅವನ ಕಣ್ಣೀರೇ ಒಂದು ದೊಡ್ಡ ಹೊಳೆಯಾಗಿ ಪ್ರವಹಿಸಿತು. ಅಶ್ರುವೈತರಣಿಯಿಂದಾದ ಆ ನದಿಯು, ಪಿತೃದೇವತೆಗಳನ್ನು ಸ್ನಾನದಿಂದಲೂ, ತರ್ಪಣಗಳಿಂದಲೂ ತರಣ ಮಾಡಿಸುವುದರಿಂದ ವೈತರಣಿಯೆಂದು ಪ್ರಸಿದ್ಧವಾಯಿತು. ಅವನ ನೇತ್ರ ದೂಷಿಕೆಯೇ ದೊಡ್ಡದೊಡ್ಡ ಬೆಟ್ಟಗಳಾದುವು.

ರಾಮಲಕ್ಷ್ಮಣರು ಅಲ್ಲಿಂದ ಹೊರಟು, ಸುಗ್ರೀವನಲ್ಲಿ ಮೈತ್ರಿಯನ್ನು ಮಾಡಲು ಋಷ್ಯಮೂಕಗಿರಿಗೆ ಬಂದರು. ಅಲ್ಲಿ ವಾಲಿಯ ಭಯದಿಂದ

ಐದು ಮಂದಿ ಮಂತ್ರಿಗಳೊಡನೆ ಅವಿತುಕೊಂಡಿದ್ದ ಸುಗ್ರೀವನು, ಚಾಪ, ಬಾಣ, ಮೊದಲಾದುವುಗಳನ್ನು ಹಿಡಿದುಕೊಂಡು, ಆಕಾಶವನ್ನು ನುಂಗುವ ಹಾಗೆ ಬರುತ್ತಿದ್ದ ರಾಮ ಲಕ್ಷ್ಮಣರನ್ನು ನೋಡಿ, ಒಳ್ಳೆಯ ಅಸ್ತ್ರಗಳನ್ನು ಹಿಡಿದಿರುವುದರಿಂದ "ಇವರು ವಾಲಿಯ ಕಡೆಯವರಿರಬಹುದು" ಎಂದು ತಿಳಿದು ಆಂಜನೇಯನನ್ನು ಸನ್ಯಾಸಿ ವೇಷದಿಂದ ಅವರ ಹತ್ತಿರಕ್ಕೆ ಕಳುಹಿಸಿದನು. ಆ ಹನುಮಂತನು ರಾಮಲಕ್ಷ್ಮಣರನ್ನು ನೋಡಿ "ನೀವಾರೆಂದು" ಕೇಳಲು, ರಾಮನು ಚತುರ್ಬಾಹುವುಳ್ಳವನಾಗಿಯೂ, ಶಂಖ ಚಕ್ರ ಗದಾ ಪಾಣಿಯಾಗಿಯೂ, ಪೀತವಾಸನಾಗಿಯೂ, ಲಕ್ಷ್ಮೀಸರಸ್ವತಿಯರಿಂದಾಶ್ರಯಿಸಲ್ಪಟ್ಟ ಉಭಯ ಪಾರ್ಶ್ವಗಳುಳ್ಳವನಾಗಿಯೂ, ದೇವರ್ಷಿ ಗಂಧರ್ವರಿಂದ ಸೇವಿಸಲ್ಪಟ್ಟವನಾಗಿಯೂ, ಸಹಸ್ರ ಸೂರ್ಯರಂತೆ ಪ್ರಕಾಶಿಸುತ್ತಲೂ. ಅನೇಕ ಚಂದ್ರರಂತೆ ಮುಖಕಾಂತಿಯುಳ್ಳವನಾಗಿಯೂ, ಸರ್ಪಗಳ ಹೆಡೆಗಳೆಂಬ ಕೊಡೆಗಳುಳ್ಳವನಾಗಿಯೂ, ಆಗ ತಾನು ಹನುಮಂತನಿಗೆ ದರ್ಶನವನ್ನಿತ್ತನು.

ಆ ರೂಪವನ್ನಾಂಜನೇಯನು ನೋಡಿ, ಇದೇನಂದಾಶ್ಚರ್ಯಯುಕ್ತನಾಗಿ, ನೇತ್ರವನ್ನು ಮುಚ್ಚಿಕೊಂಡು, ಆ ಆಶ್ಚರ್ಯವನ್ನು ನೆನೆದು ಸ್ತುತಿಸಿ ನಮಿಸಿ ರಾಮನೊಡನೆ ಎಲೈ! ನಾನು ಸುಗ್ರೀವನ ಸಚಿವನು; ನನ್ನ ಹೆಸರು ಹನುಮಂತನು; ನೀವಾರೆಂದು ತಿಳಿಯಲು ಸುಗ್ರೀವನು ನನ್ನನ್ನು ನಿಮ್ಮ ಹತ್ತಿರಕ್ಕೆ ಕಳುಹಿಸಿದನು. ಆದುದರಿಂದಿಲ್ಲಿಗೆ ಬಂದೆನು. ನೀವಿಬ್ಬರೂ ದ್ವಿಭುಜಗಳಲ್ಲಿ ಖಡ್ಗವನ್ನು ಧರಿಸಿರುವುದನ್ನು ನೋಡಿ ನನಗೆ ಆಶ್ಚರ್ಯವಾಗಿದೆ. ನಾನು ಬಂದಾಗ ಮತ್ತೊಂದು ವಿಧವಾಗಿ ಕಾಣಿಸಿದಿರಿ? ನೀವಾರು? ಹೇಳಬೇಕು!! ಎಂದು ಬಹಳವಾಗಿ ಬೇಡಿದನು.

ಹೀಗೆ ತ್ರಸ್ತನಾಗಿ ನಡುಗುತ್ತಿದ್ದ ಆಂಜನೇಯನಿಗೆ ಶ್ರೀರಾಮನಭಯವನ್ನು ಕೊಟ್ಟು ತನ್ನ ವರ್ತಮಾನವನ್ನು ತಿಳಿಸತೊಡಗಿದನು.

ಹತ್ತನೆಯ ಅಧ್ಯಾಯವು ಮುಗಿದುದು.

—o—

## ಹನ್ನೊಂದನೆಯ ಅಧ್ಯಾಯವು.

—o—

ಎಲೈ ವತ್ಸನಾದ ಹನುಮಂತನೆ ! ನೀನು ನನಗೆ ಪರಮ ಭಕ್ತನಾಗಿ ಬೇಡಿದುದರಿಂದ ನನ್ನ ವಿಷಯವನ್ನು ಹೇಳುವೆನು. ಕೇಳು ? ಈ ಗುಹ್ಯವಾದ ಜ್ಞಾನವನ್ನು ನೀನಾರಿಗೂ ತಿಳಿಸಬೇಡ. ಎಷ್ಟು ಪ್ರಯತ್ನಮಾಡಿದರೂ ಇದನ್ನು ದೇವತೆಗಳೂ ಬ್ರಾಹ್ಮಣರೂ ತಿಳಿಯಲಾರದೆ ಹೋಗಿದ್ದಾರೆ. ಇದು ಸಂಸಾರವನ್ನು ಬಿಟ್ಟ ಯೋಗಿಗಳಿಗೂ ಕೂಡ ತಿಳಿಯಲು ಶಕ್ತವಾಗಿಲ್ಲ. ಈ ರಹಸ್ಯವನ್ನೊಬ್ಬರಿಗೂ ತಿಳಿಸದೇ ನೀನು ರಕ್ಷಿಸಿಕೊಂಡಿರು ? ಭಕ್ತಿವಂತನ ವಂಶದಲ್ಲಿ ಬ್ರಹ್ಮವಾದಿಗಳೇ ಜನಿಸುವರು. ಆತ್ಮನು ಕೇವಲ ಸ್ವೇಚ್ಛನಾಗಿಯೂ, ಶಾಂತನಾಗಿಯೂ, ಸೂಕ್ಷ್ಮನಾಗಿಯೂ, ಸನಾತನನಾಗಿಯೂ, ಇರುವನು. ಇದೂ ಅಲ್ಲದೆ ಅವನು ಸರ್ವಾಂತರ್ಯಾಮಿಯಾಗಿಯೂ ಚಿನ್ಮಯನಾಗಿಯೂ ತಮಸ್ಸಿಗೆ ಪರನಾಗಿಯೂ ಇರುವನು. ಅವನೇ ಪುರುಷನು. ಅವನೇ ಪ್ರಾಣಗಳು. ಅವನೇ ಮಹೇಶ್ವರನು. ಅವನೇ ಕಾಲಾಗ್ನಿಯು. ಅವನೇ ಅವ್ಯಕ್ತನು'' ಎಂದು ಶ್ರುತಿಯು ಪ್ರತಿಪಾದಿಸುವುದು.

ಅವನಿಂದಲೇ ಪ್ರಪಂಚವು ಹುಟ್ಟಿ ಅವನಲ್ಲಿಯೇ ಲೀನವಾಗುವುದು. ಅವನು ಮಾಯಾವಿಯೂ, ಮಾಯಾಬದ್ಧನೂ ಆಗಿ ವಿವಿಧವಾದ ಶರೀರಗಳನ್ನುಂಟುಮಾಡುವನು. ಅವನು ಹೋಗುವವನೂ ಅಲ್ಲ. ಹೋಗಿಸಿಕೊಳ್ಳುವವನೂ ಅಲ್ಲ. ಭೂಮ್ಯಂತರಿಕ್ಷ ಜಲರೂಪನೂ ಅಲ್ಲ. ಪ್ರಾಣ-ಮನಸ್ಸು - ಶಬ್ದ - ಸ್ಪರ್ಶ ಇವುಗಳುಳ್ಳವನೂ ಅಲ್ಲ. ಅವನಿಗೆ ರೂಪ ರಸ ಗಂಧಾದಿಗಳೂ ಇಲ್ಲ. ಪಾಣಿ ಮೊದಲಾಗಿ ಅವಯವಗಳಾವುವೂ ಇಲ್ಲ. ಅವನು ಕರ್ತನೂ ಭೋಕ್ತೃವೂ ಆಗಿಲ್ಲ. ಪ್ರಕೃತಿ ಪುರುಷ ಇವರಿಗೆ ಭಿನ್ನನಾಗಿಯೇ ಇರುವನು. ಮಾಯಾ ಸ್ವರೂಪನೂ ಅಲ್ಲ. ಬೆಳಕಿಗೂ ಕತ್ತಲೆಗೂ ಹೇಗೆ ಸಂಬಂಧವಿಲ್ಲವೋ ಹಾಗೆಯೇ ಪ್ರಪಂಚಕ್ಕೂ ಪರಮಾತ್ಮನಿಗೂ ಸಂಬಂಧವೇ ಇಲ್ಲ. ನೆರಳೂ ಮರಗಳೂ ಹೇಗೆ ಪರಸ್ಪರ ವಿಲಕ್ಷಣಗಳೋ ಹಾಗೆಯೇ ಪ್ರಪಂಚವೂ ಪುರು

ಷನೂ ಪರಮಾರ್ಥವಾಗಿಯೂ ಭಿನ್ನರಾಗಿರುವರು. ಆತ್ಮನು ಸ್ವಭಾವದಿಂದಲೇ ಮಾಲಿನ್ಯವನ್ನೂ ಅಸ್ವಸ್ಥತೆಯನ್ನೂ, ವಿಕಾರವನ್ನೂ ಕೈಕೊಂಡುದೇ ಆದರೆ ಜನ್ಮಾಂತರ ಶತಗಳಾದರೂ ಮುಕ್ತಿಯಾಗಲಾರದು. ಮುಕ್ತರಾದ ಮುನಿಗಳು, ಆತ್ಮನನ್ನು ಪರಮಾರ್ಥವಾಗಿ ಕಾಣುವರು. ಅವನು ವಿಕಾರವಿಲ್ಲದವನಾಗಿಯೂ, ದುಃಖರಹಿತನಾಗಿಯೂ, ಆನಂದಸ್ವರೂಪನಾಗಿಯೂ, ನಾಶ ರಹಿತನಾಗಿಯೂ ಇರುವನು. ಆದರೆ ಜನಗಳು—"ನಾನು ಮಾಡಿದ್ದು, ನಾನು ಸುಖಿ. ನಾನು ದುಃಖಿ, ನಾನು ಕೃಶನು, ನಾನು ಸ್ಥೂಲನು" ಎಂದಹಂಕಾರ ಸಂಬಂಧವಾದ ಬುದ್ಧಿಯನ್ನು ಆತ್ಮನಲ್ಲಾರೋಪಿಸುವರು. ವೇದವಿದ್ವಾಂಸರು, ಆತ್ಮನನ್ನ ಸಾಕ್ಷಿಯೆಂತಲೂ ಪ್ರಕೃತಿಗಿಂತಲೂ ಪರನೆಂತಲೂ ಭೋಕ್ತೃವೆಂತಲೂ, ಅಕ್ಷಯನೆಂತಲೂ ಸರ್ವ ವ್ಯಾಪಿಯೆಂತಲೂ ಹೇಳುವರು. ಆದಕಾರಣ ಸರ್ವ ದೇಹಿಗಳ ಸಂಸಾರವೂ ಅಜ್ಞಾನ ಮೂಲವಾಗಿರುವುದು. ಆ ಜ್ಞಾನವಿಲ್ಲದೆ ಅನ್ಯಥಾ ಜಾತವಾದುದು ಪ್ರಕೃತಿ ಸಂಗತವಾಗುವುದು. ಆತ್ಮನು, ನಿತ್ಯೋದಿತನಾಗಿಯೂ, ಸ್ವಯಂ ಜ್ಯೋತಿಯಾಗಿಯೂ, ಸರ್ವಗತನಾಗಿಯೂ, ಪುರುಷನಾಗಿಯೂ, ಪರನಾಗಿಯೂ ಇದ್ದು, ಅಹಂಕಾರ ವಿವೇಕದಿಂದ ಕರ್ತನೆಂಬುವುದಾಗಿ ತಿಳಿಯುತ್ತಾನೆ. ಋಷಿಗಳು ಆತ್ಮನನ್ನು ಸದಸದಾತ್ಮಕವಾಗಿಯೂ, ಪ್ರಧಾನವಾಗಿಯೂ, (ಪ್ರಕೃತಿಯಾಗಿಯೂ) ಬುದ್ಧಿ ಕಾರಣವಾಯೂ ತಿಳಿಯುವರು. ಇದರಿಂದ ಆತ್ಮನು ಕೂಟಸ್ಥನಾಗಿರುವನೆಂದು ತಿಳಿಯಬರುವುದು. ಬ್ರಹ್ಮವಾದಿಗಳಾತ್ಮನನ್ನು ಕ್ಷರನೆಂದು ತಿಳಿಯುವರು. ಅನಾತ್ಮದಲ್ಲಾತ್ಮಜ್ಞಾನವು ದುಃಖವನ್ನೊದವಿಸುವುದು. ರಾಗದ್ವೇಷಾದಿ ದೋಷಗಳೆಲ್ಲವೂ ಭ್ರಾಂತಿ ವಿಲಸಿತಗಳಾಗಿಯೇ ಇವೆ. ಕಾರ್ಯವು ಪುಣ್ಯವೆಂತಲೂ ಪಾಪವೆಂತಲೂ ಎರಡು ವಿಭಾಗವಾಗಿದೆ ಆದಕಾರಣ ಎಲ್ಲರ ದೇಹವೂ ಎರಡು ತೆರನಾಗಿರುವುದು.

ನಿತ್ಯನೂ ದೋಷವರ್ಜಿತನೂ ಕೂಟಸ್ಥನೂ ಆದ ಪರಮಾತ್ಮನೊಬ್ಬನು ಮಾಯೆಯಿಂದ ಭೇದಿಸಲ್ಪಡುವನು. ಸ್ವಭಾವದಿಂದ ಭೇದಿಸಲ್ಪಡನು. ಆದಕಾರಣ ಮುನಿಗಳು ಅದ್ವೈತವನ್ನೇ ಹೇಳುವರು. ಧೂಮಸಂಪರ್ಕದಿಂದ ಹೇಗೆ ಆಕಾಶವು ಮಲಿನವಲ್ಲವೊ ಹಾಗೆಯೇ ಅಂತಃಕರಣಗಳಾದ

ಭಾವನೆಗಳಿಂದಾತ್ಮನು ಲೇಪ್ಯನಾಗುವುದಿಲ್ಲ. ಸ್ಫಟಿಕವು ಹೇಗೆ ತನ್ನ ನೈಜ ವಾದ ಗುಣದಿಂದ ಬೆಳಗುವುದೋ ಹಾಗೆಯೇ ಉಪಾಧಿ ಹೀನನಾದ ಆ ತ್ಮನು ವಿಮಲನಾಗಿರುವನು. ವಿಚಕ್ಷಣರು ಪ್ರಪಂಚವನ್ನು ಜ್ಞಾನಸ್ವ ರೂಪವೆಂದು ಬಗೆಯುವರು. ಅಜ್ಞರು ಅದನ್ನು ಅರ್ಥಸ್ವರೂಪವೆಂದು ಕುತರ್ಕಗಳಿಂದ ತಿಳಿಯುವರು. ಭ್ರಾಂತಿ ದೃಷ್ಟಿಗಳುಳ್ಳ ಪುರುಷರು ಚೈತನ್ಯ ಸ್ವರೂಪನಾದ ಆತ್ಮನನ್ನು ಅರ್ಥರೂಪದಿಂದ ನೋಡುವರು. ಸ್ಫಟಿಕ ಶಿಲೆಗೆ ವಸ್ತ್ವಂತರದಿಂದ ಹೇಗೆ ರಕ್ತಿಮ ಮೊದಲಾದುವು ಒದಗು ವುವೋ ಹಾಗೆಯೇ ಪರಮ ಪುರುಷನಿಗೆ ಇಂದ್ರಿಯಾರ್ಥಗಳುಂಟಾಗುವುವು: ಆದಕಾರಣ ಆತ್ಮನು ಶುದ್ಧನಾಗಿಯೂ ಸರ್ವಗತನಾಗಿಯೂ ಅಕ್ಷಯನಾಗಿ ಯೂ ಇರುವನು. ಮುಮುಕ್ಷುಗಳು ಅವನನ್ನು ಸೇವಿಸುತ್ತಲೂ ತಿಳಿ ಯುತ್ತಲೂ ಕೇಳುತ್ತಲೂ ಇರಬೇಕು. ಯಾವಾಗ ಮನದಲ್ಲಿ ಸರ್ವ ಗತವಾದ ಚೈತನ್ಯವು ಸ್ಫುರಿಸುವುದೋ ಆಗ ಯೋಗಿಗಳ ಹೃದಯದಲ್ಲಿ ಆತ್ಮನು ಸ್ಫುರಿಸುವನು. ಸರ್ವಭೂತಗಳು ಯಾವಾಗ ತಮ್ಮಲ್ಲಿ ಆತ್ಮ ನನ್ನು ನೋಡುವುವೋ ಆಗಲೇ ಆತ್ಮನು ಏಕೀಭೂತನಾಗಿಯೂ ಕೇವಲ ನಾಗಿಯೂ ಆಗುವನು. ಯಾವಾಗ ಜನ್ಮ, ಜರೆ, ದುಃಖಗಳೆಂಬ ವ್ಯಾಧಿ ಗಳಿಗೆ ಬ್ರಹ್ಮವಿಜ್ಞಾನವೊಂದೆ ದಿವ್ಯೌಷಧವಾಗಿ ಪರಿಣಮಿಸುವುದೋ ಆಗ ಲೇ ಅವನು ಸಾಕ್ಷಾತ್ಪರಮೇಶ್ವರನಾಗುವನು. ಹೇಗೆ ನದಿಗಳು ಸಾಗರ ದೊಡನೆ ಐಕ್ಯವಾಗುವುವೋ ಹಾಗೆಯೇ ಅಕ್ಷರನಾದಾತ್ಮನು ನಿಷ್ಕಲ್ಮಷ ಜ್ಞಾನದಿಂದೈಕ್ಯವನ್ನು ಹೊಂದುವನು. ಆದಕಾರಣ ವಿಜ್ಞಾನವೇ ಸ್ಥಿರವಾ ದುದು. ಯಾರು ಸರ್ವಗತವಾದ ಆತ್ಮನನ್ನು ಜ್ಞಾನಯೋಗದಿಂದ ನೋ ಡುವರೋ ಅವರು ದೇಹಾಂತ್ಯದಲ್ಲಿ ಆ ಆತ್ಮನನ್ನೇ ಪಡೆಯುವರು. ಅಂತ ಪ್ಪ ಪರಮಾತ್ಮನೇ ನಾನು, ಸರ್ವ ವೇದಗಳೂ ನನ್ನನ್ನು ಮಾಯಾವಿಯೆಂ ದೂ ಪರಮೇಶ್ವರನೆಂದೂ ಸರ್ವತೋ ಮುಖನೆಂದೂ ಹೇಳುವುವು. ನಾನು ಸರ್ವತ್ರ ಪಾಣಿ ಪಾದಗಳನ್ನುಳ್ಳವನಾಗಿ ಸನಾತನನಾಗಿರುವೆನು. ಕೈಗ ಳಿಲ್ಲದೆ ಹಿಡಿಯುವೆನು. ಕಾಲುಗಳಿಲ್ಲದೆ ವೇಗವುಳ್ಳವನಾಗಿದ್ದೇನೆ. ಕ ಣ್ಣುಗಳಿಲ್ಲದಿದ್ದರೂ ಎಲ್ಲವೂ ನನಗೆ ಕಾಣುವುದು. ಕಿವಿಇಲ್ಲದೆ ಕೇಳು ವೆನು. ಎಲೈ ಹನುಮಂತನೆ ! ನನ್ನನುಗ್ರಹದಿಂದ ನಿನಗೆ ಸದುಪದೇಶ

ವುಂಟಾಗಿರುವುದು. ಶಿಷ್ಯರಲ್ಲದವರಿಗೆ ಇದನ್ನುಪದೇಶಿಸಬೇಡ ” ಎಂದ ಇವೇ ಮೊದಲಾದ ಕೆಲವು ವಿಷಯಗಳನ್ನು ತಿಳಿಸಿದನು.

ಹನ್ನೊಂದನೆಯ ಅಧ್ಯಾಯವು ಮುಗಿದುದು.

———o———

## ಹನ್ನೆರಡನೆಯ ಅಧ್ಯಾಯವು.

—o—

ಎಲೈ ಆಂಜನೇಯನೇ ! ಅವ್ಯಕ್ತದ ದೆಸೆಯಿಂದ ಕಾಲವೂ ಪ್ರಕೃತಿಯೂ ಪುರುಷನೂ ಜನಿಸಿರುತ್ತಾರೆ. ಇದರಿಂದ ಈ ಪ್ರಪಂಚವೆಲ್ಲವೂ ಹುಟ್ಟಿದಕಾರಣ ನಾನು ಜಗದ್ರೂಪನಾಗಿರುತ್ತೇನೆ. ಸರ್ವತ್ರ ಕೈಕಾಲುಗಳುಳ್ಳದಾಗಿಯೂ, ಸರ್ವತ್ರ ಕಣ್ಣು ತಲೆ ಮುಖವುಳ್ಳದಾಗಿಯೂ, ಸರ್ವತ್ರ ಕಿವಿಗಳುಳ್ಳದಾಗಿಯೂ, ಆ ಅವ್ಯಕ್ತವು ಸರ್ವವನ್ನೂ ವ್ಯಾಪಿಸಿಕೊಂಡಿರುವುದು. ಸಮಸ್ತವಾದ ಇಂದ್ರಿಯ ಗುಣಗಳನ್ನೂ ಪ್ರಕಾಶಗೊಳಿಸುತ್ತ, ಆ ಸಮಸ್ತೇಂದ್ರಿಯ ವರ್ಜಿತವಾಗಿರುವುದು. ಆ ಅವ್ಯಕ್ತವು ಸರ್ವಾಧಾರವಾಗಿಯೂ, ಸ್ಥಿರವಾದ ಆನಂದವುಳ್ಳದಾಗಿಯೂ ಸಜಾತೀಯ ವಿಜಾತೀಯ ಸ್ವಗತಭೇದ ಶೂನ್ಯವಾಗಿಯೂ ಇದೆ ಇದಕ್ಕೆ ಹೋಲಿಕೆಯೇ ಇಲ್ಲ. ಶ್ರುತಿಪ್ರಮಾಣಾತೀತವಾಗಿ ಶ್ರುತಿಗೋಚರವಾಗಿರುವುದು. ನಿಷ್ಕಳವೂ ನಿರಾಭಾಸವೂ, ಸದಾಭಾಸವೂ, ಪರಾಮೃತವೂ, ಶಾಶ್ವತವೂ, ನಿರ್ಗುಣವಾದ ವ್ಯೋಮವೂ, ಆದ ಆ ಅವ್ಯಕ್ತವನ್ನು ಜ್ಞಾನವೆಂಬುವುದಾಗಿ ವಿದ್ವಾಂಸರು ಹೇಳುವರು. ಆ ಜ್ಞಾನವೇ ಆತ್ಮನು, ಅವನು ಸಮಸ್ತವಾದ ಭೂತಗಳಒಳಗೂ ಹೊರಗೂ ವ್ಯಾಪಕನಾಗಿರುವನು.

ಶಾಂತನೂ, ಜ್ಞಾನರೂಪನೂ, ಮಹೇಶ್ವರನೂ, ಅವ್ಯಕ್ತರೂಪನೂ ಆದ ನನ್ನಿಂದ ಈ ಜಗತ್ತೆಲ್ಲವೂ ಆವರಿಸಲ್ಪಟ್ಟಿರುವುದು. ಸರ್ವ ಭೂತಗಳೂ ನನ್ನೊಳಗೇ ಇರುವುವು. ಈ ವಿಷಯವನ್ನು ಯಾರು ಬಲ್ಲರೋ ಅವರೇ ವೇದವನ್ನು ಬಲ್ಲವರಾಗಿದ್ದಾರೆ. ಪ್ರಕೃತಿ ಮತ್ತು ಪುರುಷನೆಂಬ ಎರಡು ತತ್ವಗಳುಂಟಷ್ಟೆ ? ಅವರಿಬ್ಬರಿಗೂ ಕಾಲವು ಸಂಯೋಜಕವಾಗಿ

ರುವುದು. ಇವು ಮೂರು ಆದ್ಯಂತ ರಹಿತಗಳಾಗಿ ಅವ್ಯಕ್ತದಲ್ಲಿ ಸೇರಿಕೊಂಡಿರುವುವು. ತದಾತ್ಮಕಗಳಾಗಿಯೂ ಇತರವಾಗಿಯೂ ತದ್ರೂಪಗಳಾಗಿಯೂ ಇರುವುವೆಲ್ಲಾ ನನ್ನ ರೂಪಗಳೇ ಆಗಿವೆ. ಈ ಮಹದಾದಿಗಳೆಲ್ಲವೂ ಸಮಸ್ತವಾದ ಈ ಪ್ರಪಂಚಗಳನ್ನು ಪಡೆದಿರುವುವು. ಸರ್ವದೇಹಿಗಳನ್ನು ಮೋಹಗೊಳಿಸುವುದಾವುದೋ ಅದೇ ಪ್ರಕೃತಿಯು. ಪ್ರಕೃತಿಸ್ಥನಾಗಿ ಪುರುಷನು ಪುರಾಕೃತಗಳನ್ನು ಅನುಭವಿಸುವನು. ತತ್ವಗಳು ಇಪ್ಪತ್ತೈದೆಂದು ಪರಿಗಣಿಸುವರು. ವಿಕೃತರೂಪವಾದ ಪ್ರಕೃತಿಯೇ ಮೊದಲನೆಯ ತತ್ವವು. ಅದನ್ನೇ ಮಹತ್ತಾದ ಆತ್ಮವೆಂದು ಕರೆವರು. ವಿಜ್ಞಾನವಿಂದ ವಿಜ್ಞಾನ ಶಕ್ತಿಯೂ ಅದರಿಂದ ಅಹಂಕಾರವೂ ಹುಟ್ಟಿದುವು, ಆ ಮಹತ್ತಾದ ಆತ್ಮವೇ ಅಹಂಕಾರವೆನಿಸಿಕೊಳ್ಳುವುದು. ತತ್ವಚಿಂತಕರು ಆ ಅಹಂಕಾರವನ್ನು ಜೀವನೆಂಬುದಾಗಿಯೂ, ಅಂತರಾತ್ಮ ವೆಂಬುವಾಗಿಯೂ ಹೇಳುತ್ತಾರೆ, ಆ ಅಂತರಾತ್ಮನು ಜನ್ಮಗಳಲ್ಲಿ ಸುಖ ದುಃಖಗಳನ್ನೆಲ್ಲಾ ತಿಳಿಯುವನು. ವಿಜ್ಞಾನ ರೂಪದಿಂದ ಆ ಅಂತರಾತ್ಮನಿಗೆ ಮನಸ್ಸು ಉಪಕರಣವಾಗಿರುವುದು. ಆ ಮನಸ್ಸಿನ ಅವಿವೇಕದಿಂದಲೇ ಪುರುಷನಿಗೆ ಸಂಸಾರವುಂಟಾಗಿರುವುದು. ಆ ಅವಿವೇಕವು ಕಾಲವಶದಿಂದ ಪ್ರಕೃತಿಯಲ್ಲಿ ಸಂಸಕ್ತವಾಗುವುದು. ಆ ಕಾಲವೇ ಭೂತಗಳನ್ನು ಹುಟ್ಟಿಸಿ ಅವನ್ನು ಸಂಹರಿಸುವುದು. ಕಾಲನಿಗೆಎಲ್ಲರೂ ವಶರಾಗಿರುವರು. ಅದು ಯಾರಿಗೂ ವಶವಾಗಿಲ್ಲ. ಸನಾತನವಾಗಿದ್ದು ಇವೆಲ್ಲವನ್ನೂ ಉಂಟುಮಾಡುತ್ತದೆ. ಸರ್ವಜ್ಞನಾದ ಪುರುಷನೇ ಪ್ರಾಣರೂಪನೆಂದು ಹೇಳಲ್ಪಡುವುದು. ವಿದ್ವಾಂಸರು ಇಂದ್ರಿಯಗಳಿಗಿಂತಲೂ ಮನಸ್ಸು, ಮನಸ್ಸಿಗಿಂತಲೂ ಅಹಂಕಾರವೂ, ಅಹಂಕಾರಕ್ಕಿಂತಲೂ ಮಹತ್ತೂ, ಅದಕ್ಕಿಂತಲೂ ಅವ್ಯಕ್ತವೂ, ಅವ್ಯಕ್ತಕ್ಕಿಂತಲೂ ಪುರುಷನೂ, ಪುರುಷನಿಗಿಂತಲೂ ಆತ್ಮರೂಪನಾದ ಪ್ರಾಣನೂ ಪರವೆನ್ನುವುದಾಗಿ ಹೇಳುತ್ತಾರೆ. ಆ ಆತ್ಮನಿಂದಲೇ ಈ ಜಗತ್ತೆಲ್ಲವೂ ಉಂಟಾಗಿರುವುದು. ಪ್ರಾಣಕ್ಕಿಂತಲೂ ಆಕಾಶವೂ, ಆಕಾಶಕ್ಕಿಂತಲೂ ಅಗ್ನಿಯೂ, ಅಗ್ನಿಗಿಂತಲೂ ಈಶ್ವರನೂ ಪರನಾಗಿರುವನು. ಇಂತಪ್ಪನಾನು, ಸರ್ವವ್ಯಾಪಿಯೂ ಶಾಂತನೂ, ಜ್ಞಾನಾತ್ಮಕನೂ, ಪರಮೇಶ್ವರನೂ ಆಗಿರುವೆನು. ನನಗಿಂತಲೂ ಪರವಾದ

ಭೂತವೇ ಇಲ್ಲ. ಇಂತಪ್ಪ ನನ್ನನ್ನು ತಿಳಿದವನು ಮುಕ್ತನಾಗುವನು. ಜಗತ್ತಿನಲ್ಲಿ ಸ್ಥಾವರ ಜಂಗಮವಾದ ಭೂತಗಳು ಆಕಾಶರೂಪನಾದ ನನ್ನನ್ನು ಬಿಡು ಯಾವುವೂ ಇಲ್ಲ. ಜಗತ್ತನ್ನು ನಾನು ನಿರ್ಮಿಸಿ ಸಾಯುಕೊಲ್ಲುವೆನು. ಈ ಕಾಲವು ನನ್ನ ಸನ್ನಿಧಾನದಿಂದ ಸಕಲ ಜಗತ್ತನ್ನೂ ನಿರ್ಮಿಸಿ ಸಲಿಸಿ ಲಯಿಸುವಂತೆ ಮಾಡುವುದೆಂದು ವೇದವು ತಿಳಿಸುತ್ತದೆ.

ಹನ್ನೆರಡನೆಯ ಅಧ್ಯಾಯವು ಮುಗಿದುದು.

—o—

## ಹದಿಮೂರನೆಯ ಅಧ್ಯಾಯವು.

—o—

ಎಲೈ ಆಂಜನೇಯನೇ! ಸಾವಧಾನದಿಂದ ಲಾಲಿಸು! ಈ ರೂಪವು ಯಾರಿಂದ ಹೊಂದಲ್ಪಡುವುದೋ ಈ ಜಗತ್ತು ಯಾರಿಂದ ಪ್ರವೃತ್ತವಾಯಿತೋ ಅಂತಪ್ಪ ನಾನು, ತಪಸ್ಸಿನಿಂದಲೂ, ಬಗೆಬಗೆಯಾದ ಯಜ್ಞಗಳಿಂದಲೂ, ದಾನಗಳಿಂದಲೂ ವಶನಾಗುವುದಿಲ್ಲ. ಉತ್ತಮವಾದ ಭಕ್ತಿಯುಳ್ಳ ಪುರುಷನಿಗೇ ನಾನು ವಶನಾಗುವೆನು. ನಾನು ಸರ್ವ ವ್ಯಾಪಕನಾಗಿ ಸಮಸ್ತ ವಸ್ತುಗಳ ಒಳಗಡೆಇರುತ್ತೇನೆ. ಸರ್ವ ಸಾಕ್ಷಿಯಾದ ನನ್ನನ್ನು ಜನರು ತಿಳಿಯುವರಾಗುವುದಿಲ್ಲ. ಈ ಪ್ರಪಂಚವೆಲ್ಲವೂ ಯಾವನ ಅಂತರಂಗದಲ್ಲಿರುವುದೋ ಯಾವನು ಸರ್ವಾಂತರಂಗಗಳಿಗೂ ಪರನಾಗಿರುವನೋ ಅಂತಪ್ಪ ಧಾತನೂ ವಿಧಾತನೂ ಆದ ನಾನು, ಈ ಲೋಕದಲ್ಲಿ ವಿಶ್ವತೋಮುಖನಾಗಿರುವೆನು. ನನ್ನನ್ನು ದೇವತೆಗಳೂ ಮುನಿಗಳೂ ಕಂಡರಿಯರು. ಬ್ರಾಹ್ಮಣರೂ ಮನುಗಳೂ ಇಂದ್ರನೇ ಮೊದಲಾದವರೂ ಕೂಡ ಕಾಣರು. ನಿರಂತರವೂ ಪರಮಾತ್ಮನಾದ ನನ್ನನ್ನು ವೇದಗಳು ತಿಳಿಯುವುವು. ಬ್ರಾಹ್ಮಣರು ನನ್ನನ್ನು ತೃಪ್ತಿಗೊಳಿಸೆ ವೇದೋಕ್ತವಾಗಿ ಯಜ್ಞಕರ್ಮಗಳನ್ನೆಸಗುವರು. ಬ್ರಹ್ಮಲೋಕದಲ್ಲಿ ಪಿತಾಮಹನಾಗಿರುವ ನನ್ನನ್ನು ಸರ್ವ ಲೋಕಗಳೂ ನಮಿಸುವುವು, ಯೋಗಿಗಳು, ಭೂತಾಧಿಪತಿಯೂ, ಈಶ್ವರನೂ, ದೇವನೂ ಆದ ನನ್ನನ್ನು ಧ್ಯಾನಿಸುವರು. ನಾನು

ಸರ್ವ ಯಜ್ಞಗಳಿಗೂ ಭೋಕ್ತೃವೂ ಫಲಪ್ರದನೂ ಆಗಿದ್ದೇನೆ ಸರ್ವ ದೇವ ರೂಪನಾಗಿ ಸರ್ವರಿಂದಲೂ ಸ್ತುತಿಸಲ್ಪಡುತ್ತಿದ್ದೇನೆ. ಧಾರ್ಮಿಕರು ನನ್ನನ್ನೇ ನೋಡುತ್ತಿರುವರು. ಆ ಧಾರ್ಮಿಕರಿಗೆ ನಾನು ನಿತ್ಯವೂ ಸಮೀಪಸ್ಥನಾಗಿ ರುವೆನು. ಭಕ್ತರು ನನ್ನನ್ನು ಯಾವಾಗಲೂ ಸೇವಿಸುವರು. ನಾಲ್ಕು ವರ್ಣದವರೂ ನನ್ನನ್ನು ಧ್ಯಾನಿಸುವರು. ನಾನು ಅವರಿಗೆ ಆನಂದರೂಪ ವಾದ ಪದವಿಯನ್ನು ಕೊಡುವೆನು. ಕರ್ಮಹೀನರಾದ ಶೂದ್ರರೇ ಮೊದ ಲಾದವರು ನನ್ನಲ್ಲಿ ಭಕ್ತಿಯುಕ್ತರಾಗಿದ್ದರೆ ಅವರೂ ಕಾಲಗಲ್ಲಿ ಮುಕ್ತಿಯು ನ್ನು ಪಡೆಯುವರು. ನನ್ನ ಭಕ್ತರಿಗೆ ನಾಶವಿಲ್ಲ. ಅವರ ಪಾಪವೆಲ್ಲವೂ ಹೋಗಲಾಡಿಸಲ್ಪಡುವುದು. ಈ ವಿಷಯವಾಗಿ ನಾನು ಮೊದಲೇ ಪ್ರತಿಜ್ಞೆ ಮಾಡಿರುವೆನು. ಯಾರು ದೇವದೇವನಾದ ಆತ್ಮನನ್ನು ನಿಂದಿಸುವರೋ ಅವರು ಕೆಡುವರು. ಯಾರು ಭಕ್ತಿಯಿಂದ ಪೂಜಿಸುವರೋ ಅವರು ಗೌರ ವವನ್ನು ಪಡೆಯುವರು. ನನ್ನ ಪೂಜಾ ನಿಮಿತ್ತವಾಗಿ ಎಲೆ, ಹೂ, ಹಣ್ಣು, ನೀರು, ಯಾವುದನ್ನಾದರೂ ಸರಿಯೇ ಭಕ್ತಿಯಿಂದರ್ಪಿಸಿದರೆ ಅವ ರು ನನ್ನ ಪ್ರೇಮಪಾತ್ರರಾಗುವರು. ಈ ಪ್ರಪಂಚಕ್ಕೆ ಮೊದಲೇ ನಾನು ಪರಮೇಷ್ಠಿಯಾದ ಬ್ರಹ್ಮನನ್ನು ನಿರ್ಮಿಸಿ ಅವನಿಗೆ ನನ್ನ ಮುಖೋದ್ಗ ತವಾದ ಅಶೇಷ ವೇದಗಳನ್ನೂ ಹೇಳಿಕೊಟ್ಟೆನು. ನಾನು ಸರ್ವಯೋಗಿ ಗಳಿಗೂ ಗುರು; ನಾಶರಹಿತನು. ಧಾರ್ಮಿಕರನ್ನು ಕಾಪಾಡುವೆನು. ವೇದ ದೂಷಕರನ್ನು ನಾಶಮಾಡುವೆನು. ಯೋಗಿಗಳನ್ನು ಸಂಸಾರದಿಂದ ಬಿಡು ಗಡೆ ಮಾಡುವವನೂ ನಾನೇ. ಸರ್ವ ಸಂಸಾರ ವರ್ಜಿತನಾಗಿ ಸಂಸಾರ ಹೇತುವಾಗಿರುವವನೂ ನಾನೆ; ನಾನು ಸೃಷ್ಟಿಸಿ ಪಾಲಿಸಿ ಸಂಹರಿಸಬಲ್ಲೆನು. ನನ್ನ ಶಕ್ತಿಯೇ ಮಾಯೆ; ಇದು ಲೋಕವನ್ನೆಲ್ಲಾ ಮೋಹಿಸುವುದು. ನನ್ನ ಪರಾ ಶಕ್ತಿಯು ವಿದ್ಯೆಯೆಂದು ಹೇಳಲ್ಪಡುವುದು. ಅದರಿಂದ ಯೋಗಿಗಳ ಹೃದ್ಗತವಾದ ಮಾಯೆಯನ್ನು ಹೋಗಲಾಡಿಸುವೆನು. ಸಮಸ್ತ ಶಕ್ತಿಗಳ ಪ್ರವರ್ತನೆಗೂ ನಿವರ್ತನೆಗೂ ನಾನೇ ಕಾರಣನು. ನಾನು ಸರ್ವ ಶಕ್ತಿಗ ಳಿಗೂ ಆಧಾರನಾಗಿರುವೆನು. ಅಮೃತಕ್ಕೆ ನಿಧಿಯಾಗಿರುವೆನು. ಸರ್ವಾಂ ತರ್ಯಾಮಿಯಾದ ಶಕ್ತಿಯೊಂದೇ ವಿವಿಧವಾದ ಜಗತ್ತನ್ನು ಸೃಷ್ಟಿಸುವುದು. ವಿಷ್ಣುರೂಪವಾದ ಇನ್ನೊಂದು ಶಕ್ತಿಯು ಜಗತ್ತನ್ನು ಪರಿಪಾಲಿಸುವುದು.

ಮೂರನೇ ಶಕ್ತಿಯು ಜಗತ್ತನ್ನು ನಾಶಮಾಡುವುದು. ಆ ಶಕ್ತಿಗೆ ತಾಮಸೀ ಶಕ್ತಿಯೆಂತಲೂ, ಕಾಲರೂಪಿಣಿಯಾದ ರುದ್ರಶಕ್ತಿಯೆಂತಲೂ ಹೆಸರು. ನನ್ನೆನ್ನು ಕೆಲವರು ಧ್ಯಾನದಿಂದಲೂ ಕೆಲವರು ಜ್ಞಾನದಿಂದಲೂ, ನೋಡುವರು. ಕೆಲವರು ಭಕ್ತಿಯೋಗದಿಂದಲೂ, ಕೆಲವರು ಕರ್ಮಯೋಗದಿಂದಲೂ ನೋಡುವರು. ಎಲ್ಲಾ ಭಕ್ತರಿಗಿಂತಲೂ ಜ್ಞಾನದಿಂದ ನಿತ್ಯವೂ ನನ್ನನ್ನಾರಾಧಿಸುವವರು ಯಾರೋ ಅವರು ನನಗೆ ಬಹಳ ಪ್ರಿಯರು.

ಮಿಕ್ಕಮೂವರು ಭಕ್ತರು ನನ್ನನ್ನಾರಾಧಿಸುತ್ತಾ ಅವರು ನನ್ನನ್ನೇ ಸೇರುವರು. ಮತ್ತೆ ಹುಟ್ಟುವುದಿಲ್ಲ. ಈ ಜಗತ್ತು ನನ್ನಿಂದ ವ್ಯಾಪ್ತವಾಗಿದೆಯೆಂದು ಯಾರುತಿಳಿದಿರುತ್ತಾರೆಯೋ ಅವರೇ ಮುಕ್ತರು. ಮಹಾಯೋಗೇಶ್ವರನಾದ ನಾನು ಜಗತ್ತನ್ನು ನಿರ್ಮಿಸುವೆನು. ವಿದ್ವಾಂಸರು ಯೋಗವನ್ನು ಮಾಯೆಯೆಂತಲೂ ಹೇಳುವರು. ಮಹತ್ವದಿಂದ ಮಹಾದೇವನೆಂತಲೂ, ಪರನಾಗಿರುವುದರಿಂದ ಪರಮೇಶ್ವರನೆಂತಲೂ ಹೇಳಿಸಿಕೊಂಡು ನಾನು ನಿರ್ವಿಕಲ್ಪವಾದ ಯೋಗದಿಂದ ಕೂಡಿರುವೆನು. ನಾನು ಬ್ರಹ್ಮಮಯನು ಯೋಗೇಶ್ವರನು ಎಂದು ಯಾರು ತಿಳಿಯುವರೋ ಅವರು ನಿರ್ವಿಕಲ್ಪವಾದ ಯೋಗದಿಂದ ಕೂಡಿದವರಾಗಿರುತ್ತಾರೆ. ನಾನು ಪರಮಾನಂದವನ್ನು ಹೊಂದಿ ಅಂತಹ ಪ್ರೇರಕನಾಗಿಯೂ, ಸದಾಯೋಗಿಯಾಗಿಯೂ ಇರುವೆನು" ಎಂದು ಯಾರು ಬಲ್ಲರೋ ಅವರೇ ವೇದವನ್ನು ಬಲ್ಲವರಾಗಿರುತ್ತಾರೆ. ಈ ಗುಪ್ತವಾದ ಜ್ಞಾನವನ್ನು ನಿರ್ಮಲಚಿತ್ತರಾದ ಅಗ್ನಿಹೋತ್ರಿಗಳಿಗೆ ಉಪದೇಶಿಸಬೇಕು.

ಭಕ್ತಿಯೋಗವೆಂಬ ೧೩ ನೆಯ ಅಧ್ಯಾಯವುಮುಗಿದುದು.

———o———

## ಹದಿನಾಲ್ಕನೆಯ ಅಧ್ಯಾಯವು

—o—

ಸಮಸ್ತ ಲೋಕವನ್ನು ನಿರ್ಮಾಣಮಾಡುತ್ತ ಸಮಸ್ತ ಲೋಕವನ್ನೂ ಕಾಪಾಡುತ್ತ ಸರ್ವಲೋಕವನ್ನೂ ಸಂಹರಿಸುತ್ತ ನಾನು ಸನಾತನನಾಗಿರ್ರುವೆನು. ಸಮಸ್ತ ವಸ್ತುಗಳಲ್ಲಿಯೂ. ಒಳಗಡೆಇದ್ದುಕೊಂಡು ನಾನು ಎಲ್ಲಕ್ಕೂ

ತಂದೆಯಾಗಿರುವೆನು. ಎಲ್ಲವೂ ನನ್ನಲ್ಲಿ ಲೀನವಾಗಿರುವುವು . ನಾನು ಎಲ್ಲಿ ಯೂ ಲೀನನಾ 'ಲ್ಲ. ನೀನುನೋಡಿದ ನನ್ನ ಸಂಬಂಧವಾದ ಅದ್ಭುತರೂ ಪವಾವುದುಂಟೊ ಅದು ಅತ್ಯಾಶ್ಚರ್ಯವಾಗಿರುವುದು. ಅದಕ್ಕೆ ಹೋಲಿಕೆಯೇ ಇಲ್ಲ. ಆ ರೂಪವನ್ನು ನಿನಗೆಮಾಯೆಯಿಂದ ತೋರಿಸಿದೆನು. ನಾನು ಸರ್ವ ಭಾವಗಳ ಅಂತರ್ಗತನಾಗಿ ಜಗತ್ತನ್ನು ಪ್ರೇರಿಸುವೆನು. ಇದಕ್ಕೆ ಕ್ರಿಯಾ ಶಕ್ತಿಯೆಂದುಹೆಸರು. ನನ್ನಚೇಷ್ಟೆಯಿಂದಲೇ ಈ ಪ್ರಪಂಚವೆಲ್ಲವೂ ಹುಟ್ಟಿ ನನ್ನಸ್ವಭಾವವನ್ನು ಅನುಸರಿಸುವುದು. ನಾನು ಕಾಲದಲ್ಲಿ ಜಗತ್ತನ್ನುನಿರ್ಮಿಸುವೆನು. ಒಂದುರೂಪದಿಂದ ಕೊಲ್ಲುವೆನು. ನನಗೆ ಎರಡು ಅವಸ್ಥೆಗಳುಂಟು ? ಆದಿಮಧ್ಯಾಂತ ನಿರ್ಮುಕ್ತನಾಗಿಯೂ ಮಾಯಾ ಪ್ರವರ್ತಕನಾಗಿಯೂ ಇರುವೆನು. ನಾನು ಸರ್ಗಾದಿಯಲ್ಲಿ ಪ್ರಕೃತಿಪುರುಷರನ್ನು ಕ್ಷೋಭವಮಾ ುವೆನು. ಪ್ರಕೃತಿ ಪುರುಷರ ಸಂಸರ್ಗದಿಂದ ಸಕಲವೂ ಉಂಟಾಗುವುವು. ೯ೀಗೆ ಮಹದಾದಿ ಕ್ರಮಗಳಿಂದ ನನ್ನ ತೇಜಸ್ಸು ವಿಜೃಂಭಿತವಾಗುವುದು. ಜಗತ್ಸಾಕ್ಷಿಯೂ ಕಾಲಚಕ್ರ ಪ್ರವರ್ತಕನೂ ಆಗಿರುವ ಹಿರಣ್ಯಗರ್ಭನೂ ನನ್ನ ದೇಹಸಂಭವನಾಗಿದ್ದಾನೆ, ಆ ಹಿರಣ್ಯಗರ್ಭನಿ ೆ ನನ್ನ ಪರಮೈಶ್ವರ್ಯ ಭೂತವಾದ ಶಾಶ್ವತ ಜ್ಞಾನಯೋಗವನ್ನೂ ಮತ್ತು ನನ್ನಿಂದೊಗೆದ ನಾಲ್ಕು ವೇದಗಳನ್ನೂ ಕಲ್ಪಾದಿಯಲ್ಲಿ ಉಪದೇಶಿಸಿರುವೆನು. ಆಬ್ರಹ್ಮನು ನನ್ನ ನಿಯೋಗದಿಂದಲೇ ನನ್ನನ್ನೇ ನಂಬಿದವನಾಗಿ ದಿವ್ಯವಾದ ನನ್ನ ಐಶ್ವರ್ಯವನ್ನು ಅನುಭವಿಸಿ, ಸಮಸ್ತ ಲೋಕವನ್ನೂ ನಿರ್ಮಿಸುತ್ತ ಸರ್ವಜ್ಞನಾಗಿರುವನು. ಮತ್ತು ಚತುರ್ಮುಖನಾಗಿರುವನು, ಲೋಕವನ್ನು ಪರಿಪಾಲಿಸುವ ಆ ನಾರಾಯಣನು ನನ್ನ ಅಪರಮೂರ್ತಿಯೇ ಆ ರುತ್ತಾನೆ. ಸರ್ವ ಭೂತಗಳಿಗೂ ಅಂತಕನಾಗಿಯೂ, ಕಾಲರೂಪನಾಗಿಯೂ ಇರುವ ಆ ರುದ್ರನು ನನ್ನನುಜ್ಞೆಯಿಂದಲೇ ಸಂಹಾರಕನಾಗಿರುವನು. ದೇವತೆಗಳಿಗೆ ಹವಿಸ್ಸನ್ನೂ ಪಿತೃದೇವತೆಗಳಿಗೆ ಕವ್ಯವನ್ನೂ ಒಯ್ಯುತ್ತಿರುವ ಅಗ್ನಿಯು ಪಾಕವನ್ನು ಮಾಡುತ್ತ ನನ್ನ ಶಕ್ತಿಚೋದಿತನಾಗಿರುವನು. ರಾತ್ರಿ ಹಗಲು ಭುಕ್ತಾಹಾರವನ್ನು ಜೀರ್ಣಮಾಡುವ ವೈಶ್ವಾನರನೆಂಬ ಅಗ್ನಿಯು ನನ್ನ ನಿಯೋಗವನ್ನು ಅನುಸರಿಸಿಕೊಂಡಿರುವನು. ಜಲಾಧಿದೇವತೆಯಾದ ವರುಣನೂ ನನ್ನನಿಯೋಗದಿಂದ

ಸರ್ವರನ್ನೂ ಜೀವಿಸುವಂತೆ ಮಾಡುತ್ತಿರುವನು. ಯಾವನು ನಿರಂಜನನಾಗಿ ಭೂತಗಳ ಅಂತರಂಗದಲ್ಲಿರುವನೋ ಅವನೂ ನನ್ನಾಜ್ಞೆಯಿಂದ ಭೂತಗಳ ಶರೀರವನ್ನು ಧರಿಸಿರುವನು. ಮನುಷ್ಯರಿಗೆ ಸಂಜೀವನ ಪ್ರಾಯನಾಗಿಯೂ, ದೇವತೆಗಳಿಗೆ ಅಮೃತದಗಣಿಯಾಗಿಯೂ, ಇರುವಚಂದ್ರನು ನನ್ನಿಂದಲೇ ನಿರ್ಮಿತನಾಗಿರುವನು. ತನ್ನತೇಜಸ್ಸಿನಿಂದ ಜಗತ್ತನ್ನು ಬೆಳಗುವಸೂರ್ಯನೂ ನನ್ನಿಂದಲೇ ಆಗಿರುವನು. ಜಗತ್ತನ್ನು ಶಿಕ್ಷಿಸುತ್ತ ಸರ್ವಾಮರೇಶ್ವರನಾದ ಇಂದ್ರನೂ, ಯಜ್ಞಫಲವನ್ನು ಕೊಡುತ್ತ ನನ್ನಾಜ್ಞೆಯನ್ನು ಅನುವರ್ತಿಸಿರುವನು. ನನ್ನಾಜ್ಞೆಯಿಂದಲೇ ಯಮನು ದುಷ್ಟರನ್ನು ದಂಡಿಸುತ್ತಿರುವನು. ಕುಬೇರನು ನನ್ನಪ್ಪಣೆಯಿಂದಲೇ ಧನಾಧ್ಯಕ್ಷನಾಗಿರುವನು. ರಾಕ್ಷಸರಾಜನಾಗಿ ತಪಃ ಫಲವನ್ನೂಕೊಡುವ ನಿರಋತಿಯೂ, ಭೇತಾಳಭೂತಗಣಗಳಿಗೆ ರಾಜನಾಗಿ ಭಕ್ತರಿಗೆ ಭೋಗಫಲವನ್ನು ಕೊಡುವ ಈಶಾನನೂ, ರುದ್ರ ಗಣಾಗ್ರಣಿಯಾಗಿ ನಿತ್ಯಪ್ರಾಯೋಗಿಗಳನ್ನು ಕಾಪಾಡುತ್ತಿರುವ ವಾಮದೇವನೂ, ಸರ್ವಜಗತ್ಪೂಜ್ಯನಾಗಿ ವಿಘ್ನವನ್ನೆಲ್ಲಾ ದೂರಮಾಡುತ್ತಿರುವ ವಿನಾಯಕನೂ, ದೇವಸೇನಾಪತಿಯಾದ ಷಣ್ಮುಖನೂ ಇವರೆಲ್ಲರೂ ನನ್ನಾಜ್ಞೆಯಂತೆ ನಡೆಯುತ್ತಿರುವರು.

ಪ್ರಜಾಪತಿಗಳಾದ ಮರೀಚಿ ಮೊದಲಾದ ಮಹರ್ಷಿಗಳು ನನ್ನಪ್ಪಣೆಯಿಂದ ಬಗೆಬಗೆಯಾದ ಲೋಕಗಳನ್ನು ಸೃಜಿಸುತ್ತಲಿರುವರು. ಸರ್ವಭೂತಗಳಿಗೂ ಐಶ್ವರ್ಯಪ್ರದಳಾಗಿ ನಾರಾಯಣನಪತ್ನಿಯಾಗಿರುವ ಲಕ್ಷ್ಮೀದೇವಿಯೂ ನನ್ನಮಾತಿನಂತೆ ನಡೆಯುತ್ತಿರುವಳು; ಸರಸ್ವತಿಯೂ ಅತ್ಯುತ್ತಮವಾದ ವಾಗ್ವೈಖರಿಯನ್ನುಂಟುಮಾಡುವಳು; ಸಾವಿತ್ರಿಯು ಸಮಸ್ತರನ್ನೂ ಘೋರವಾದ ನರಕದಿಂದ ದಾಟಿಸುವಳು; ಬ್ರಹ್ಮವಿದ್ಯಾಪ್ರದಾಯಕಳಾದ ಪಾರ್ವತೀ ದೇವಿಯನ್ನು ನೆನೆದುದೆ ಆದರೆ ವಿಶೇಷವಾಗಿ ಬ್ರಹ್ಮಜ್ಞಾನವನ್ನು ನೀಡುವಳು; ಆದಿಶೇಷನು ಭೂಮಿಯನ್ನು ಹೊತ್ತು ಕೊಂಡಿರುವನು; ಬಡಬಾಗ್ನಿಯು ಸಮುದ್ರದ ಹೆಚ್ಚುಜಲವನ್ನು ಹೀರಿಬಿಡುವುದು. ಆದಿತ್ಯರೂ ವಸುಗಳೂ, ರುದ್ರರೂ, ಮರುತ್ತುಗಳೂ ಅಶ್ವಿನೀದೇವತೆಗಳೇ ಮೊದಲಾದವರೆಲ್ಲರೂ, ನನ್ನಶಾಸನವನ್ನು ಶಿರಸಾವಹಿಸಿ ನಡೆಯಿಸುತ್ತಿರುವರು. ಗಂಧ

ರ್ವ್ವೋರಗ ಯಕ್ಷ ಸಿದ್ಧ ಸಾಧ್ಯರೂ ಭೂತಗಳೂ ರಾಕ್ಷಸರೂ ಪಿಶಾಚಗಳೂ ನನ್ನನುಜ್ಞೆಯನ್ನು ವಹಿಸಿರುವುವು.

ಕಲೆ, ಕಾಷ್ಠ, ನಿಮೇಷ - ಮುಹೂರ್ತ - ದಿವಸ ಕ್ಷಣಗಳೂ, ಋತು, ಅಬ್ದ,ಮಾಸ, ಪಕ್ಷಗಳೂ ಯುಗಮನ್ವಂತರಗಳೂ ಪರಾಪರಕಾಲಭೇದಗಳೂ ನನ್ನಿಂದಲೇ ನಡೆಯುತ್ತಿರುವುವು. ಸ್ಥಾವರ ಜಂಗಮರೂಪವಾದ ಚತುರ್ವಿಧ ಪ್ರಾಣಿಗಳೂ (ಜರಾಯುಜ - ಸ್ವೇದಜ - ಉಧ್ಭಿಜ್ಜ - ಖನಿಜ) ಸ್ವಯಂಭುವನಾದ ನನ್ನ ಮಾತಿನಂತೆ ನಡೆಯುತ್ತಿರುವುವು. ನಗರ, ಭುವನ, ಬ್ರಹ್ಮಾಂಡಗಳೆಲ್ಲವೂ ಪರಮಾತ್ಮನಾದ ನನಗೆ ಅಧೀನಗಳಾಗಿವೆ. ನನ್ನನುಜ್ಞೆಯಿಂದ ಅನೇಕ ಬ್ರಹ್ಮಾಂಡಗಳು ಆಗಿಹೋದುವು. ಅನೇಕ ಬ್ರಹ್ಮಾಂಡಗಳು ಜನಿಸಿದುವು. ಪಂಚಭೂತಗಳೂ ಮನಸ್ಸು ಬುದ್ಧಿ ಮೊದಲಾದುವೂ ನನ್ನ ನಿಯೋಗದಂತೆ ನಡೆಯುತ್ತಿರುವುವು. ಸಕಲ ಜಗತ್ತನ್ನೂ ಮೋಹಗೊಳಿಸುವ ಮಾಯೆಯೂ ನನ್ನಾಜ್ಞೆಯಿಂದ ಪ್ರವೃತ್ತವಾಗಿರುವುದು. ಆ ಮಾಯೆಯನ್ನುಳಿದು ಮೋಹವನ್ನು ತ್ಯಜಿಸಿದವರು ಸಚ್ಚಿದಾನಂದ ಬ್ರಹ್ಮಪದವನ್ನು ಸಾರುವರು. ಮಾಯೆಯನ್ನು ನಿವಾರಿಸುವ ವಿದ್ಯೆಯೂ ನನ್ನಿಂದಲೇ ನಿರ್ಮಿತವಾಗಿರುವುದು. ಬಹಳವಾಗಿ ಹೇಳಿದರೆ ಪ್ರಯೋಜನವೇನು ? ಈ ಪ್ರಪಂಚವೆಲ್ಲವೂ ನನ್ನ ಶಕ್ತಿಗೆ ವಶವಾಗಿರುವುದು. ನನ್ನಿಂದಲೇ ಪ್ರಪಂಚವೆಲ್ಲವೂ ಪೂರ್ಣವಾಗಿ ಕೊನೆಗೆ ನನ್ನಲ್ಲಿಯೇ ಲೀನವಾಗಿರುವುದು. ನಾನು ಈಶ್ವರನು. ಷಡ್ಗುಣೈಶ್ವರ್ಯಯುಕ್ತನು. ಸನಾತನನು. ಪರಮಾತ್ಮನು. ಪರಬ್ರಹ್ಮನು. ನನಗಿಂತಲೂ ಬೇರೆಯಾದುದು ಯಾವುದೂ ಇಲ್ಲ. ಈ ಪರಮಜ್ಞಾನವನ್ನು ನಿನಗುಪದೇಶಿಸಿರುವೆನು. ಇದನ್ನು ಬಲ್ಲವರು ಸಂಸಾರ ಬಂಧನದಿಂದ ಬಿಡುಗಡೆಯಾಗುವರು. ನಾನು ಮಾಯೆಯನ್ನು ಹೊಂದಿ ದಶರಥನ ಮನೆಯಲ್ಲಿ ರಾಮಲಕ್ಷ್ಮಣ ಭರತಶತ್ರುಘ್ನ ರೂಪದಿಂದ ಅವತರಿಸಿರುವೆನು.

ಎಲೈ ಅಂಜನೇಯನೆ ! ನನ್ನ ಸ್ವರೂಪವನ್ನು ನಿನಗೆ ವಿವರಿಸಿದೆನು. ಇದನ್ನು ನೀನು ಮರೆಯದಂತೆ ಹೃದಯದಲ್ಲಿ ದೃಢವಾಗಿಟ್ಟುಕೊಂಡಿರು.? ನಮ್ಮಿಬ್ಬರ ಈ ಸಂವಾದವನ್ನು ಯಾರು ಭಕ್ತಿಯಿಂದ ಗ್ರಹಿಸುತ್ತಾರೋ ಅವರು ಪಾಪವಿಮುಕ್ತರಾಗಿ ಜೀವನ್ಮುಕ್ತರಾಗುವರು. ಬ್ರಹ್ಮಚರ್ಯದಿಂದ

ಶುದ್ಧರಾಗಿರುವ ಬ್ರಾಹ್ಮಣರಿಗೆ ಯಾರು ಇದನ್ನು ಶ್ರವಣ ಮಾಡಿಸುತ್ತಾರೆ ಯೋ ಅವರು ಪರಮ ಪದವನ್ನು ಹೊಂದುವರು. ವಿದ್ವಾಂಸರದನ್ನು ಕೇಳಿ ಚೆನ್ನಾಗಿ ಮನನಮಾಡುವರಾಗಬೇಕು.

ಹದಿನಾಲ್ಕನೆಯ ಅಧ್ಯಾಯವು ಮುಗಿದುದು.

---

## ಹದಿನೈದನೆಯ ಅಧ್ಯಾಯವು.

---

ಆಂಜನೇಯನು ಹೃದ್ಗತನಾದ ಪರಮಾತ್ಮನನ್ನು ಧ್ಯಾನಿಸಿ ನಮಸ್ಕಾರಮಾಡಿ ಕೈಮುಗಿದುಕೊಂಡು ಓಂಕಾರವನ್ನುಚ್ಚರಿಸಿ ಅಂತಶ್ಶರೀರದ ಗುಹೆಯಲ್ಲಿರುವ ಪರಮಾತ್ಮನನ್ನು ನೋಡುವನಾದನು. ಆ ಹೃದ್ಗತನೂ ಪರಮಾತ್ಮ ಸ್ವರೂಪನೂ ಆದ ಶ್ರೀರಾಮನು ಅಕುಂಠಿತ ಶಕ್ತಿಯುಳ್ಳವನಾಗಿ ಸನಂದ ಮೊದಲಾದ ಮುನಿಗಳಿಂದ ಸ್ತುತಿಸಿಕೊಳ್ಳಲ್ಪಡುತ್ತಿರುವನು. ಅಂತಪ್ಪ ಶ್ರೀರಾಮನನ್ನು ಆನಂದ ಪೂರ್ಣನಾಗಿ ಆಂಜನೇಯನು ಬ್ರಹ್ಮಮಯವಾದ ವಾಕ್ಯಗಳಿಂದ ಹೊಗಳತೊಡಗಿದನು. ಎಲೈರಾಮನೆ ! ನೀನು ಪರಮೇಶ್ವರನು. ಪುರುಷನು ಪುರಾಣನು. ಪ್ರಾಣೇಶ್ವರನು. ಸರ್ವಾಂತರ್ಯಾಮಿಯಾಗಿರುವ ನಿನ್ನನ್ನು ನಾನು ನಮಸ್ಕರಿಸುವೆನು. ನೀನು ಬ್ರಹ್ಮಮಯನಾಗಿಯೂ ಪವಿತ್ರನಾಗಿಯೂ ಇರುವೆ? ರುಕ್ಮವರ್ಣವುಳ್ಳ ನಿನ್ನನ್ನು ಶಾಂತರಾದ ಮುನಿಗಳು ಹೃದಯಕಮಲದ ಮಧ್ಯದಲ್ಲಿ ನೋಡುತ್ತಿರುವರು. ಎಲೈರಾಮನೆ ! ನಿನ್ನಿಂದಲೇ ಸಕಲಜಗತ್ತೂ ಸೃಷ್ಟಿಸಲ್ಪಡುತ್ತಿದೆ. ನೀನು ಅಣುವಿಗಿಂತಲೂ ಅಣುವಾಗಿಯೂ, ಮಹತ್ತಿಗಿಂತಲೂ ಮಹತ್ತಾಗಿಯೂ ಇರುವೆ. ಹಿರಣ್ಯಗರ್ಭನು ನಿನ್ನಿಂದಲೇ ಜನಿಸುವನು. ಅವನಿಂದ ಈ ಪ್ರಪಂಚವು ಸೃಷ್ಟಿಸಲ್ಪಟ್ಟಿತು. ವೇದಗಳೂ ನಿನ್ನಿಂದಲೇ ಹರೆದುವು. ಕೊನೆಗೆ ಎಲ್ಲವೂ ನಿನ್ನಲ್ಲಿಯೇ ಲೀನವಾಗುವುದು. ನನ್ನ ಹೃದಯದಲ್ಲಿ ನರ್ತಿಸುತ್ತಿರುವ ನಿನ್ನನ್ನು ಸಕಲ ಜಗತ್ತಿಗೂ ಹೇತುಭೂತನೆಂದು ತಿಳಿದಿದ್ದೇನೆ. ನಿನ್ನಿಂದಲೇ ಈ ಬ್ರಹ್ಮಚಕ್ರವು ತಿರುಗುತ್ತಿರುವುದು. ನೀನು ಮಾಯಾವಿಯು. ಏಕನಾಥನು. ಪರಮಾಕಾಶ ಮಧ್ಯದಲ್ಲಿ ನೃತ್ಯ

ಮಾಡುತ್ತಿರುವ ನಿನ್ನ ಮಹಿಮೆಯನ್ನು ನಾನು ನೆನೆಯುವೆನು. ನೀನು ಓಂಕಾರ ರೂಪನು. ಓಂಕಾರವು ಮುಕ್ತಿ ಬೀಜವಾಗಿರುವುದು. ನೀನು ಅಕ್ಷರನು. ಪ್ರಕೃತಿಯಲ್ಲಿ ಗೂಢರೂಪದಿಂದಿರುತ್ತೀಯೆ ? ನಿನ್ನನ್ನು ಎಲ್ಲಾ ದೇವತೆಗಳೂ ಮುನಿಗಳೂ ಸ್ತುತಿಸುತ್ತಿರುವರು. ನಿನ್ನನ್ನು ಮರೆ ಹೊಕ್ಕವರು ಶಾಂತರಾಗಿ ಶಾಶ್ವತವಾದ ಸುಖವನ್ನು ಪಡೆಯುವರು. ಇತರರಿಗೆ ದೊರೆವುದು ದುರ್ಲಭ. ನೀನು ಅಣಿಮಾದ್ಯೈಶ್ವರ್ಯ ಯುಕ್ತನು. ಬ್ರಹ್ಮನು. ಪರಮೇಷ್ಠಿಯು. ನೀನೊಬ್ಬನೇ ದೇವನು. ನೀನು ತಮಸ್ಸಿಗೆ ಪರನಾಗಿರುವೆ. ನಿನ್ನ ಪಾದಕಮಲದ ಧ್ಯಾನದಿಂದ ಸಂಸಾರ ಬೀಜಗಳೆಲ್ಲವೂನಾಶವಾಗಿ ಹೋಗುವುವು. ನಾನು ಮನಸ್ಸನ್ನು ನಿಗ್ರಹಿಸಿ ಇಂದ್ರಿಯಗಳನ್ನು ಬಿಗಿ ಹಿಡಿದು ನಿನ್ನನ್ನು ಬೇಡಿಕೊಳ್ಳುವೆನು ಎಲೈ ರಾಮನೆ ! ನೀನು ಕಾಲರೂಪನು. ಸರ್ವಲೋಕ ಹೇತುವೂ ಆಗಿರುವೆ. ನಾನು ನಿನ್ನನ್ನು ನಮಿಸುವೆನೆಂದು ಆಂಜನೇಯನು ವಂದಿಸಿದನು. ತರುವಾಯ ರಾಮನು ಲಕ್ಷ್ಮಣನೊಡನೆ ಕೂಡಿ ತನ್ನ ಅದ್ಭುತರೂಪವನ್ನು ಬಿಟ್ಟು ಪೂರ್ವರೂಪವನ್ನು ಕೈಕೊಂಡನು. ಆಮೇಲೆ ಶ್ರೀರಾಮನು "ಎಲೈ ಆಂಜನೇಯನೆ ! ಯಾರು ಈ ನಿನ್ನ ಸ್ತುತಿಯನ್ನು ನನೆಸುವರೋ ಅವರು ಮುಕ್ತರಾಗುವರು. ನೀನು ಚಿರಂಜೀವಿಯಾಗಿ ನನ್ನ ಕಾರ್ಯಕ್ಕೆ ಸಹಾಯಕನಾಗಿರು'' ಎಂದು ಹೇಳಿದನು,

---o---

ಹದಿನೈದನೆಯ ಅಧ್ಯಾಯವು ಮುಗಿದುದು.

## ಹದಿನಾರನೆಯ ಅಧ್ಯಾಯವು.

---o---

ಆಮೇಲೆ ಶ್ರೀರಾಮಮೂರ್ತಿಯು ಹನುಮಂತನನ್ನು ಕುರಿತು— "ಎಲೈ ಮಾರುತಿಯೆ ! ದುರಾತ್ಮನಾದ ರಾವಣನು ನನ್ನ ಹೆಂಡತಿಯಾದ ಸೀತೆಯನ್ನಪಹರಿಸಿಕೊಂಡು ಹೋಗಿರುವನು. ಸುಗ್ರೀವನೊಡನೆ ನೀನು ಮೈತ್ರಿಯನ್ನು ನನಗುಂಟುಮಾಡಿ ಸೀತೆಯನ್ನು ಕರೆದು ತರಲು ನೆರವಾಗು" ಎಂದು ಹೇಳಲು ಆ ಮಾತಿಗೆ ಹನುಮಂತನು ನಕ್ಕು "ಎಲೈ ಮ

ಹಾಭಾಗನೆ ! ನಿನ್ನ ಹೆಂಡತಿಯನ್ನು ರಾವಣನು ಕದ್ದುಕೊಂಡು ಹೋದ ನೆಂದು ಹೇಳುವುದು, ಈ ಪ್ರಪಂಚವು ಹೇಗೆ ಸತ್ಯವೋ ಹಾಗೆಯೇ ನಾನು ಭಾವಿಸುವೆನು. ಆದರೂ ಒಡೆಯನ ಕಾರ್ಯಗಳನ್ನು ಆಳುಗಳು ನಡೆಯಿಸಲೇಬೇಕು "ಇದು ಬಹು ಮುಖ್ಯವಾದುದು'' ಎಂದು ನುಡಿದು ಪ್ರಸನ್ನಾಂತಃಕರಣದಿಂದ ಶೂರರಾದ ರಾಮಲಕ್ಷ್ಮಣರನ್ನು ಹೆಗಲಮೇಲೇರಿಸಿಕೊಂಡು, ಸುಗ್ರೀವನ ಸಮೀಪಕ್ಕೆ ಬಂದನು. ಅಲ್ಲಿ ಸುಗ್ರೀವನು ಅವರನ್ನು ನೋಡಿದ ಮಾತ್ರಕ್ಕೆ "ನಾನು ವಾಲಿಯನ್ನು ಗೆದ್ದೆನೆಂತಲೂ ರುಮೆಯನ್ನು ಹೊಂದಿದೆನೆಂತಲೂ ತಿಳಿದು" ಅದೃಷ್ಟ ! ಅದೃಷ್ಟ !! ಎಂದಂದುಕೊಂಡು, ರಾಮನೊಡನೆ ಸಖ್ಯವನ್ನುಂಟುಮಾಡಿಕೊಂಡನು.

ರಾಮಲಕ್ಷ್ಮಣರು ವಾಲಿಯನ್ನು ಗೆದ್ದು ರಾಜ್ಯವನ್ನು ಸುಗ್ರೀವನ ವಶಮಾಡಿ ನಾನಾ ದೇಶಗಳಲ್ಲಿದ್ದ ಕಪಿಗಳನ್ನೆಲ್ಲಾ ಬರಮಾಡಿಕೊಂಡು, ಹನುಮದಂಗದಾರೂಢರಾಗಿ ಸುಗ್ರೀವನೊಡನೆ ಸಮುದ್ರದ ಸಮೀಪಕ್ಕೆ ಹೋದರು. ಸಮುದ್ರದಾಚೆಯಿರುವ ಲಂಕೆಯನ್ನು ನೋಡಿ ರಾಮನು ತಮ್ಮನನ್ನು ಕುರಿತು—" ಎಲೈಲಕ್ಷ್ಮಣನೆ ಲಂಕಾಪಟ್ಟಣಕ್ಕೆ ಕಪಿಗಳು ಸುರಕ್ಷಿತವಾಗಿ ಸೇರುವಂತೆಮಾಡು'' ಎಂದು ನುಡಿಯಲು, ಅಣ್ಣನಮಾತನ್ನು ಕೇಳಿ ಲಕ್ಷ್ಮಣನು "ಎಲೈ ಸಮುದ್ರನೆ ? ನೀನೊಂದುಕಡೆ ನಮಗೆ ದಾರಿಯನ್ನು ಕೊಡು, ಈ ಕಪಿಗಳೀಕಡಲನ್ನು ದಾಟಬೇಕು'' ಎಂದು ಸಮುದ್ರನನ್ನು ಕುರಿತು ಹೇಳಲು, ಸಮುದ್ರ ರಾಜನಾಮಾತನ್ನು ಕಿವಿಗೆ ಹಾಕಿಕೊಳ್ಳಲಿಲ್ಲ. ಆಗ ಲಕ್ಷ್ಮಣನಿಗೆ ಕೋಪಬಂದು ಅವನು ಸಮುದ್ರಕ್ಕೆ ಬೀಳಲು ಅವನ ದೇಹಜ್ವಾಲೆಯಿಂದ ಸಮುದ್ರದ ಜಲವೆಲ್ಲವೂ ಹೀರಿಹೋಯಿತು. ಅಲ್ಲಿದ್ದ ಜಲಚರಗಳೆಲ್ಲವೂ ವೇಲಕ್ಕೆ ಬಂದುವು ದೇವತೆಗಳೆಲ್ಲರೂ ಹೆದರಿ ದಿಕ್ಕುಪಾಲಾಗಿ ಚದುರಿದರು. ಕಪಿಗಳು ಆ ಆಶ್ಚರ್ಯವನ್ನು ನೋಡಿ ಬೆರಗಾಗಿ ನಿಂದುವು, ಆಗ ಚರಾಚರ ಲೋಕಗಳೆಲ್ಲವೂ ಹಾಹಾಕಾರ ಮಾಡಹತ್ತಿದುವು.

ಋಷಿಗಳೂ ಭೂತಸಂಘಗಳೂ "ಸ್ವಸ್ತಿ! ಸ್ವಸ್ತಿ!! ಎಂದು ಹೇಳುತ್ತಿದ್ದುವು. ರಾಮನದನ್ನು ನೋಡಿ "ಎಲೈ ಲಕ್ಷ್ಮಣ! ನೀನು ಹೀಗೆ ಮಾಡಿದ ದುಸರಿಯಲ್ಲ. ನಾನು ಸೀತಾವಿರಹದಿಂದೊಗೆದ ಕಣ್ಣೀರಿನಿಂದ ಪುನಃ

ಸಮುದ್ರವನ್ನು ತುಂಬಿಸುವೆನು.'' ಎಂದು ಹೇಳಿ ಹಾಗೆಯೇ ಮಾಡಿದನು. ಆಗ ರಾಮನಮೇಲೆ ಪುಷ್ಪವರ್ಷ ವುಂಟಾಯಿತು, ಲೋಕವೆಲ್ಲವೂ ಸ್ತಿಮಿತವಾಗಿದ್ದುವು. ಸಮುದ್ರರಾಜನಿಂದ ಸ್ತುತಿಸಲ್ಪಟ್ಟ ರಾಮನು ಆ ಸಮುದ್ರದಲ್ಲಿ ಸೇತುವೆಯನ್ನು ಮಾಡಿಸಿ ಆ ಸೇತುವಿನಿಂದ ಲಂಕೆಯನ್ನುಸೇರಿ, ಅಲ್ಲಿ ವಿಭೀಷಣನ ಸಹಾಯದಿಂದ ರಾವಣನನ್ನು ಬಂಧುಸಮೇತವಾಗಿ ಕೊಂದು, ಲಂಕಾರಾಜ್ಯವನ್ನು ವಿಭೀಷಣನಿಗೆ ಕೊಟ್ಟು ಸೀತೆಯನ್ನು ಪುಷ್ಪಕದಲ್ಲಿ ಕುಳ್ಳಿರಿಸಿಕೊಂಡು, ಅಲ್ಲಿಂದ ಸುಗ್ರೀವಹನುಮಂತರೊಡನೆಕೂಡಿ ಅಯೋಧ್ಯೆಗೆ ಹಿಂದಿರುಗಿದನು. ತರುವಾಯರಾಮನು ಅಯೋಧ್ಯೆಯನ್ನುಸೇರಿ, ತನ್ನ ತಮ್ಮಂದಿರನ್ನೂ ಜನನಿಯರನ್ನೂ ಬಾಂಧವರನ್ನೂ ಆನಂದಸಾಗರದಲ್ಲಿ ಮುಳುಗಿಸಿ ಅತಿಶಯವಾದ ಸುಖವನ್ನುಂಟುಮಾಡಿದನು. ಆಮೇಲೆ ರಾಮನೇ ರಾಜ್ಯ ಭಾರವನ್ನು ವಹಿಸಲು ತಿರ್ಯಗ್ಜಂತುಗಳೂ ಕೂಡ ಹೇಳಲಾರದಷ್ಟು ಸಂತೋಷವನ್ನೈದಿದುವು. ಅಂತರಿಕ್ಷದಲ್ಲಿ ದೇವ ದುಂದುಭಿಯು ಸರ್ವದಾ ಮೊಳಗುತ್ತಿತ್ತು. ಆಗ ಮೇಘಗಳು ಕಾಲಕಾಲಕ್ಕೆ ಮಳೆಯನ್ನು ಕರೆಯುತ್ತಿದ್ದುವು. ದೇವತೆಗಳು ರಾಮನಮೇಲೆ ಹೂವಿನಮಳೆಯನ್ನು ಕರೆದರು. ಲೋಕವೆಲ್ಲವೂ ನಿರಾಮಯ ವಾಗಿ ನೆಮ್ಮದಿಯಾಗಿತ್ತು.

———o———

ಹದಿನಾರನೆಯ ಅಧ್ಯಾಯವು ಮುಗಿದುದು.

## ಹದಿನೇಳನೆಯ ಅಧ್ಯಾಯವು.

—o—

ಶ್ರೀರಾಮನು ರಾಕ್ಷಸರನ್ನೆಲ್ಲಾ ನಿರ್ಮೂಲಮಾಡಿ, ರಾಜ್ಯವನ್ನು ಸುಖವಾಗಿ ಪರಿಪಾಲಿಸುತ್ತಿರಲಾಗಿ, ಅವನನ್ನು ಸಂತೋಷ ಪಡಿಸಬೇಕೆಂದು ಮಹರ್ಷಿಗಳೆಲ್ಲರೂ ಒಟ್ಟಿಗೆ ಅಯೋಧ್ಯೆಗೆ ಬಂದು ಸೇರಿದರು. ವಿಶ್ವಾಮಿತ್ರ - ಯವಕ್ರೀತ-ರೈಭ್ಯ-ಚ್ಯವನ - ಕಣ್ವ - ಇವರು ಪೂರ್ವ ದಿಕ್ಕಿನಿಂದಲೂ, ಆತ್ರೇಯ-ನಮುಚ ಅರಿಮುಚ- ಅಗಸ್ತ್ಯ-ಮೊದಲಾದವರು ದಕ್ಷಿಣ ದಿಕ್ಕಿನಿಂದಲೂ, ಉಪಗು - ಕಾಮಠ - ಧೂಮ್ರ - ರೌದ್ರಾಶ್ವ - ಇವರು

ಪಶ್ಚಿಮದ ದೆಸೆಯಿಂದಲೂ, ಬಂದರು. ಇವರೆಲ್ಲರೂ ರಾಘವನ ಅರಮನೆಗೆ ಬಂದು ಫಲ ಮೂಲಗಳನ್ನು ಕಾಣಿಕೆಯಾಗಿ ಕೈಗಳಲ್ಲಿಟ್ಟುಕೊಂಡು, ರಾಮನಿಗೆ ಆಶೀರ್ವಾದವನ್ನು ಮಾಡಿ ಎಲ್ಲರೂ ಪೀಠದಮೇಲೆ ಕುಳಿತುಕೊಂಡರು. ರಾಮನು ಸೀತಾಸಮೇತನಾಗಿ ತಮ್ಮಂದಿರು, ಮಂತ್ರಿಗಳು, ಪೌರರೇ ಮೊದಲಾದವರಿಂದ ಕೂಡಿ ವಿನೀತನಾಗಿ ಬಂದು ಆ ಮುನಿಗಳನ್ನು ವಿಧ್ಯುಕ್ತ ವಿಧಾನದಿಂದ ಅರ್ಚಿಸಿದನು.

ಆಗಲೇ ಅಗಸ್ತ್ಯ ಮೊದಲಾದ ವಿಪ್ರರು, ಒಳ್ಳೆಯದು! ಒಳ್ಳೆಯದು!! ಎಂದು ಹೇಳಿ ರಾಮನನ್ನು ಬಹಳವಾಗಿ ಪ್ರಸಂಗಿಸಿದರು. ಎಲೈರಾಮನೆ! ನೀನು ಸಾಕ್ಷಾದ್ದೇವತಾಸ್ವರೂಪನು. ಜಗನ್ನಾಥನು, ಜಗತ್ತುಗಳಿಗುಪಕಾರಿಯು, ನೀನು ರಾವಣನನ್ನು, ಸುತರು ಸಾಮಾತ್ಯರೊಡನೆ ಕೊಂದುಹಾಕಿದುದರಿಂದೀಗ ಜಗತ್ತು ಮತ್ತೆ ಜನಿಸಿದಂತಾಯಿತು. ಲೋಕದಲ್ಲಿ ರಾವಣನಿಗಿಂತಲೂ ದುಷ್ಟನಾಗಿಯೂ ಭಯಂಕರನಾಗಿಯೂ ಸಾಹಸಿಯಾಗಿಯೂ ಇರುವವರು ಯಾರೂಇಲ್ಲ. ಅವನು ಹತ್ತುಮುಖಗಳಿಂದ ಹತ್ತುದಿಕ್ಕುಗಳಲ್ಲಿಯೂ ಏಕಕಾಲದಲ್ಲಿ ತನ್ನಾಜ್ಞೆಯನ್ನು ನಡೆಯಿಸುತ್ತಿದ್ದನು. ಅಂತಪ್ಪ ಶೂರನಾದ ರಾವಣನನ್ನು ನೀನು ಕೊಂದು ಜಗತ್ತನ್ನುದ್ಧರಿಸಿದೆ ? ಎಲೈ ಭೂಪಾಲನೆ ! ಪೂರ್ವದಲ್ಲಿ ನಿನ್ನನ್ನು ಬ್ರಹ್ಮನು ಬಹುವಿಧವಾಗಿ ಪ್ರಾರ್ಥಿಸಲು ಆಪ್ರಾರ್ಥನೆಯನ್ನಂಗೀಕರಿಸಿ, ಪುಂಡರೀಕದಂತೆ ವಿಶಾಲಾಕ್ಷನಾಗಿಯೂ, ಶ್ಯಾಮಲವರ್ಣನಾಗಿಯೂ, ಆಜಾನುಬಾಹುವಾಗಿಯೂ ಇಕ್ಷ್ವಾಕು ಕುಲದಲ್ಲಿ ಜನಿಸಿದೆ. ನಿನ್ನ ದರ್ಶನದಿಂದ ನಾವೆಲ್ಲರೂ ಮುಕ್ತರಾದೆವು. ಇನ್ನು ಮೇಲೆ ಧೈರ್ಯವಾಗಿ ನಿನ್ನನುಗ್ರಹದಿಂದ ಕಾಡಿನಲ್ಲಿ ತಪಸ್ಸನ್ನು ಮಾಡಿಕೊಂಡಿರುವೆವು. ಸೀತೆಯೂ ಅನೇಕ ದುಃಖವನ್ನು ಅನುಭವಿಸಿದಳು. ಅದನ್ನು ನೆನೆಸಿಕೊಂಡ ನಮ್ಮ ಹೃದಯವೆಲ್ಲವೂ ತಲ್ಲಣಿಸುವುದು. ಎಂದಿವೇ ಮೊದಲಾಗಿ ಪದೇಪದೇ ಮುನಿಗಳು ಹೇಳುತ್ತಿದ್ದರು.

ಆ ಮಾತಿಗೆ ಸೀತೆಯು ನಕ್ಕು ಆ ಮುನಿಗಳೊಡನೆ "ಎಲೈ ಮುನಿಗಳಿರಾ! ರಾವಣ ಸಂಹಾರವಿಷಯದಲ್ಲಿ ನೀವುಹೇಳಿದಮಾತು ಅಪಹಾಸ್ಯವಾಗಿ ಪರಿಣಮಿಸಿದಂತಿದೆ. ರಾವಣನು ದುಷ್ಟನೆಂಬುದೇನೋ ನಿಜ. ಇವನು ಹತ್ತು ಮುಖಗಳಿಂದಲೂ ಜಗತ್ತನ್ನೂ ಹಿಂಸಿಸುತ್ತಿದ್ದುದೂ ನಿಜ.

ಆದರೂ ಅವನ ಸಂಹಾರವು ಅಷ್ಟು ಪ್ರಶಂಸಾಹವಲ್ಲವೆಂದು ನನಗೆ ತೋರುವುದು'.' ಎಂದು ನುಡಿದಳು. ಆ ಮಾತನ್ನು ಕೇಳಿದೊಡನೆಯೇ ಋಷಿಗಳೆಲ್ಲರೂ ಪರಮಾಶ್ಚರ್ಯ ಭರಿತರಾಗಿ "ಇದೇನೆಂದು'' ಒಬ್ಬರಮುಖ ವನ್ನೊಬ್ಬರು ನೋಡಿಕೊಂಡು "ಈ ಸೀತೆಯು ಅಯೋನಿಜೆಯಾಗಿ ಕಕುತ್ಸ್ಥ ಕುಲವನ್ನಾಶ್ರಯಿಸಿ ನಮ್ಮನ್ನುಹಾಸ್ಯಮಾಡುವಳೋ ಏನೋ ನಮಗೆ ಬೇರೆ ಗೊತ್ತಾಗುವುದಿಲ್ಲ', ಎಂದು ತಮ್ಮತಮ್ಮಲ್ಲಿಯೇ ತಾವೇ ಮಾತನಾಡಿಕೊಂಡರು.

ಮುನಿಗಳಾಡಿದ ನುಡಿಯನ್ನು ಸೀತೆಯು ಕೃತಾಂಜಲಿ ಪುಟಳಾಗಿ ಭಯದೊಡನೆ -"ಎಲೈ ಮುನಿಗಳೆ ನಾನು ಇತರ ಜನಗಳಂತೆ ಸುಳ್ಳಾಡುವಳಲ್ಲ. ನನಗಪ್ಪಣೆಯನ್ನಿತ್ತರೆ ಆ ವಿಷಯವನ್ನು ಸಾಂಗವಾಗಿ ಹೇಳುವೆನು. ಕೇಳಬಹುದು'' ಎಂದು ತಿಳಿಸಿದಳು. ಆಕೆಯನುಡಿಯನ್ನು ಲಾಲಿಸಿ, ಕಿತ್ತುಡಿಗಳು ಪ್ರೀತರಾಗಿ -"ಎಲೌ ತಾಯೇ ಹೇಳಬೇಕು'' ಎಂದು ಕೇಳಿಕೊಂಡರು,

ಆಗ ಸೀತೆಯು ಹೇಳತೊಡಗಿದಳು— ಎಲೈ ಮುನೀಶ್ವರರೆ! ಮದುವೆಯಾಗುವುದಕ್ಕೆ ಮೊದಲು ನಾನು ತಂದೆಯಮನೆಯಲ್ಲಿದ್ದಾಗ ಅತಿಥಿಯೊಬ್ಬನು ಬ್ರಾಹ್ಮಣರೂಪದಿಂದ ಬಂದು "ನಾಲ್ಕುವರ್ಷ ನಾಲ್ಕು ತಿಂಗಳು ನಿನ್ನಮನೆಯಲ್ಲಿ ವಾಸಮಾಡುವೆನು, ನಿನು ಸೇವಾಪರನಾಗಿದ್ದ ಪಕ್ಷದಲ್ಲಿ ದೇವತೆಗಳಿಗೆ ಸಮನಾಗುವೆ'' ಎಂದು ನನ್ನ ತಂದೆಗೆ ತಿಳಿಸಿದನು. ನನ್ನ ತಂದೆಯಾದ ಜನಕನೂ, ಸ್ವಭಾವದಿಂದಲೇ ದೇವದ್ವಿಜ ಭಕ್ತಿ ಯುಳ್ಳವನಾದುದರಿಂದ ಆ ಬ್ರಾಹ್ಮಣನನ್ನು ತನ್ನ ಮನೆಯಲ್ಲಿಯೇ ಇಟ್ಟುಕೊಂಡು ಅವನಿಗೆ ಬೇಕಾದ ಭಕ್ಷ್ಯಗಳನ್ನು ಹಾಕಿಸಿ ಸಂತೋಷಪಡಿಸುತ್ತ ನನ್ನನ್ನು ಆತನ ಸೇವೆಯಲ್ಲಿ ನಿಯೋಜಿಸಿದನು. ನಾನು ರಾತ್ರಿ ಹಗಲೂ ಜಾಗರೂಕಳಾಗಿದ್ದುಕೊಂಡು ಆತನು ಯಾವಾಗ ಏನು ಅನ್ನುತ್ತಿದ್ದನೋ ಅದನ್ನೆಲ್ಲಾ ಜಾಗ್ರತೆಯಿಂದ ನೆರವೇರಿಸುತ್ತಿದ್ದೆನು. ಆ ಮಹಾತ್ಮನು ನಾನಾ ತೀರ್ಥಗಳ ಯಾತ್ರೆಯನ್ನು ಮಾಡಿದವನಾದ.ದರಿಂದ ಅಲ್ಲಲ್ಲಿನ ಕಥೆಗಳನ್ನು ನನಗೆ ತಿಳಸುತ್ತ ನನ್ನ ಸೇವೆಯಿಂದ ತುಷ್ಟನಾಗಿ ಒಳ್ಳೆಯ ಮಾತಿನಿಂದ ನನಗೇನನ್ನು ತಿಳಿಸಿದನೋ ಅದನ್ನು ನಿಮಗೆ ತಿಳಿಸುವೆನು. ಕೇಳಿ!

ಒಂದು ದಿನ ಬೆಳಗಾಗುತಲೆದ್ದು ಶೌಚವನ್ನು ತೀರಿಸಿಕೊಂಡು "ಸೀತೆ" ಎಂದು ಕೂಗಿ ನನ್ನನ್ನು ಬರಮಾಡಿಕೊಂಡು ನನ್ನೊಡನೆ— 'ಎಲೌಸೀತೆ! ನಾನು ಕಂಡುದೊಂದಾಶ್ಚರ್ಯವನ್ನು ಹೇಳುವೆನು ಕೇಳು? ದಧಿಮಂಡೋದಕಾಬ್ಧಿಗಾಚೆ ಸ್ವಾದೂದಕಾಬ್ಧಿಯೊಂದಿರುವುದು. ಅದು ಪುಷ್ಕರದ್ವೀಪವನ್ನು ಸುತ್ತಿಕೊಂಡು ವಲಯಾಕಾರವಾಗಿ ಕಂಗೊಳಿಸುತ್ತಲಿರುವುದು. ಆ ಪುಷ್ಕರದ್ವೀಪದಲ್ಲಿ ಅಗ್ನಿಶಿಖಿಯಂತೆ ಜಾಜ್ವಲ್ಯಮಾನವಾದ ಸಾವಿರಾರು ಎಲೆಗಳುಳ್ಳ ಪುಷ್ಕರವೊಂದು ಪ್ರಕಾಶಿಸುತ್ತಿರುವುದು. ಆ ದ್ವೀಪಕ್ಕೂ ದೇಶಕ್ಕು ಮಧ್ಯೆ ಮಾನಸಪರ್ವತವು ಉತ್ತರಭಾಗದಲ್ಲಿ ಸಾವಿರ ಯೋಜನದವರೆಗೂ ಎಲ್ಲೆಯಾಗಿರುವುದು. ಆ ಪರ್ವತದ ನಾಲ್ಕುಕಡೆಯಲ್ಲಿಯೂ ಇಂದ್ರಾದಿ ದಿಕ್ಪಾಲಕರ ಪುರಗಳು ನೋಟಕರ ಬಗೆಯನ್ನು ಸೆಳೆಯುವಂತಿರುವುವು. ವಿಶ್ವ ಕರ್ಮನು ಆ ಮಹಾ ಪಟ್ಟಣಗಳನ್ನು ಕ್ರೀಡಾರ್ಥವಾಗಿ ತನ್ನ ಕೌಶಲ್ಯವನ್ನು ಅಲ್ಲಿ ವ್ಯಕ್ತಿಗೊಳಿಸಿರುವನು. ಸುಮಾಲಿಯೆಂಬ ಲೋಕವಿದಿತನಾದ ರಾಕ್ಷಸನಿಗೆ ಕೈಕಸಿಯೆಂಬ ಮಗಳೊಬ್ಬಳಿರುವಳು. ಅವಳನ್ನು ವಿಶ್ರವಸ್ಸೆಂಬುವನು ಮದುವೆಯಾಗಿ ಅವಳಲ್ಲಿ ಪುತ್ರರಿಬ್ಬರನ್ನು ಪಡೆದನು. ಅವರಲ್ಲಿ ಒಬ್ಬನಿಗೆ ಸಾವಿರ ಮುಖಗಳು. ಇನ್ನೊಬ್ಬನಿಗೆ ಹತ್ತು ಮುಖಗಳು. ಇವರಿಬ್ಬರೂ ಉದಯಿಸುವಾಗ ದೇವತೆಗಳು ಆಕಾಶದಲ್ಲಿದ್ದುಕೊಂಡು "ಇಗೋ ರಾವಣದ್ವಯವು ಜನಿಸಿದೆ, ಇವರು ಲೋಕವನ್ನು ಹಿಂಸಿಸುವವರಾದುದರಿಂದ ಇವರಿಗೆ ರಾವಣರೆಂಬ ಹೆಸರು ಅನ್ವರ್ಥವಾಗಿದೆ'' ಎಂದು ಹೇಳಿದರು.

ಕಿರಿಯವನಾದ ದಶಕಂಠನು ಶಿತಿಕಂಠನ ಪ್ರಸಾದದಿಂದ ಕುಬೇರನ ರಾಜಧಾನಿಯಾದ ಲಂಕೆಯನ್ನು ವಶಮಾಡಿಕೊಂಡು ಅದರಲ್ಲಿ ವಾಸವಾಗಿರುತ್ತ ಬ್ರಹ್ಮನಿಂದ ವರವನ್ನು ಪಡೆದು ಮೂರುಲೋಕವನ್ನೂ ತೃಣಕ್ಕೆಣೆಯಾಗಿ ತಿಳಿದಿರುವನು. ದೊಡ್ಡವನಾದ ಸಹಸ್ರ ಕಂಠನ ಬಲವಂತೂ ಹೇಳತೀರದು. ಅವನು ಸ್ವಭಾವದಿಂದಲೇ ಬಲಿಷ್ಠನಾಗಿದ್ದುಕೊಂಡು ಆ ಪುಷ್ಕರ ದ್ವೀಪದಲ್ಲಿ ವಾಸವಾಗಿರುವನು. ಸೂರ್ಯಚಂದ್ರರನ್ನು ತಾಳವಾಗಿ ಉಪಯೋಗಿಸುವನು. ಕುಲಾಚಲಗಳನ್ನು ಚಂಡಾಡುವುದಕ್ಕೆ ತರುವನು. ಮಾನಸ ಪರ್ವತದ ಸುತ್ತಲೂ ಇರುವ ಪುರಗಳಲ್ಲಿ ದಿಗೀಶರು

ವಾಸವಾಗಿರಲು ಅವರನ್ನಲ್ಲಿಂದೋಡಿಸಿ ಆ ಪುರಗಳನ್ನು ತನ್ನ ವಶಮಾಡಿಕೊಂಡು ಅದರಲ್ಲಿಯೂ ಸಂದರವಾಗಿದ್ದ ಇಂದ್ರನ ರಾಜಧಾನಿಯನ್ನು ತಾನು ವಾಸಮಾಡುವದಕ್ಕಿಟ್ಟುಕೊಂಡು ಮಿಕ್ಕುದನ್ನು ಮಂತ್ರಿಗಳ ವಶಮಾಡಿರುವನು. ಆ ಪುಷ್ಕರದ್ವೀಪಕ್ಕೆ ರಾಜನಾಗಿದ್ದುಕೊಂಡುದೇವ ತಾಸ್ತ್ರೀಯರನ್ನು ಸೆರೆಹಿಡಿದು ತಂದು ಸ್ವೇಚ್ಛಾ ವಿಹಾರಿ ಯಾಗಿರುವನು. ಲೋಕದಲ್ಲಿರುವ ಸಾರಭೂತವಾದ ಪದಾರ್ಥಗಳನ್ನೇ ತೆಗೆದುಕೊಂಡು ಬಂದು ಅವುಗಳಿಂದ ತನ್ನ ಪಟ್ಟಣಕ್ಕೆ ಸೊಬಗುಂಟಾಗುವಹಾಗೆ ಮಾಡಿರುವನು. ಚಂಪಕ, ಅಶೋಕ, ಮಂದಾರ, ಮೊದಲಾದ ವೃಕ್ಷಗಳು ವಿಶೇಷವಾಗಿರುವುವು. ಎಲ್ಲಾ ಋತುಗಳಲ್ಲಿಯೂ ಪುಷ್ಪಗಳನ್ನು ಬಿಟ್ಟು ಸುಗಂಧವನ್ನು ಬೀರುವ ತರುಗಳು ಅನೇಕವಾಗಿರುವುವು. ಅಲ್ಲಲ್ಲಿರುವ ಜಲಪೂರ್ಣವಾದ ಸರೋವರಗಳಿಂದಲೂ, ಬಗೆಬಗೆಯಾದ ಲತಾವಳಿಗಳಿಂದಲೂ, ನಂದನವನದ ಸೊಬಗಿಗಿಮ್ಮಡಿಯಾಗಿ ಆ ಪುರೋದ್ಯಾನವು ಪ್ರಕಾಶಿಸುವುದು. ಆ ಪಟ್ಟಣದ ಸೊಬಗನ್ನು ನೋಡಿ ದೇವತೆಗಳು ಅಲ್ಲಲ್ಲಿ ವಾಸಮಾಡಲು ತಪಸ್ಸನ್ನು ಮಾಡುತ್ತಿರುವರು. ಹೀಗೆ ರಮ್ಯವಾದಾ ಪೊಳಲಿನಲ್ಲಿ ಜಗತ್ತನ್ನೇ ತನ್ನ ವಶಮಾಡಿಕೊಂಡು ಆ ಸಹಸ್ರಕಂಧರನು ವಾಸವಾಗಿರುತ್ತಾನೆ.

ಇವನು ಇಂದ್ರಾದಿಗಳನ್ನು ಹಿಡಿದುಕೊಂಡು ಬಾಲಕ್ರೀಡೆಯಾಡುತ್ತಲೂ, ಮೇರುಪರ್ವತಗಳನ್ನು ಸಾಸಿವಿಗೆ ಸಮನಾಗಿ ಭಾವಿಸುತ್ತಲೂ ಇರುವನು. ಅವನಿಗೆ ಸಮುದ್ರವು ಗೋಷ್ಪಾದಕ್ಕೆ ಸಮವಾಗಿರುವುದು. ಜಗತ್ತನ್ನು ತೃಣವಾಗಿ ಬಗೆದಿರುವಕಾರಣ ಸಣ್ಣಸಣ್ಣ ದ್ವೀಪವನ್ನು ಕಣ್ಣಿನಿಂದಲೂಕೂಡ ನೋಡುವುದಿಲ್ಲ. ಆ ರಾವಣನು ರೇಗಿದಾಗ ಬೇಗನೆ ಬ್ರಹ್ಮನುಬಂದು «ಅಪ್ಪ!!ವತ್ಸ" ಎಂದು ಬೇಡಿಕೊಂಡು ಅವನನ್ನುತಡೆಯುವನು. ಇವನು ಲೋಕವನ್ನು ನುಂಗಬೇಕೆಂದರೆಕ್ಷಣಮಾತ್ರದಲ್ಲಿನುಂಗುವನು. ಈ ಕ್ರೂರರಾಕ್ಷಸನು ಪುಷ್ಕರ ದ್ವೀಪದಲ್ಲಿಯೂ, ಇವನ ತಮ್ಮನು ಲಂಕೆಯಲ್ಲಿಯೂ ಇದ್ದುಕೊಂಡಿದಾರೆ." ಎಂದಿವೇಮೊದಲಾದ ರಹಸ್ಯವನ್ನು ಹೇಳಿ ಆ ಬ್ರಾಹ್ಮಣನು ನಾಲ್ಕು ತಿಂಗಳವರೆಗೂ ಅಲ್ಲಿಯೇ

ವಾಸಮಾಡಿ ತಂದೆಗೂ ನನಗೂ ವಿಶೇಷವಾಗಿ ಆಶೀರ್ವಾದಮಾಡಿ ತೀರ್ಥ ಯಾತ್ರೆಗೆ ತೆರಳಿದನು.

ಹದಿನೇಳನೆಯ ಅಧ್ಯಾಯವು ಮುಗಿದುದು.

—o—

## ಹದಿನೆಂಟನೆಯ ಅಧ್ಯಾಯವು.

ಎಲೈ ಮುನಿಗಳೇ ಸಾವಿರ ತಲೆಗಳುಳ್ಳ ರಾವಣನು ಈ ಪ್ರಕಾರ ಶೂರನಾಗಿದ್ದಾನೆಂದು ಹೇಳಿದ ಆ ಬ್ರಾಹ್ಮಣನ ಮಾತನ್ನು ಕೇಳಿ ನನಗೆ ಬಹಳಆಶ್ಚರ್ಯವುಂಟಾಯಿತು. ಆವಿಷಯವನ್ನಿದುವರೆಗೂ ಜಾಗರೂಕಳಾಗಿಯೇ ಇದ್ದುಕೊಂಡು ಮನಸ್ಸಿನಲ್ಲಿಟ್ಟಿದ್ದೆನು. ನನ್ನ ಪತಿಯಾದ ಶ್ರೀರಾಮನು ತನ್ನ ಬಾಹುಬಲದಿಂದ ಆ ದಶಾಸ್ಯನನ್ನು ಕೊಂದು ನನಗೋಸ್ಕರ ಲಂಕೆಯನ್ನು ಅಗ್ನಿವಶಮಾಡಿ, ಸೇತುವೆಯನ್ನು ಹಾಕಿ, ಸಮುದ್ರವನ್ನು ಬಂಧಿಸಿ ಹನುಮಂತ ಸುಗ್ರೀವರ ಸಹಾಯದಿಂದ ಈ ಲೋಕೋತ್ತರವಾದ ಕಾರ್ಯವನ್ನು ನೆರವೇರಿಸಿದನು. ಆದರೂ ನಾನದನ್ನು ಆಶ್ಚರ್ಯವೆಂದು ನೆನೆಯಲಾರೆನು. ನನ್ನ ಪತಿಯೇ ಸಾವಿರ ತಲೆಯುಳ್ಳ ಆ ರಾವಣನನ್ನು ಕೊಂದರೆ ಆಗ ಲೋಕದಲ್ಲಿ ಶಾಶ್ವತವಾದ ಯಶಸ್ಸುಂಟಾಗುವುದು, ಆಗ ಅವನನ್ನು ಶ್ಲಾಘಿಸಬಹುದು. ಆದುದರಿಂದ ನಾನು ನಕ್ಕೆನು. ಎಲೈ ಮುನಿಗಳಿರಾ ! ನೀವದನ್ನು ಕ್ಷಮಿಸಬೇಕೆಂದು ಕೇಳಿಕೊಂಡಳು. ಅದನ್ನು ಕೇಳಿ ಮುನಿಗಳೆಲ್ಲರೂ“ಒಳ್ಳೆಯದು ! ಒಳ್ಳೆಯದು!! ಎಂದು ಹೇಳಿ ಲೋಕಹಿತ ಕಾರಿಣಿಯಾದ ಸೀತೆಯನ್ನು ವಿಶೇಷವಾಗಿ ಸ್ತುತಿಸಿದರು. ರಾಮನು ಸೀತೆಯ ಶೌರ್ಯೋತ್ತೇಜನವಾದ ವಾಕ್ಯವನ್ನು ಕೇಳಿ, ಸಿಂಹನಾದವನ್ನು ಮಾಡಿ “ಎಲೈ ಮುನಿಗಳಿರಾ ! ಆ ಸಹಸ್ರಕಂಧರನನ್ನು ಗೆಲ್ಲಲು ಎಲ್ಲರೂ ಈಗಲೇ ತೆರಳಬೇಕು. ಎಲೈ ಭರತಶತ್ರುಘ್ನಾದಿಗಳೇ ! ನೀವೂ ಈಗಲೇ ಸೇನಾ ಸಮೇತರಾಗಿ ನಡೆಯಿರಿ? ಎಲೈ ಸುಗ್ರೀವ ಜಾಂಬವಾದಿಗಳೇ ನೀವೂ ಸೈನ್ಯದೊಡನೆ ಸಿದ್ಧವಾಗಿ ಯುದ್ಧಕ್ಕೆ ಹೊರಡಿ ? ' ' ಎಂದು ಎಲ್ಲರಿಗೂ ಅಪ್ಪಣೆಯನ್ನಿತ್ತು, ಬಳಿಕ ಆಜ್ಞಾಧಾರಕವಾಗಿದ್ದ ಪುಷ್ಪಕವನ್ನು ನೆನೆಯಲು, ಅದು ಕೂಡಲೇ ರಾಮನ

ಹತ್ತಿರಕ್ಕೆ ಬಂದಿತು. ಅದನ್ನು ರಾಮಲಕ್ಷ್ಮಣ ಭರತ ಶತ್ರುಘ್ನರೇ ಮುಂತಾದವರೆಲ್ಲರೂ ಹತ್ತಿ ಹೊರಟರು. ಸುಗ್ರೀವ ಪ್ರಮುಖರಾದ ವಾನರರೂ, ವಿಭೀಷಣರೂ ಹೊರಟರು. ಸೀತೆಯು ಪತಿ ಕಾರ್ಯಕ್ಕಾಗಿಪುಷ್ಪಕದಲ್ಲಿಯೆ ತೆರಳಿದಳು. ಸುಮಂತ್ರನೂ ಪಯಣವಮಾಡಿದನು. ಬಂದಿದ್ದ ಮುನಿಗಳೂ ಆ ಪುಷ್ಪಕದಲ್ಲಿಯೇ ಕುಳಿತು ಪಯಣವಮಾಡಿದರು. ಅನೇಕರು ಕೈಗಳಲ್ಲಿ ಆಯುಧಗಳನ್ನು ಹಿಡಿದಿದ್ದರು. ಅವರ ಸಿಂಹನಾದವು ದಿಕ್ತಟಗಳನ್ನು ಭೇದಿಸುವಂತಿತ್ತು. ಸೈನ್ಯ ಭಾರಕ್ಕೆ ಭೂಮಿಯಲ್ಲವ್ರೂಗಡಗಡನೆ ನಡುಗಿತು. ಸೇನೆಗಳ ಧೂಳುಗಳಿಂದ ಹೊಳೆಗಳು ಬೆಚ್ಚೆಂದು ಬತ್ತಿ ಹೋದುವು. ಸುಗ್ರೀವ ಹನುಮಂತ ಮುಂತಾದವರು, ಲೋಕವನ್ನೇ ನುಂಗುವಂತೆ ಸೇನಾ ಸಮೇತರಾಗಿ ನಡೆದರು. ಸೀತಾ ಸಮೇತನಾಗಿ ಪುಷ್ಪಕದಲ್ಲಿದ್ದ ಶ್ರೀ ರಾಮನನ್ನು ಸೈನಿಕರು ಪ್ರೋತ್ಸಾಹಿಸುತ್ತ ವಾಯುವೇಗ ಮನೋವೇಗಗಳ ಗತಿಗಳನ್ನು ಮೀರಿದ ಆ ಪುಷ್ಪಕದಿಂದ ಮಾನಸೋತ್ತರ ಶೈಲದ ಬಳಿಯಲ್ಲಿರುವ ಶ್ವೇತ ದ್ವೀಪಕ್ಕೆ ಜಾಗ್ರತೆಯಿಂದ ಬಂದು ಸೇರಿದರು. ಆ ದ್ವೀಪದ ಸಂಪತ್ತಿನಿಂದೆಲ್ಲರೂ ವಿಸ್ಮಿತರಾಗಿ ಸುಮ್ಮನೆ ಕ್ಷಣಕಾಲ ನಿಂತರು. ಶ್ರೀ ರಾಮನು ಸೈನ್ಯದೊಡನೆ ಕೂಡಿ ಸಿಂಹನಾದವನ್ನು ಮಾಡಲು ಅದನ್ನು ಕೇಳಿ ಸಹಸ್ರವದನನಾದ ರಾವಣನು ‘ಇದೇನು ಬಂದಿತು’ ಎಂದು ದಿಗ್ಗನೆದ್ದು ಪತ್ತನದಿಂದೀಚೆಗೆ ಬಂದು, ಆಶಬ್ದಕ್ಕೆ ರಾಕ್ಷಸರೆಲ್ಲರೂ ಕುಧ್ಧರಾಗಿ ಸಾಹಾಯಕಗಳೊಡನೆ ಓಡಿಬರುತ್ತಿದ್ದರು. ‘ಓಹೋ ಎಲ್ಲಿಯೋ ಬಲವಾದ ಧ್ವನಿಯುಂಟಾಗುತ್ತದೆ. ಎಲ್ಲರೂ ಚೆನ್ನಾಗಿ ನಾನಾಕಡೆಯಲ್ಲಿಯೂ ಹುಡುಕಿನೋಡಿ’ ಎಂದು ಹೇಳಿ ರಾಕ್ಷಸೇಂದ್ರನು ಹಲ್ಲು ಮುಡಿಯನ್ನು ಕಡಿಯುತ್ತ ಪಟ್ಟಣವನ್ನು ಬಿಟ್ಟು ಹೊರಕ್ಕೆ ಶತಯೋಜನ ವಿಸ್ತೀರ್ಣವಾದ ರಥದಲ್ಲಿ ಅನೇಕ ಆಯುಧಗಳನ್ನಿಟ್ಟುಕೊಂಡು ಬಂದು ನೋಡಿ, ಶ್ರೀ ರಾಮನ ಅದ್ಭುತವಾದ ಸೇನೆಯನ್ನು ಕಂಡು ಕಣ್ಣನ್ನು ಕೆಂಪಗೆ ಮಾಡಿಕೊಂಡು ‘ಬಂದಿರುವರು ಯಾರು’ ಎಂದು ಒಂದು ಸಲ ಸಿಂಹನಾದವನ್ನು ಮಾಡಿದನು; ಆ ನಾದಕ್ಕೇ ದೂರದಲ್ಲಿದ್ದ ಕಪಿಸೇನೆಗಳೆಲ್ಲವೂ ತಲ್ಲಣಿಸಿದುವು. ಬ್ರಹ್ಮಾಂಡವೆಲ್ಲವೂಬಡೆದು ಹೋದಂತಾಯಿತು. ಆ ಸಹಸ್ರಕಂಠನು “ಅಯ್ಯೋ! ನನಗೂ ಶತ್ರುವಿದ್ದಾನೆಂಬ ಅಪ

ಯಶಸ್ಸು ಬಂದೊದಗಿತಲ್ಲ! ಇಂದ್ರಾದಿ ದಿಕ್ಪಾಲಕರನ್ನೆಲ್ಲಾ ಒಂದೇಸಲ ಸದೆದುಬಿಡುವೆನು. ಲೋಕವನ್ನೂ ನಿರ್ಮೂಲ ಮಾಡುವೆನು. ಬೆಟ್ಟಗಳನ್ನು ಹಿಟ್ಟುಮಾಡಿ ದೇವಲೋಕದಲ್ಲಿ ಮನುಷ್ಯರು ವಾಸಮಾಡುವಂತೆಯೂ ಮನುಷ್ಯಲೋಕದಲ್ಲಿ ದೇವತೆಗಳು ಇರುವಹಾಗೂ ಮಾಡದೆ ಬಿಡುವುದಿಲ್ಲ; ಭೂಮಿಯನ್ನೆತ್ತಿ ಅದನ್ನು ಉಗುರಿನಿಂದಲೇ ಪುಡಿಮಾಡಿಹಾಕುವೆನು. ನಾನು ರಾಕ್ಷಸರನ್ನು ಹೊರತು ಭೂಮಿಯಮೇಲೆ ಇನ್ನಾರೂ ನಿಲ್ಲದಂತೆ ಮಾಡುವೆನು ;'' ಎಂದು ಕೂಗುತ್ತ ಮುಂದುಮುಂದಕ್ಕೆ ಬರುತ್ತಿದ್ದನು. ರಾವಣನ ಆಜ್ಞಾನುಸಾರ ಕೋಟಿ ಸಂಖ್ಯೆಗಿಂತಲೂ ಹೆಚ್ಚಾಗಿ ಸೇನಾಧ್ಯಕ್ಷರೂ, ರಾಕ್ಷಸೇಂದ್ರರೂ, ರಾವಣ ಪುತ್ರರೇ ಮೊದಲಾದ ರಾಕ್ಷಸ ಭಟರೆಲ್ಲರೂ ಬಂದು ಯುದ್ಧೋದ್ಯತರಾಗಿದ್ದರು.

ರಾವಣನ ಔರಸ ಪುತ್ರರನೇಕರು ಯುದ್ಧದಲ್ಲಿ ಶ್ರೀರಾಮನನ್ನು ಮುತ್ತಬೇಕೆಂದು ಧನುರ್ಧಾರಿಗಳಾಗಿ ಮುಂದುಮುಂದಕ್ಕೆ ಬರುತ್ತ "ಇಲ್ಲಿಗೆ ಬಂದಿರುವನಾರು ? ಏಕೆ ? ಬಂದಿರುವನು ? ಈ ದ್ವೀಪದ ಸಂಪತ್ತನ್ನು ನೋಡಿಕೊಂಡು ಹಿಂದಿರುಗುವನೋ ? ಈ ಕಪಿಸೈನ್ಯಗಳೇಕೆ? ಬಂದಿವೆ? ಎಂದು ಚಿಂತಿಸುತ್ತಿರಲಾಗಿ ಆಗ ಆಕಾಶದಲ್ಲಿ "ಎಲೈ ರಾವಣನೆ ! ಶ್ರೀರಾಮನು ಇಲ್ಲಿಗೆ ಬಂದಿರುವನು. ಆವನು ಅಯೋಧ್ಯೆಯ. ರಾಜನಾದ ದಶರಥನ ಮಗನು. ಧರ್ಮ ಸ್ವರೂಪವಾಗಿ ಜನಿಸಿರುವನು. ಇವನೇ ಲಂಕೆಯಲ್ಲಿದ್ದ ನಿನ್ನ ತಮ್ಮನನ್ನು ಸಮೂಲವಾಗಿ ಹಾಳುಮಾಡಿರುವನು. ಈಗ ನಿನ್ನಸಂಹಾರಾರ್ಥವಾಗಿ ಇಲ್ಲಿಗೆ ಬಂದಿದ್ದಾನೆ. ಶ್ರೀರಾಮನ ತಮ್ಮಂದಿರಿಂದಲೂ ವಾನರ ಋಕ್ಷ ಮೊದಲಾದ ಸೈನ್ಯಗಳಿಂದಲೂ ಕೂಡಿಬಂದಿರುವನು. ಎಂದು ಅಶರೀರವಾಣಿಯು ನುಡಿದು ಮರೆಯಾಯಿತು ರಾವಣನು ಅಮಾನುಷವಾದ ವಾಕ್ಯವನ್ನು ಕೇಳಿ ಮತ್ತಷ್ಟು ಸಿಟ್ಟಾಗಿ ಕಣ್ಣುಗಳಲ್ಲಿ ಕಿಡಿಗಳನ್ನುಗುಳುತ್ತ ಪ್ರಪಂಚವನ್ನೆಲ್ಲ ಗೆದ್ದಿರುವ ನನ್ನನ್ನು ಗೆಲ್ಲಲು ಈಮನುಷ್ಯ ಮಾತ್ರದವನು ಬಂದಿರುವನಂತೆ! ಇವನನ್ನು ಗೆಲ್ಲಿರಿ?ಗೆಲ್ಲಿರಿ!! ಎಂದು ಅಂದು ಬೆಟ್ಟಕ್ಕೆ ಸಮನಾದ ಬಾಣ ಜಾಲಗಳನ್ನು ಶತ್ರುಗಳಮೇಲೆ ಸುರಿಸಿದನು. ರಾಕ್ಷಸನ ಸೇನೆಯು ಕಪಿಗಳನ್ನು ಬಹಳವಾಗಿ ಪೀಡಿಸಿತು. ಅಲ್ಲದೆ ಸೈನಿಕರೆಲ್ಲರೂ ಬಹಳ ಸಾಹಸದಿಂದ ಶತ್ರುಗಳಮೇಲೆ ನುಗ್ಗಿ

ಕಾದಿದರು. ಉಭಯಸೈನ್ಯಗಳಲ್ಲಿಯೂ ವೀರಾವೇಶದಿಂದ ಹೋರಾಡಿ ಕಪಿವೀರರೂ, ರಾಕ್ಷಸವೀರರೂ, ಅಡಿಗಡಿಗೆ ಮೂರ್ಛೆಹೋಗುತ್ತಲೂ, ಸ್ವಲ್ಪ ಚೇತರಿಸಿಕೊಂಡು ಕಾದುತ್ತಲೂ, ತಮ್ಮತಮ್ಮ ಪರಾಕ್ರಮಗಳನ್ನೆಲ್ಲಾ ವ್ಯಯ ಮಾಡಿದರು. ಯಾರಿಗೆ ಜಯವಾಗುವುದೋ ಎಂಬುದನ್ನು ಗೊತ್ತು ಮಾಡಲು ಸಾಧ್ಯವಾಗಲಿಲ್ಲ. ರಾಮ ಲಕ್ಷ್ಮಣ ಭರತ ಶತ್ರುಘ್ನ ಹನುಮಂತ ಮೊದಲಾದವರೂ ಘೋರವಾಗಿ ಕಾದಾಡುತ್ತಿದ್ದ ರಾಕ್ಷಸ ಸೇನೆಯಲ್ಲಿ ಎಷ್ಟೋಮಂದಿ ಶೂರರನ್ನು ಮಡುಹಿಡಿದರು. ಈ ಯುದ್ಧವನ್ನು ನೋಡುವುದಕ್ಕೂ ಕೂಡ ಸಾಧ್ಯವಾಗಲಿಲ್ಲ. ರಾವಣನು ತನ್ನ ಕಡೆಯದಳದಲ್ಲಿ ಮಡಿದ ಅನೇಕ ವೀರರನ್ನು ನೋಡಿ ಕ್ರುದ್ಧನಾಗಿ ಹಾಗೆಯೇ ನರಕೀಟಗಳನ್ನು ನಾನು ಗೆದ್ದರೆ ನನಗೆ ಬರುವ ಶ್ಲಾಘನೆ ಏನು? ಎಂದು ನಗುತ್ತ ರಾಮನ ಸೈನ್ಯವನ್ನು ಹೊಕ್ಕನು. ಭಯಂಕರಾಕಾರನಾದ ರಾವಣನನ್ನು ನೋಡಿದ ಮಾತ್ರಕ್ಕೆ ಕಪಿಗಳೆಲ್ಲರೂ ಹೀನ ಬಲರಾಗಿ ತಮ್ಮ ಕೈದುಗಳನ್ನು ಕೆಳಕ್ಕೆಹಾಕಿ ಸ್ತಬ್ಧವಾಗಿ ನಿಂತರು. ಈ ಕಪಿಗಳನ್ನು ಕೊಲ್ಲಲು ಉಪಕ್ರಮಿಸಿನ ಆ ಕ್ರೂರ ರಕ್ಕಸನಿಗೆ "ಅಯ್ಯೋ ? ಈ ಕ್ಷುದ್ರಕಪಿಗಳು ಪ್ರಾಣವನ್ನು ಕಳೆದುಕೊಳ್ಳುವುದಕ್ಕೋಸ್ಕರ ಈ ದ್ವೀಪಕ್ಕೆ ಬಂದಿರುವುವು. ಈ ಕ್ಷುದ್ರ ಪ್ರಾಣಿಗಳನ್ನು ಕೊಲ್ಲುವುದರಿಂದ ಗೌರವಕ್ಕೆ ನ್ಯೂನತೆಯೇ ಹೊರತು ಮತ್ತೇನೂ ಇಲ್ಲ. ಎಂದು ತೋರಿತು. ಆಗ ರಾಕ್ಷಸನು ವಾಯವ್ಯಾಸ್ತ್ರವನ್ನು ಕೊಟ್ಟು, ಆ ಕಪಿಗಳಾವಾವ ಸ್ಥಳದಿಂದ ಬಂದಿದ್ದುವೋ ಅಲ್ಲಲ್ಲಿಗೆ ಹೋಗುವಂತೆ ಮಾಡಿದನು. ಆ ಕಪಿಗಳೆಲ್ಲವೂ ಕುತ್ತಿಗೆಹಿಡಿದು ತಳ್ಳಿಸಿಕೊಂಡವುಗಳಂತೆ ಆ ವಾಯವ್ಯಾಸ್ತ್ರದ ಹೊಡೆತಕ್ಕೆ ಹಾರಿಹೋಗಿ ತಮ್ಮ ನೆಲೆಯನ್ನು ಸೇರಿದುವು.

ರಾಮಲಕ್ಷ್ಮಣಾದಿಗಳಿದನ್ನ ನೋಡಿ ಮನಸ್ಸಿನಲ್ಲಿ ಆಶ್ಚರ್ಯವನ್ನು ಹೊಂದಿದರು. ಆ ಅಸ್ತ್ರವು ಸೀತಾಸಮೇತನಾದ ರಾಮನನ್ನು ಮಾತ್ರ ಆಚೆಗೆ ಹೊರಡಿಸಲಿಲ್ಲ. ಮಹರ್ಷಿಗಳೆಲ್ಲರೂ ಈಯದ್ಭುತವನ್ನು ನೋಡಿ ಹೃದಯದಲ್ಲಿ ಕಳವಳಗೊಂಡರು, ಸೀತೆಯು ಮಾತ್ರ ಮುಗುಳುನಗೆಯಿಂದ ಕೂಡಿ ಅಲ್ಲಿಯೇ ಇದ್ದಳು. ಈ ಯುದ್ಧವನ್ನು ನೋಡಲಾರದೆ ರಾವಣನಿಗೆ ಹೆದರಿ ಪ್ರಚ್ಛನ್ನರಾಗಿ ನಿಂತಿದ್ದ ದೇವತೆಗಳು "ಈ ಆಶ್ಚರ್ಯವನ್ನು

ನೋಡಿದಿರಾ !" ಎಂದು ಪರಸ್ಪರವಾಗಿ ಅಂದುಕೊಂಡರು. ತರುವಾಯ ರಾಮನು ರಾಕ್ಷಸರಮೇಲೆ ಶರವರ್ಷವನ್ನು ಕರೆದನು. ಆಗ ದೇವತೆಗಳಿದನ್ನು ನೋಡಿ "ಗರುಡಾರೂಢನಾದ ವಿಷ್ಣುವು ರಾವಣನನ್ನು ಕೊಲ್ಲಲು ಬಂದಿರುವನು. ಆ ಸನಾತನನಾದ ವಿಷ್ಣುವು ಲೀಲೆಯಿಂದಾರಾವಣನನ್ನು ಸಮುದ್ರದಲ್ಲೆಸೆದಿರುವನು. ಆ ವಿಷ್ಣುವೇ ದಶರಥನ ಹೊಟ್ಟೆಯಲ್ಲಿ ಶ್ರೀರಾಮನಾಗಿ ಜನಿಸಿರುವನು. ಅವನು ನಮ್ಮ ಪುಣ್ಯದಿಂದ ಆ ರಾವಣನನ್ನು ಗೆಲ್ಲಲಿ" ಎಂದು ಎಲ್ಲರೂ ಬಯಸುತ್ತಿದ್ದರು. ರಾಕ್ಷಸನು ರಾಮನನ್ನು ಕ್ಷುದ್ರನೆಂದು ತಿಳಿದು ಸಿಂಹನಾದವನ್ನು ಮಾಡಿದನು; ಅದನ್ನುಕೇಳಿ ವಿಸ್ಮಿತನಾಗಿ ರಾಮನು ರಾವಣನನ್ನು ಸಂಹರಿಸಲು ಮೊದಲಿದ್ದ ಸಿಟ್ಟನ್ನು ಇಮ್ಮಡಿಮಾಡಿದನು.

ಆದರೂರಾಮನಿಗೆ ಶತಕಂಠನನ್ನುಕೊಲ್ಲುವುದು ಅಸಾಧ್ಯವೆಂದುತೋರಿತು. ರಾಮನೂತನ್ನಸಾಹಸವನ್ನೆಲ್ಲಾ ವ್ಯಯಮಾಡಿದನು. ಯಾವುದೂ ಉಪಯೋಗಕ್ಕೆ ಬರಲಿಲ್ಲ. ಇದನ್ನುನೋಡಿ ಸೀತೆಯು ಇನ್ನು ಸುಮ್ಮನಿರುವುದು ಸರಿಯಲ್ಲವೆಂದು ನೆನೆದು ಮಹಾ ವಿಕಟರೂಪಿಣಿಯಾಗಿ ಖಡ್ಗವನ್ನುಧರಿಸಿ ಥಟ್ಟನೆ ಹಾರಿಹೋಗಿ ರಾವಣನ ಸಹಸ್ರತಲೆಗಳನ್ನೂ ಒಂದೇ ಏಟಿಗೆ ಕತ್ತರಿಸಿತಂದು ಯುದ್ಧರಂಗದಲ್ಲಿ ಕಂತುಕ ಕ್ರೀಡೆಯನ್ನು ಮಾಡುತ್ತಿದ್ದಳು. ಪಕ್ಕದಲ್ಲಿ ನೋಡಿದರೆ ರಾಮನಿಗೆ ಸೀತೆಯು ಕಾಣಿಸಲೇ ಇಲ್ಲ. ಆಕೆಯು ಮಹಾಕಾಳಿಯ ಅವತಾರವನ್ನು ತಾಳಿದ್ದಳು. ಮಾತೃಕೆಯರಿಂದಕೂಡಿ ರಣರಂಗದಲ್ಲಿ ರಾವಣನ ತಲೆಗಳನ್ನು ಹಿಡಿದು ಕ್ರೀಡಿಸುತ್ತಿದ್ದ ದೇವಿಯನ್ನುಕಂಡು ಭಯಚಕಿತನಾಗಿ ವಿಸ್ಮಯಪಡುತ್ತಾ ಶ್ರೀರಾಮನು ಆ ದೇವಿಯನ್ನು ಸಹಸ್ರ ನಾಮಗಳಿಂದ ಸ್ತುತಿಸಿದನು. ಸಹಸ್ರಕಂಠ ರಾವಣನ ಸಂಹಾರದಿಂದಸುರರೆಲ್ಲರೂ ಸಂತೋಷಸಮುದ್ರದಲ್ಲಿ ಮಿಂದರು. ಲೋಕಗಳೆಲ್ಲವೂ ಸಿರುಪಾಧಿಕವಾಗಿ ಲೇಸನ್ನು ಪಡೆದುವು.

ಹೀಗೆ ರಾಮನು ದೇವಿಯನ್ನು ಸ್ತುತಿಸಿದ ತರುವಾಯ— "ಎಲೌ ದೇವಿಯೆ ! ನಿನ್ನರೂಪವನ್ನು ನೋಡಿ ನನಗೆ ಬಹಳ ಭಯವಾಗಿದೆ. ನೀನಾರು ? ನಿನ್ನ ಮುನ್ನಿನರೂಪವನ್ನು ತೋರಿಸು ? ಎಂದು ಬೇಡಿಕೊಂ

ಡನು. ಸೀತೆಯು ತನ್ನ ಪೂರ್ವರೂಪವನ್ನೇ ಹೊಂದಿದಳು. ತರುವಾಯ ಎಲೈರಾಮನೆ ರಾವಣನ ವಧೆಗೋಸ್ಕರವಾಗಿ ನಾನು ಈ ರೂಪವನ್ನು ಹೊಂದಿದೆನು. ಇದೇ ರೂಪದಿಂದಲೇ ಮಾನಸೋತ್ತರ ದೇಶದಲ್ಲಿ ವಾಸಿಸುವೆನು. ನೀನು ಪ್ರಕೃತಿಯಿಂದ ನೀಲರೂಪನಾಗಿರುವೆ. ಅಲ್ಲಿ ನೀಲ ಲೋಹಿತ ರೂಪನಾದ ನಿನ್ನೊಡನೆ ವಾಸಮಾಡುವೆನು. ಎಲೈರಾಮನೇ ಬೇಕಾದ ವರಗಳನ್ನು ಬೇಡಿಕೊ? ಕೊಡುವೆನು.'' ಎಂದು ಸೀತೆಯು ಹೇಳಿದಳು. ಆ ಮಾತನ್ನು ಕೇಳಿ ರಾಮನು—ಎಲೌ ಸೀತೆಯೆ! ನೀನು ಪರಮೇಶ್ವರ ರೂಪವನ್ನು ತೋರಿಸಿದೆಯಷ್ಟೆ? ಆ ರೂಪದಿಂದಲೇ ನೀನು ನನ್ನ ಹೃದಯವನ್ನು ಅಗಲದಿರಬೇಕು. ನನ್ನ ತಮ್ಮಂದಿರೂ ವಿಭೀಷಣನೂ ಯುದ್ಧದಲ್ಲಿ ಮಡಿದವರೆಲ್ಲರೂ ನನ್ನೊಡನೆ ಮೊದಲಿನಂತೆ ಜೀವಿಸಿಕೊಂಡಿರಬೇಕು, ಈ ಪ್ರಕಾರವಾದ ವರಗಳನ್ನು ಕೊಡು?" ಎಂದು ಕೇಳಿಕೊಂಡನು. ಆಗ ಆಕಾಶದಲ್ಲಿ ದೇವತೆಗಳು ದುಂದುಭಿ ಶಬ್ದವನ್ನು ಮಾಡಿದರು. ಸೀತಾರಾಮರಮೇಲೆ ಹೂವಿನಮಳೆಯು ಸುರಿಯಿತು. ರಾಮನುಕೇಳಿದ ವರಕ್ಕೆ ಸೀತೆಯು "ತಥಾಸ್ತು'' ಎಂದಳು.

ಶ್ರೀರಾಮನು ಸೀತಾಸಮೇತನಾಗಿ ಪುಷ್ಪಕವನ್ನೇರಿ ಸಮಸ್ತಸೈನ್ಯಗಳೊಡನೆ ತನ್ನ ರಾಜಧಾನಿಯಾದ ಅಯೋಧ್ಯೆಗೆ ಬಂದು ಸೇರಿದನು. ಶ್ರೀರಾಮನು ಋಷಿಗಳೊಡನೆಯೂ ಸೈನ್ಯದೊಡನೆಅಯೋಧ್ಯೆಗೆ ಬಂದುದನ್ನು ನೋಡಿ, ಅವರನ್ನು ಎದುರುಗೊಳ್ಳಲು ಭರತಾದಿಗಳು ಪಟ್ಟಣಿಗರೊಡನೆ ಸ್ವಲ್ಪದೂರಬಂದು ಇದಿರ್ಗೊಂಡರು. ಹಾಗೆಯೇ ಅಣ್ಣನಿಗೆ ನಮಸ್ಕಾರ ಮಾಡಿ ಆನಂದಾಶ್ರುವನ್ನು ಸುರಿಸಿದರು. ತರುವಾಯ ಶ್ರೀರಾಮನುಅಯೋಧ್ಯಾಧಿಪತ್ಯವನ್ನುಕೈಕೊಂಡು ಕಪಿಗಳನ್ನು ಅವರವರಸ್ಥಾನಕ್ಕೆ ಕಳುಹಿಸಿ ತಮ್ಮಂದರಿಗೆ ಅಲ್ಲಿ ನಡೆದಸಂಗತಿಯನ್ನು ಸವಿಸ್ತಾರವಾಗಿ ತಿಳಿಸಿದನು.

ಆಗ ಸೀತೆಯನ್ನು ಸಾಕ್ಷಾತ್ಪ್ರಕೃತಿಯೆಂದು ತಿಳಿದು ಎಲ್ಲರೂ ಸಂತೋಷಿಸಿದರು. ಮುನಿಗಳು ಸೀತಾರಾಮರನ್ನು ಆಶೀರ್ವಾದದಿಂದ ಅಭಿನಮಿಸಿದರು. ಶ್ರೀರಾಮನು ತಮ್ಮಂದಿರೊಡನೆಯೂ ಸೀತೆಯೊಡ

ನೆಯೂ ಕೂಡಿ ರಾಜ್ಯವನ್ನುನಿಷ್ಕಂಟಕವಾಗಿ ಕಾಪಾಡುತ್ತಿದ್ದನು. ವಿಶೇಷ ವಾಗಿಯಜ್ಞಯಾಗಾದಿಗಳಿಂದ ದೇವತೆಗಳನ್ನೂ ಬ್ರಾಹ್ಮಣರನ್ನೂ ಮೆಚ್ಚಿ ಸುತ್ತಿದ್ದನು. ದೇವತೆಗಳೆಲ್ಲರೂ ಶತ್ರುನಾಶನದಿಂದ ಶ್ರೀ ರಾಮನಿಗೆರಗಿ ತಮ್ಮ ಸ್ಥಾನಕ್ಕೆತೆರಳಿದರು.

ಎಲೈ ಭರದ್ವಾಜನೆ ! ಈ ರಾಮಚರಿತವನ್ನು ನಿನಗೆಸಾಂಗವಾಗಿ ತಿಳಿಸಿದೆನು. ಇದು ಪೂರ್ವದಲ್ಲಿ ಸತ್ಯಲೋಕದೊಳಗೆ ಬಹು ಗೋಪ್ಯವಾಗಿದ್ದಿತು.ಇದರೊಳಗೆ ಒಂದು ಶ್ಲೋಕವನ್ನಾಗಲಿ ಅದರ ಅರ್ಥವನ್ನಾಗಲಿ ಯಾರು ಓದುವರೋ ಅಥವಾ ಕೇಳುವಲ್ಲಿ ಅವರು ಮುಕ್ತರಾಗುವರು. ಇಪ್ಪತ್ತೈದುಸಾವಿರ ರಾಮಾಯಣಗಳನ್ನೋದಿದರೆ ಯಾವ ಫಲವು ಬರುವುದೋ ಅದೇ ಫಲವು ಈ ಅದ್ಭುತರಾಮಾಯಣದ ಒಂದು ಶ್ಲೋಕದ ಶ್ರವಣ ಮಾತ್ರದಿಂದಲೇ ಲಭಿಸುವುದು. ಇದು ವೇದ ಗಳಿಗಿಂತಲೂ ಶ್ರೇಷ್ಠವಾದುದು. ದೇವ ನದೀತಟದಲ್ಲಿ ನಾನಿದನ್ನು ಇಂದ್ರನಿಗೆ ತಿಳಿಸಿದ್ದೆನು.ಅದನ್ನೇ ನಿನಗೂ ಉಪದೇಶಮಾಡಿರುವೆನು. ಈರಾಮಾಯಣವೆಂಬ ಮಹಾ ರತ್ನವು ಬ್ರಹ್ಮನಹೃದಯ ಸಾಗರದಲ್ಲೊಗೆಯಿತು. ನಾರದನ ಮೂಲಕ ಇದು ನನ್ನ ಹೃದಯದಲ್ಲಿ ಪ್ರತಿಫಲಿಸಿತು. ರಾಮಾಯಣಗಳಲ್ಲಿ ಕೆಲವು ಭೂಲೋಕದಲ್ಲಿಯೂ ಕೆಲವು ನಾಗಲೋಕದಲ್ಲಿಯೂ ಇರುವುವು. ಬ್ರಹ್ಮನೂ, ನಾರದನೂ ನಾನೂ ಅಂತು ಮೂವರೇ ಈ ರಾಮಾಯಣದ ಪಾರವನ್ನು ಕಂಡಿರುವೆವು. ಇನ್ನಾರಿಗೂ ತಿಳಿದಿಲ್ಲ. ನೀನಿದನ್ನು ತಿಳಿದು ನಿಶ್ಚಲನಾಗಿರು. ಅದ್ಭುತಕಾಂಡದಲ್ಲಿ ಹೇಳಿದುದನ್ನೆಲ್ಲಾನಾನು ನಿನಗೆ ತಿಳಿಸಿದೆನು. ಸೀತಾರಾಮರ ಜನ್ಮ ವೃತ್ತಾಂತವನ್ನು ಸಾಂಗವಾಗಿ ಹೇಳಿದೆನಷ್ಟೆ!

ನಾರದನಿಂದಶಪ್ತಳಾದ ಲಕ್ಷ್ಮಿಯು, ದಂಡಕಾವನದಲ್ಲಿದ್ದ ಮುನಿಗಳ ಶೋಣಿತ ನಿಮಿತ್ತದಿಂದ ಮಂಡೋದರಿಯ ಗರ್ಭಸ್ಥಿತಿಯನ್ನು ಹೊಂದಿದಳು. ಭಾರ್ಗವನಿಗೆ ಶ್ರೀರಾಮನ ವಿಶ್ವರೂಪ ವಿಲೋಕನವು ಸಮನಿಸಿತು. ಋಷ್ಯಮೂಕದಲ್ಲಿದ್ದ ಸುಗ್ರೀವನೊಡನೆ ಭಿಕ್ಷುರೂಪದಿಂದ ಬಂದ ಹನುಮಂತನಮೂಲಕ ಶ್ರೀರಾಮನಿಗೆ ಸಖ್ಯವುಂಟಾಯಿತು. ಲಕ್ಷ್ಮಣನು ಸಮುದ್ರವನ್ನು ಒಣಗಿಸಿದನು. ಶ್ರೀರಾಮನು ರಾಜ್ಯವನ್ನುಹೊಂದಿ, ಮುನಿ

ಗಳ ಸವಿಸ್ತಾರದಲ್ಲಿ ಸೀತೆಯು ಹೇಳಿದ ಸಹಸ್ರಕಂಠನ ವೃತ್ತಾಂತವನ್ನು ಕೇಳಿ ಮಾನಸೋತ್ತರ ಶೈಲದಲ್ಲಿದ್ದ ಅವನಸದಳವನ್ನು ಕುರಿತು ಹೊರ ಟಸು. ಸೀತೆಯು ಶಕ್ತಿರೂಪವನ್ನು ಹೊಂದಿ ರಾವಣನ ವಧೆಯನ್ನು ಮಾಡಿದುದನ್ನು ರಾಮನು ಕಂಡನು. ಅಲ್ಲಿಂದ ಹಿಂದಿರುಗಿ ಅಯೋಧ್ಯೆಗೆ ಬಂದನು. ಇವೇಮೊದಲಾದ ಸಂಗತಿಗಳೆಲ್ಲವೂ ನಿರೂಪಿಸಲ್ಪಟ್ಟವೆ. ಈ ವೃತ್ತಾಂತವನ್ನು ಕೇಳಿದವರೂ ಪಠಿಸಿದವರೂ ತಮ್ಮ ಇಷ್ಟಾರ್ಥ ವನ್ನುಪಡೆವರಲ್ಲದೆ ತೀರ್ಥಸ್ನಾನದ ಫಲವನ್ನೂ ಯುದ್ಧದಲ್ಲಿ ಜಯವನ್ನೂ ಯಜ್ಞಫಲವನ್ನೂ ಪಡೆಯುವರು. ಭಕ್ತಿಯುಕ್ತರಾಗಿ ನಿತ್ಯವೂ ಪಠಿಸಿದರೆ ಮುಕ್ತರಾಗುವರು.

ಅದ್ಭುತ ರಾಮಾಯಣದಲ್ಲಿ ೧೮ ನೆಯ ಅಧ್ಯಾಯವು ಮುಗಿದುದು.

ಶ್ರೀ ಕೃಷ್ಣಾರ್ಪಣಮಸ್ತು.

—೦—